

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 49 ಡಿಸೆಂಬರ್ 9, 1990 ರೂ 1.50

ಮಾನವ ಸರಪಳಿ ಮೊಳಗಿಗ ಮಾನವೀಯತೆಯ ಆಶಯ

ಕಣ್ಣು ಹಾಯಿಸುವವರೆಗೂ ಕಾಣುತ್ತಿದ್ದ ಜನಸಾಗರ. ಘೋಷಣೆಗಳ ಅಬ್ಬರವಿಲ್ಲ. ಕ್ಯಾಸೆಟ್‌ಗಳ ಚೀರಾಟವಿಲ್ಲ. ಸಂಜೆ ಐದು ಘಂಟೆಯಾಗುತ್ತಿದ್ದಂತೆಯೇ ಬೆಂಗಳೂರಿನ ಮೈಸೂರು ರಸ್ತೆಯ ಸಿರ್ಸಿ ಸರ್ಕಲ್‌ನಿಂದ ಶಿವಾಜಿನಗರದ ರಸಲ್ ಮಾರ್ಕೆಟ್‌ವರೆಗೆ ಶಿಸ್ತಾಗಿ ನಿಂತ ಜನ.

ದಿನವಿಡೀ ಕಾರ್ಖಾನೆಯಲ್ಲಿ ದುಡಿದು ಬೆಳಕಿಗೆ ಮರಳಿದ ಕಾರ್ಮಿಕರು, ಹೊಲಗಳಿಂದ ನೇರವಾಗಿ ಬಂದವರು, ಕಛೇರಿಗಳಲ್ಲಿ ದುಡಿದು ಬಂದವರು, ಮಕ್ಕಳನ್ನು ಶಾಲೆಯಿಂದ ಕರೆದುಕೊಂಡು ಬಂದ ಮಹಿಳೆಯರು, ಸಮವಸ್ತ್ರದಲ್ಲಿದ್ದು ಉತ್ಸಾಹದಿಂದ ಘೋಷಣೆ ಕೂಗುತ್ತಿದ್ದ ವಿದ್ಯಾರ್ಥಿಗಳು ಹುಮ್ಮಸ್ಸಿನುವಕರು, ಸಾಹಿತಿಗಳು, ಪತ್ರಕರ್ತರು, ಕಲಾವಿದರು ಎಲ್ಲರೂ "ಮಾನವೀಯತೆಯ ಪರವಾಗಿ ನಾವಿದ್ದೇವೆ" ಎಂದು ಸಾರಲು ಬೆಂಗಳೂರಿನ ಬೀದಿ ಬೀದಿಗಳಲ್ಲಿ ಸಾಲಾಗಿ ನಿಂತಿದ್ದರು.

ಸ್ವಲ್ಪ ದಿನಗಳ ಹಿಂದೆ ರಾಮನಗರ, ಚನ್ನಪಟ್ಟಣ, ಕೋಲಾರ, ಮುಳಬಾಗಿಲಿನಲ್ಲಿ ಕೋಮುಗಲಭೆಗಳಿಂದ ಸತ್ತವರ ನಿಟ್ಟುಸಿರು ಅವರ ಬೆನ್ನಿಗಿತ್ತು. ಗರ್ಭಿಣಿ ಮಹಿಳೆಯನ್ನು ಬೆತ್ತಲೆ ಮಾಡಿ ಕಂಬಕ್ಕೆ ಕಟ್ಟಿಹಾಕಿದಾಗ ಆಕೆಯ ಕಣ್ಣಲ್ಲಿ ಚಿಮ್ಮಿದ ಕಣ್ಣೀರು ಅವರೊಂದಿಗಿತ್ತು. ದಿನದ ಊಟಕ್ಕಾಗಿ ದಿನವಿಡೀ ದುಡಿಯುತ್ತಿದ್ದ ಜನರು ಆಯಾಸ ಮರೆಯಲು ಮನೆಗೆ ಮರಳಿದಾಗ ಸುಟ್ಟ ತಮ್ಮ ಮನೆಗಳು ಕರುಕು ನೆನಪುಗಳು ಅವರೊಂದಿಗಿತ್ತು. ಒಡೆದಮನೆ-ಒಡೆದಮನ ಎಲ್ಲವನ್ನೂ ಒಂದು ಮಾಡುವತ್ತ ಧೈರ್ಯ ತುಂಬಲು ಸಾವಿರಾರು ಜನರು ಸಜ್ಜಾಗಿ ನಿಂತಿದ್ದರು.

"ನಮ್ಮಲ್ಲಿಲ್ಲಾ ಹಿಂದೂ ರಕ್ತ, ನಮ್ಮಲ್ಲಿಲ್ಲಾ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲಾ ಕ್ರೈಸ್ತ ರಕ್ತ, ನಮ್ಮಲ್ಲಿರುವುದು ಮಾನವ ರಕ್ತ, ಮಾನವೀಯತೆ ಜಿಂದಾಬಾದ್" ಎಂದು ಘೋಷಣೆ ಕೂಗುತ್ತಿದ್ದ "ಮಾನವೀಯತೆಯ ಬಂಧುಗಳು" ಮುಂದಿನ ಭಾರತದ ಆಶಾಕಿರಣವಾಗಿದ್ದರು.

ಡಿಸೆಂಬರ್ 6 –

ಕರಸೇವೆ ಕೈಬಿಡುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಾದಿಯಾಗಿ ಭಾರತದ ಎಲ್ಲಾ ಜಾತ್ಯಾತೀತ ಶಕ್ತಿಗಳು ಮಾಡಿದ ಮನವಿಯನ್ನು ವಿಶ್ವ ಹಿಂದೂ ಪರಿಷತ್ ಧಿಕ್ಕರಿಸಿ ನಡೆದ ದಿನ. ಕಾರಸೇವೆ ನೆಪದಲ್ಲಿ ದೇಶದಲ್ಲಿ ದಳ್ಳುರಿ ಹಚ್ಚಿ ಅನೇಕ ಅಮಾಯಕ ಜೀವಗಳನ್ನು ಇರಿದು ಕೊಂದು ಮತ್ತೂ ತನ್ನ ರಾಕ್ಷಸೀ ದಾಹ ತಣಿಸಿಕೊಳ್ಳಲು ಹೊರಟ ದಿನ.

ಡಿಸೆಂಬರ್ 6-

ಇಡೀ ದೇಶದ ಜಾತ್ಯಾತೀತ ಜನತೆಯ ಭಾವನೆಗಳು ಗರಿಯೊಡದ ದಿನ. ನೊಂದ ಮುಸ್ಲಿಂ, ಸಿಖ್ ಮುಂತಾದ ಜನತೆ ತಮ್ಮ ಬೆಂಬಲಕ್ಕೆ ಹಲವರು ಇದ್ದಾರೆ ಎಂದು ಕಂಡುಕೊಂಡ ದಿನ. ರಾಷ್ಟ್ರದಲ್ಲಿ ಅಸಂಖ್ಯಾತ ಮಂದಿ ಮಾನವೀಯತೆಯ ಪರವಾಗಿ ಇದ್ದಾರೆ ಎಂದು ಸಾರಿದ ದಿನ.

ದೇಶದ ಐಕ್ಯತೆಯನ್ನು ರಕ್ಷಿಸಲು, ಕೋಮುಸಾಮರಸ್ಯವನ್ನು ಕಾಪಾಡಲು ದೇಶದಾದ್ಯಂತ ಮಾನವ ಸರಪಳಿ ರಚಿಸುವಂತೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನೀಡಿದ ಕರೆಗೆ ಅತ್ಯುತ್ಸಾಹಕರ ಪ್ರತಿಕ್ರಿಯೆ. ಸಿಐಟಿಯು, ಡಿವೈಎಫ್‌ಐ, ಎಸ್‌ಎಫ್‌ಐ, ಹೋಟೆಲ್ ಕಾರ್ಮಿಕರ ಸಂಘ, ಎಐಡಿಡಬ್ಲ್ಯು ಎ, ಎಐಕೆಎಸ್‌ನ ಸಂಗಾತಿಗಳು ಮಾನವ ಸರಪಳಿಯಲ್ಲಿ ಕೈಜೋಡಿಸಿದರು. ಜನತಾದಳ, ವಿವಿಧ ಕನ್ನಡ ಸಂಘಟನೆಗಳು ಮಾನವ ಸರಪಳಿಯ ಆಗತ್ಯ ಮನಗಂಡಿದ್ದವು.

" ಮಂದಿರವಲ್ಲೇ ಕಟ್ಟುವೆವು" ಎನ್ನುವ ಬಿಜೆಪಿ ಘೋಷಣೆ ಬಗ್ಗುಬಡಿದು, "ಕಟ್ಟುವೆವು ನಾವು ಹೊಸ ನಾಡೊಂದನು" ಎಂಬ ಆಶಯಕ್ಕೆ ಮಾನವ ಸರಪಳಿ ಹಾದಿ ಮಾಡಿಕೊಟ್ಟಿತು.

ರಸೆಲ್ ಮಾರ್ಕೆಟ್‌ನಿಂದ ಸಿರ್ಸಿ ಸರ್ಕಲ್‌ವರೆಗೂ ಕೆಂಬಾವುಟಗಳ ಸಾಲು. ಕೆಂಬಾವುಟದ ಕೆಳಗೆ ಕೈಜೋಡಿಸಿದ ಸಂಗಾತಿಗಳು. ಸಾಲಿನಲ್ಲಿ ಬುರ್ಖಾ ತೊಟ್ಟ ಹೆಂಗಳೆಯರು, ತಲೆಗೆ ಟೋಪಿ ಇಟ್ಟ ಮುಸ್ಲಿಂ ಬಂಧುಗಳನ್ನು ಕಂಡಾಗ "ಹಿಂದು- ಮುಸ್ಲಿಂ ಭಾಯಿ ಭಾಯಿ" ಎಂಬ ಘೋಷಣೆಗೆ ನಿಜ ಅರ್ಥ ಎದ್ದು ಕಾಣುತ್ತಿತ್ತು. ಕೋಮು ಸಾಮರಸ್ಯ, ದೇಶದ ಸಮಗ್ರತೆಯನ್ನು ರಕ್ಷಿಸುವ ಪ್ರತಿಜ್ಞೆಯನ್ನು ಸ್ವೀಕರಿಸಲಾಯಿತು.

ಸರಪಳಿಗೆ ಕೈಜೋಡಿಸಿದವರ ಮೈಮನಸ್ಸಿನಲ್ಲಿ ನಾವೆಲ್ಲರೂ ಒಂದೇ ಎಂಬ ಮಿಂಚು ಹುಣುಕು ಇನ್ನೂ ಹರಿದಾಡುತ್ತಿತ್ತು. ಹೊಸ ಆಶಯ, ಹುಮ್ಮಸ್ಸಿನೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

ಡಿಎಂಕೆ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷಗಳೂ ಸರಪಳಿಗೆ ಬೆಂಬಲ ನೀಡಿದ್ದವು.

ಶಿವಾಜಿನಗರದ ರಸೆಲ್ ಮಾರುಕಟ್ಟೆ ಬಳಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಎಸ್.ಸೂರ್ಯನಾರಾಯಣ ರಾವ್ ಅವರು ಮತಾಂಧ ಶಕ್ತಿಗಳ ವಿರುದ್ಧ ದುಡಿಯುವ ವರ್ಗದ ಜಾತ್ಯಾತೀತ ಮನೋಭಾವದ ಜನತೆ ಯಾವ ತ್ಯಾಗಕ್ಕಾಗಿದರೂ ಸಿದ್ಧರಾಗಬೇಕೆಂದು ಕರೆ ನೀಡಿದರು. ಜನತಾದಳ ಶಾಸಕ ರೋಷನ್ ಬೇಗ್ ಹಾಗೂ ಇತರರೂ ಮಾತನಾಡಿದರು. ಮಾಜಿ ಶಾಸಕ ಹಮೀದ್ ಷಾ ಜನತಾದಳದ ಮೋಹನ್ ದೇವ ಆಳ್ವ ಅವರೂ ಮಾತನಾಡಿದರು.

ಮತಾಂಧರ ನುಗ್ಗಾಟ : ಮುರಿಯದ ಮಾನವ ಸರಪಳಿ

ಯಶಸ್ವಿ ಮಾನವ ಸರಪಳಿಯನ್ನು ಕಂಡು ಭಯಗೊಂಡ ಮತಾಂಧ ಶಕ್ತಿಗಳು ಮಂಗಳೂರಿನಲ್ಲಿ ಮಾನವ ಸರಪಳಿ ಮುರಿಯಲು 'ಯತ್ನ ನಡೆಸಿದ ವರದಿಯಾಗಿದೆ. ಮಂಗಳೂರಿನ ನೆಹರೂ ಮೈದಾನದಲ್ಲಿ ನಡೆದ ಭಾರಿ ಬಹಿರಂಗ ಸಭೆಯನ್ನು ಕೆಡಿಸಲು ಕಲ್ಲು ತೂರಾಟ ನಡೆಸಿದರು.

ಮಂಗಳೂರಿನ ಎಲ್ಲೆಡೆಯಿಂದ ಆಗಮಿಸಿದ ವಿವಿಧ ಧರ್ಮಗಳ ಜನತೆ ಏಕತೆಗಾಗಿ ಸಾಲುಗಟ್ಟಿ ನಿಂತಾಗ ರಾಮ ಭಜನೆ ಮಾಡುತ್ತಾ ಬಂದ ಗುಂಪೊಂದು ಮಾನವ ಸರಪಳಿಯ ಮೇಲೆ ನುಗ್ಗಾಟ ನಡೆಸಿತು. ಸರಪಳಿಯಲ್ಲಿದ್ದ ಸಂಗಾತಿಗಳು ಈ ವಿಭಜಕ ಶಕ್ತಿಗಳ ಪ್ರಯತ್ನವನ್ನು ಹಿಮ್ಮೆಟ್ಟಿಸಲು ಯಶಸ್ವಿಯಾದರು

ಮಾನವ ಸರಪಳಿ ಕಾರ್ಯಕ್ರಮದ ಬಳಿಕ ನೆಹರೂ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಗೆ ಕಲ್ಲು ತೂರಲು ಯತ್ನಿಸಿದ ಗುಂಪೊಂದನ್ನು ಚದುರಿಸಲು ಪೋಲೀಸರು ಒಮ್ಮೆ ಲಾಠಿ ಪ್ರಹಾರ ನಡೆಸಬೇಕಾಯಿತು.

ಸಭೆ ನಡೆಯುತ್ತಿದ್ದಲ್ಲಿಗೆ ನುಗ್ಗಲು ಯತ್ನಿಸಿದ ಗುಂಪನ್ನು ಪೊಲೀಸರು ಚದುರಿಸಿದರು. ಈ ಸಂದರ್ಭದ ನುಗ್ಗಾಟ ಜಗ್ಗಾಟದಲ್ಲಿ ಇಬ್ಬರಿಗೆ ಸಣ್ಣ ಪುಟ್ಟ ಗಾಯಗಳಾದವು ಎಂದು 'ಉದಯವಾಣಿ' ವರದಿ ಮಾಡಿದೆ.

ಬಾವುಟ ಗುಡ್ಡೆಯ ಈದ್ಗಾ ಪ್ರಾರ್ಥನಾ ಮಂದಿರದಿಂದ ಹಂಪನಕಟ್ಟೆ, ಮಿಲಾಗ್ರಿಸ್ ಚರ್ಚ್ ಮೂಲಕ ಶರವು ಗಣಪತಿ ದೇವಸ್ಥಾನದವರೆಗೆ ಮಾನವ ಸರಪಳಿ ಹಮ್ಮಿಕೊಳ್ಳಲಾಗಿತ್ತು. ಪುಟ 8 ಕ್ಕೆ

ಅದೋ ನೋಡಿ ಭೂಪಾಲದಲ್ಲಿ ಕೋಮುವಾದಿಗಳ "ಧಾರ್ಮಿಕ" ಮುಖವಾಡ ಕಳಚಿಬಿತ್ತು

ಡಿಸೆಂಬರ್ ಎರಡು. ಮಧ್ಯಪ್ರದೇಶದ ರಾಜಧಾನಿ ಭೂಪಾಲದ ರೈಲ್ವೆ ನಿಲ್ದಾಣ, ರೈಲೊಂದು ಬರುತ್ತಿದ್ದಂತೆ ಅಲ್ಲಿ ನೆರೆದಿದ್ದ ಕೆಲ ಜನರಿಂದ ಕೂಗು--ಘೋಷಣೆಗಳು. ಅಷ್ಟು ಮಾತ್ರವಲ್ಲ ಕಲ್ಲುಗಳ ತೂರಾಟದ ಆರಂಭ, ರೈಲಲ್ಲಿ ಬಂದವರಿಗಾಗಿ ಸಮೀಪದಲ್ಲಿ ಕಾಯುತ್ತಿದ್ದ ಕಾರಿನ ಮೇಲೆ ಆಸಿಡ್ ಬಾಂಬ್‌ಗಳ ಎಸೆತ. ಭಾಷಣಕ್ಕೆ ವಿರ್ಪಾಡಾಗಿದ್ದ ಚಪ್ಪರಕ್ಕೆ ಬೆಂಕಿ, ಧ್ವನಿ ವರ್ಧಕ ನಾಶ................

ಕೆಲವೇ ದಿನಗಳ ಹಿಂದಿನವರೆಗೆ ಈ ದೇಶದ ಪ್ರಧಾನಿಯಾಗಿದ್ದ ವಿಶ್ವನಾಥ ಪ್ರತಾಪ್ ಸಿಂಗ್, ಜನತಾ ದಳದ ಅಧ್ಯಕ್ಷ ಎಸ್.ಆರ್. ಬೊಮ್ಮಾಯಿ, ರಾಷ್ಟ್ರೀಯ ರಂಗದ ಅನೇಕ ಮುಖಂಡರು--ಇವರುಗಳೇ ಈ ರೀತಿಯ ದಾಳಿಗೆ ಒಳಗಾದವರು.

ಪ್ರಜಾಪ್ರಭುತ್ವಕ್ಕೆ ಚಿಕ್ಕಾಸು ಗೌರವ ನೀಡದ, ನೈತಿಕವಾಗಿ ದಿವಾಳಿ ಎದ್ದವರು ಮಾತ್ರವೇ ನಡೆಸಬಹುದಾದಂಥ,(ಅದೂ ರಾಷ್ಟ್ರೀಯ ಮುಖಂಡರ ಮೇಲೆ) ಈ ಆಕ್ರಮಣದ ಪ್ರಾಯೋಜಕರು: ಹಿಂದೂ ಧರ್ಮ ರಕ್ಷಣೆಗೆ ಸ್ವಯಂ ಘೋಷಿತ ಗುತ್ತಿಗೆದಾರರು, ಮರ್ಯಾದಾ ಪುರುಷೋತ್ತಮ ಶ್ರೀರಾಮನ ನೈಜ ಭಕ್ತರು, ತಲೆತಗ್ಗಿಸುವಂತೆ ಮಾಡುವ ಸೋಗಿನ ಭಕ್ತರು, ಅರ್ಥವಾಯಿತಲ್ಲ, ದೇಶದಲ್ಲಿ ಕೋಮು ದಳ್ಳುರಿಯ ಕಿಡಿಯನ್ನು ಹಾರಿಸಿ ಸಾವಿರೀರು ಮುಗ್ಧ ಜನರನ್ನು ಬಲಿ ತೆಗೆದ ವಿಶ್ವ ಹಿಂದೂ ಪರಿಷತ್(ವಿಎಚ್‌ಪಿ) ಮತ್ತು ಭಾರತೀಯ ಜನತಾ ಪಕ್ಷದ, ಆರ್‌ಎಸ್‌ಎಸ್, ಭಜರಂಗದಳ ಕಾರ್ಯಕರ್ತರು ಇವರೆಂದು.

ಕೋಮುವಾದಿಗಳ ಆಟ ಸಾಗಲು ಎಷ್ಟು ಮಾತ್ರಕ್ಕೂ ಅವಕಾಶ ಕೊಡುವುದಿಲ್ಲ ಎಂದು ಸಾರಿ ಜಾತ್ಯಾತೀತತೆ, ರಾಷ್ಟ್ರೀಯ ಐಕ್ಯತೆ ರಕ್ಷಣೆಯ. ಉದ್ದೇಶದಿಂದ ರಾಷ್ಟ್ರೀಯ ರಂಗ ಸರಕಾರವನ್ನೇ ತ್ಯಾಗ ಮಾಡಿದ ವಿ.ಪಿ.ಸಿಂಗ್ ತಂಡದ ಮೇಲೆ ನಡೆದ ಹಲ್ಲೆ ದೇಶದ ಬಹುಪಾಲು ಜನತೆಯ ಧಾರ್ಮಿಕ ಭಾವನೆಗಳೊಂದಿಗೆ ರಾಜಕೀಯ ತೀವ್ರ ತಿಂದಾಟೀಯ. ಈ ಘಟನೆಯಲ್ಲಿ ಆಟ ಅರಿ, ಅಧಿಕಾರ ಗಿಟ್ಟಿಸಿಕೊಳ್ಳುವ ತಮ್ಮ ತಂತ್ರ ಹೆಚ್ಚೆಚ್ಚು ಜನರಿಗೆ ಅರ್ಥವಾಗುತ್ತಿದೆಯೆಂದು ಕಂಡುಕೊಂಡು ಹತಾಶಗೊಂಡ ಶಕ್ತಿಗಳು ಮುಂದಿನ ದಿನಗಳಲ್ಲಿ ಹಿಡಿಯಬಹುದಾದ ದಾರಿಯ ದಿಕ್ಸೂಚಿ ಇದು.

ಒಂದು ಗಮನಾರ್ಹ ಅಂಶವೆಂದರೆ, ವಿ.ಪಿ.ಸಿಂಗ್ ಅಂದು ಭೂಪಾಲ್‌ಗೆ ತೆರಳಿದ್ದು ಭೂಪಾಲ್ ವಿಷಾನಿಲ ದುರಂತದ ಆರನೇ ವಾರ್ಷಿಕ ದಿನದ ಅಂಗವಾಗಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಲು. ಅವರ ಪ್ರತಿಭಟನಾರ್ಥ ಕಪ್ಪು ಬಾವುಟ ಪ್ರದರ್ಶನದ ಹೆಸರಿನಲ್ಲಿ ಬಿಜೆಪಿ, ವಿಎಚ್‌ಪಿ ಕಾರ್ಯಕರ್ತರು ನಡೆಸಿದ ಹಲ್ಲೆ ಈ ಪಕ್ಷ, ಸಂಘಟನೆಗಳ ನೈತಿಕ ದಿವಾಳಿಕೋರ ತನವನ್ನು ಪ್ರತಿಬಿಂಬಿಸುತ್ತದೆ.

ಧರಣಿ: ಈ ಘಟನೆಯನ್ನು ಪ್ರತಿಭಟಿಸಲು ವಿ.ಪಿ.ಸಿಂಗ್, ಬೊಮ್ಮಾಯಿ ಸಹಿತ ಅನೇಕ ಜನತಾದಳ ಕಾರ್ಯಕರ್ತರು ಮಧ್ಯಪ್ರದೇಶ ಮುಖ್ಯಮಂತ್ರಿ ಸುಂದರಲಾಲ್ ಪಟ್ವಾ ಅವರ ನಿವಾಸದ ಮುಂದೆ ಉಪವಾಸ ಸತ್ಯಾಗ್ರಹ ನಡೆಸಿದರು. ದಳ, ರಾಷ್ಟ್ರೀಯ ರಂಗದ ಬೆಂಬಲಿಗರು ಈ ಸುದ್ದಿ ಕೇಳಿ ಬರತೊಡಗಿದಂತೆ ಕೊನೆಗೂ ಬಿಜೆಪಿ ಮುಖ್ಯಮಂತ್ರಿ ಪಟ್ವಾ ಮನೆಯಿಂದ ಹೊರಬಂದು ಕ್ಷಮೆ ಕೋರಿ ಸಿಂಗರ ಸಾರ್ವಜನಿಕ ಸಭೆಗೆ ಬೇರೆ ಕಡೆ ಸ್ಥಳ ಒದಗಿಸುವುದಾಗಿ ಹೇಳಿದರಂತೆ. ಆ ಮೇಲೆ ಧರಣಿಯನ್ನು ರದ್ದುಪಡಿಸಲಾಯಿತು. ಅನಂತರ ಮುಖ್ಯಮಂತ್ರಿ ನಿವಾಸದ ಬಳಿಯ ಚೌಕದಲ್ಲಿ ನಡೆದ ಸಭೆಯಲ್ಲಿ ವಿ.ಪಿ.ಸಿಂಗ್ ಪುಟ 8 ಕ್ಕೆ

'ಶಿಲಾನ್ಯಾಸ'ಕ್ಕೆ ಅವಕಾಶ ಮಾಡಿದವರ ಹೊಸ ನಾಟಕ

ಕಳೆದ ವರ್ಷ 'ಶಿಲಾನ್ಯಾಸ' ಸಂದರ್ಭದಲ್ಲಿ ಮಾಡಿದಂತೆ ಈಗಲೂ ಮಾಡಲು ಕಾಂಗ್ರೆಸ್(ಐ) ಅಧ್ಯಕ್ಷ ರಾಜೀವ್ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕಟ್ಟಲು ರಾಮ ಮಂದಿರವನ್ನು ಕೆಡವಲಾಯಿತೇ ಎಂದು ತನಿಖೆ ನಡೆಸಲು ಆಯೋಗ ನೇಮಿಸಬೇಕೆಂಬ ಅವರ ಸಲಹೆ ಬಿಜೆಪಿ, ವಿಎಚ್‌ಪಿಯೊಂದಿಗೆ ಮತ್ತೊಮ್ಮೆ ರಾಜಿ ಮಾಡಿಕೊಳ್ಳುವ ಅವಕಾಶ ಗಿಟ್ಟಿಸುವ ಯತ್ನ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇಎಂಎಸ್ ನಂಬೂದರಿ ಪಾದ್ ಹೇಳಿದ್ದಾರೆ.

ಕಾನೂನಿನ ಪ್ರಕಾರ ವಕ್ಫ್ ಬೋರ್ಡಿನ ಆಸ್ತಿಯಾದ ಆದು ವಿವಾದಗ್ರಸ್ತ ಸ್ಥಳ, ಶಿಲಾನ್ಯಾಸ ಮಾಡಿದ ಜಾಗ ಕೂಡಾ. ಆ ಬಗ್ಗೆ ನಿರ್ಣಯ ಕೊಡಲು ರಾಜೀವ್ ಗಾಂಧಿ ಯಾರು ಎಂದು ನಾಗಪುರದಲ್ಲಿ ಪತ್ರಿಕಾ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತಾ ಅವರು ಪ್ರಶ್ನಿಸಿದರು.

ಒಂದು ಮುಸ್ಲಿಂ ಆಸ್ತಿಯ ಮೇಲೆ ನ್ಯಾಯಾಲಯದ ತೀರ್ಪಿಲ್ಲದೆ ಅಥವಾ ಕಾನೂನು ಬದ್ಧ ಒಡೆಯರೊಂದಿಗೆ ಇತ್ಯರ್ಥವಿಲ್ಲದೆ ವಿಎಚ್‌ಪಿಗೆ 'ಕರಸೇವೆ' ನಡೆಸಲು ಯಾವ ಹಕ್ಕೂ ಇಲ್ಲ ಎಂದ ಅವರು ವಿಎಚ್‌ಪಿ ಬಿಜೆಪಿ ಇವರದು ದಾರಿಗಳಲ್ಲಿ ಯಾವುದಕ್ಕೂ ಸಿದ್ಧವಿಲ್ಲದಲ್ಲ ಎಂದರು.

"ಶ್ರೀಯುತ ರಾಜೀವ್ ಗಾಂಧಿ ಮತ್ತು ಶ್ರೀಯುತ ಎನ್.ಡಿ.ತಿವಾರಿ ಬಿಜೆಪಿ, ವಿಎಚ್‌ಪಿ ವಿರುದ್ಧ ಗುಡುಗುತ್ತಾರೆ. ಆದರೆ ವಾಸ್ತವ ಜೀವನದಲ್ಲಿ ಅವರೊಡನೆ ರಾಜಿ ಬಯಸುತ್ತಾರೆ. ಕಳೆದ ವರ್ಷ ವಿವಾದಗ್ರಸ್ತ ಸ್ಥಳದಲ್ಲಿ 'ಶಿಲಾನ್ಯಾಸ'ಕ್ಕೆ ಅವಕಾಶ ಕೊಟ್ಟವರು ಎನ್.ಡಿ.ತಿವಾರಿಯಾದರೆ ಈಗ ಶಿಲಾನ್ಯಾಸ ನಡೆದ ಸ್ಥಳದಲ್ಲಿ ಕರಸೇವೆಗೆ ಅವಕಾಶ ಕೊಡುವ ಸೂಚನೆ ನೀಡುತ್ತಿರುವವರು ರಾಜೀವ್‌ಗಾಂಧಿ" ಎಂದು ಇ.ಎಂ.ಎಸ್. ಹೇಳಿದರು, ಚಂದ್ರಶೇಖರ್ ಕಾಂಗ್ರೆಸ್(ಐ) ವಿರೋಧಿ ವೇದಿಕೆಯಿಂದ ಚುನಾವಣೆ ಗೆದ್ದು ಅವರೊಡನೆ ಕೈಮಿಲಾಯಿಸಿದ್ದು ಸಂಪೂರ್ಣ ತಪ್ಪು ಎಂದ ಅವರು "ಚಂದ್ರಶೇಖರ್ ಗೌರವಾನ್ವಿತ ವ್ಯಕ್ತಿ. ತಮ್ಮ ತಪ್ಪನ್ನು ಸರಿಪಡಿಸಿಕೊಳ್ಳುತ್ತಾರೆ ಎಂಬ ನಿರೀಕ್ಷೆ ನನಗಿದೆ" ಎಂದರು.

ಭೂಪಾಲದಲ್ಲಿ ವಿ.ಪಿ.ಸಿಂಗ್ ಮೇಲೆ ನಡೆದ ಹಲ್ಲೆಯ ಬಗ್ಗೆ ಪ್ರತಿಕ್ರಿಯಿಸುತ್ತಾ ವಿಎಚ್‌ಪಿ ಕಾರ್ಯಕರ್ತರು ಅಯೋಧ್ಯೆಯ ಘಟನೆಗಳಿಂದ ಕ್ಷುದ್ರರಾಗಿದ್ದಾರೆ ಎಂದಿರುವ ಅಲ್ಲಿನ ಮುಖ್ಯಮಂತ್ರಿ ಪಟ್ವಾರವರ ಟೀಕೆಗೆ ಆ ಹಲ್ಲೆಗಿಂತಲೂ ಹೆಚ್ಚು ದುರದೃಷ್ಟಕರ ಎಂದರು ಇಡೀ ಹಿಂದೂ ಮನಸ್ಸನ್ನು ವಿಹಿಂಪಗೀಕರಿಸಲಾಗುತ್ತಿದೆ ಎಂದು ಟೀಕೆ ವ್ಯಕ್ತಪಡಿಸಿದರು.

ಅಕ್ಟೋಬರ್ 2 ರಿಂದ ನವೆಂಬರ್ 14 ರವರೆಗೆ ಸಾಕ್ಷರತಾ ಆಂದೋಲನ ದೇಶದೆಲ್ಲೆಡೆ ನಡೆದಿದೆ ಕರ್ನಾಟಕದಲ್ಲೂ ನಡೆದಿದೆ. 'ಭಾರತ ವಿಜ್ಞಾನ ಜಾಥಾ ' ನಡೆದಿದೆ. ಈ ಬಗ್ಗೆ ಕೆಲವು ವರದಿಗಳನ್ನು ಈಗಾಗಲೇ ಓದಿರುವಿರಿ, ಇಲ್ಲಿ ತುಮಕೂರು ಹಾಗೂ ಬೆಂಗಳೂರಿನಲ್ಲಿ ನಡೆದ ಸಮಾರೋಪ ಸಮಾರಂಭಗಳ ವರದಿಯಿದೆ. ಜತೆಗೆ ಗುಲ್ಬರ್ಗಾದ ಕಲಾ ಜಾಥಾದಲ್ಲಿ ಭಾಗವಹಿಸಿದ ಒಬ್ಬ ಕಲಾವಿದರು ತಮ್ಮ ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಾರೆ.



ಜ್ಞಾನ ವಿಜ್ಞಾನ ಜಾಥಾ

ತುಮಕೂರಿನಲ್ಲಿ

ಅಖಿಲ ಭಾರತ ಜ್ಞಾನ ವಿಜ್ಞಾನ ಸಂಘಟನೆ ಅಕ್ಟೋಬರ್ 2ರಿಂದ ನವೆಂಬರ್ 14 ರವರೆಗೆ ಸುಮಾರು 40 ದಿನಗಳ ಕಾಲ ಭಾರತದ ಎಲ್ಲಾ ಜಿಲ್ಲೆಗಳಲ್ಲೂ 'ರಾಷ್ಟ್ರೀಯ ಸ್ವಾವಲಂಬನೆ ಸಮಗ್ರತೆ ಹಾಗೂ ಕೋಮು ಸೌಹಾರ್ದಕ್ಕಾಗಿ ಸಾಕ್ಷರತೆ ಮತ್ತು ವಿಜ್ಞಾನ' ಎಂಬ ಘೋಷಣೆಯೊಂದಿಗೆ ತುಮಕೂರು ಜಿಲ್ಲೆಯ 128 ಗ್ರಾಮೀಣ ಕೇಂದ್ರಗಳಲ್ಲಿ ಈ ಜಾಥಾದ ಹಲವಾರು ಚಟುವಟಿಕೆಗಳು ಯಶಸ್ವಿಯಾಗಿ ನಡೆಯಿತು. ಜಾಥಾದ ಮುಖ್ಯ ಉದ್ದೇಶ ಸಾಕ್ಷರತೆಯ ಪ್ರಾಮುಖ್ಯತೆ, ಮಹಿಳಾ ಶಿಕ್ಷಣ, ನಾವು ಜೀವಿಸುವ ಜಗತ್ತು, ಪ್ರಾಥಮಿಕ ಆರೋಗ್ಯ, ಹಾಗೂ ಸುರಕ್ಷಾ ಚುಚ್ಚು ಮದ್ದು ಮುಂತಾದ ವಿಷಯಗಳ ಬಗ್ಗೆ ಜನರಿಗೆ ತಿಳುವಳಿಕೆಯನ್ನು ನೀಡುವುದಾಗಿತ್ತು. ಬೀದಿ ನಾಟಕ, ಹಾಡು, ಕೋಲಾಟ, ಚಲನಚಿತ್ರ, ಕರಪಾಲ ಮೇಳ, ವೀರಗಾಸೆ, ಭಿತ್ತಿಪತ್ರ ಪ್ರದರ್ಶನ, ಸ್ಲೈಡ್ ಪ್ರದರ್ಶನ, ಬಯಲಾಟ, ಮುಂತಾದ ಆಕರ್ಷಕ ಮಾಧ್ಯಮಗಳ ಮೂಲಕ ಈ ಜನಜಾಗೃತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಇದಲ್ಲದೆ 128 ಕೇಂದ್ರಗಳ ಸುತ್ತಮುತ್ತಲಿನ ಸುಮಾರು ಒಂದು ಸಾವಿರ ಹಳ್ಳಿಗಳಲ್ಲಿ ಜನಪ್ರಿಯ ವಿಜ್ಞಾನ ಉಪನ್ಯಾಸ ಹಾಗೂ ಭಿತ್ತಿಚಿತ್ರ ಪ್ರದರ್ಶನಗಳು ಹಾಗೂ ಸೆಪ್ಟೆಂಬರ್ 1ರಿಂದ 8 ರವರೆಗೆ ಅಂತರರಾಷ್ಟ್ರೀಯ ಸಾಕ್ಷರತಾ ಸಪ್ತಾಹವನ್ನು ಆಚರಿಸಿ ಅನಕ್ಷರಸ್ಥರ ಗಣತಿ ಮತ್ತು ಅಕ್ಷರಸ್ಥರಾಗಲು ಇಚ್ಛಿಸುವವರ ಹೆಸರನ್ನೂ ಹಾಗೂ ಅನಕ್ಷರಸ್ಥರಿಗೆ ಸ್ವಯಂ ಸ್ಫೂರ್ತಿಯಿಂದ ಅಕ್ಷರ ಕಲಿಸಲು ಮುಂದಾಗುವ ಸ್ವಯಂ ಸೇವಕರ ಹೆಸರುಗಳನ್ನು ನೊಂದಾಯಿಸಿಕೊಳ್ಳಲಾಗಿದೆ.

ಜಾಥಾ ಕಾರ್ಯಕ್ರಮ ಇದ್ದ ಕೇಂದ್ರಗಳಲ್ಲಿ ಜನತೆ ತುಂಬಾ ಉತ್ಸಾಹದಿಂದ ಪಾಲ್ಗೊಂಡಿದ್ದಾರೆ. ಕೇಂದ್ರದ ಸುತ್ತಮುತ್ತಲಿನ ಹಳ್ಳಿಗಳಿಂದಲೂ ಜನರು ಆಗಮಿಸಿದ್ದು ಪ್ರತಿ ಕೇಂದ್ರಗಳಲ್ಲಿ ಪಡೆದ ಮಾಹಿತಿಯ ಪ್ರಕಾರ ಇಡೀ ಜಿಲ್ಲೆಯಾದ್ಯಂತ ಸುಮಾರು ಲಕ್ಷಕ್ಕೂ ಹೆಚ್ಚು ಜನರು ವೀಕ್ಷಿಸಿರುತ್ತಾರೆ.

ಜಾಥಾ ಹಾದು ಹೋಗುವ ಎಲ್ಲಾ ಕೇಂದ್ರಗಳಲ್ಲೂ ಸ್ಥಳೀಯ ಸಮಿತಿಗಳನ್ನು ರಚಿಸಿದ್ದು ಪ್ರತಿ ಕೇಂದ್ರದಲ್ಲೂ 4ರಿಂದ 20ಮಂದಿ ಕಾರ್ಯಕರ್ತರು ಜಾಥಾ ಯಶಸ್ಸಿಗೆ ದುಡಿದಿದ್ದಾರೆ. ಭಿತ್ತಿ ಚಿತ್ರ ಪ್ರದರ್ಶನದ ಜೊತೆಗೆ ವಿಜ್ಞಾನ ಪುಸ್ತಕಗಳ ಮಾರಾಟ ನಡೆಸಿದ್ದು ಸುಮಾರು 17,000 ರೂಗಳ 8,000 ಸಾವಿರ ಪುಸ್ತಕಗಳು ಮಾರಾಟವಾಗಿದೆ. ಪ್ರತಿ ಹಳ್ಳಿಯಲ್ಲೂ ಕಾರ್ಯಕ್ರಮದ ಕೊನೆಯಲ್ಲಿ ಜಾಥಾ ಯಶಸ್ಸಿಗಾಗಿ ಹಣ ಸಹಾಯಕ್ಕಾಗಿ ಮನವಿ ಮಾಡಿದಾಗ ಜನತೆ ಪ್ರತಿಕ್ರಿಯಿಸಿ ಸುಮಾರು 8000 ಸಾವಿರ ರೂಗಳನ್ನು ನೀಡಿದ್ದಾರೆ. ಎಲ್ಲಾ ಕಡೆಗಳಲ್ಲಿ ಜನತೆ ಉತ್ಸಾಹದಿಂದ ಜಾಥಾ ಕಲಾವಿದರನ್ನು ಸ್ವಾಗತಿಸಿದ್ದಾರೆ. ಕೆಲವೊಮ್ಮೆ ಚಿಮ್ಮಿದ ಜನರ ಉತ್ಸಾಹದ ನಡುವೆ ಕಲಾತಂಡದ ಉತ್ಸವವೂ ಇಮ್ಮಡಿಸಿ ಕೊಂಬು, ಕಹಳೆ, ಅರೆ ದೋಣು, ತಮ್ಮಟೆ ಹಾಗೂ ಪೂರ್ಣ ಕುಂಭ ಹೊತ್ತ ಹೆಣ್ಣು ಮಕ್ಕಳ ಹಿಂದೆ ಮೆರವಣಿಗೆಯಲ್ಲಿ ಸ್ವಾಗತಿಸಿದ್ದಾರೆ.

ಬೆಂಗಳೂರಿನಲ್ಲಿ

ಭಾರತ ಜ್ಞಾನ ವಿಜ್ಞಾನ ಜಾಥಾದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಮಿತಿಯು ಅಕ್ಟೋಬರ್ 2 ರಿಂದ ನವೆಂಬರ್ 14 ರವರೆಗೆ 44 ದಿನಗಳ ಕಾಲ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 6 ತಾಲ್ಲೂಕುಗಳ ಹಳ್ಳಿಗಳಲ್ಲಿ ನಡೆಸಿದ ಸಾಕ್ಷರತೆಯ ಕುರಿತಾದ ಹಾಡು ನಾಟಕಗಳನ್ನೊಳಗೊಂಡ ಜಾಥಾದ ಸಮಾರೋಪ ಸಮಾರಂಭ ನವೆಂಬರ್ 14 ರಂದು ಬೆಂಗಳೂರಿನ "ಯುವನಿಕ" ಸಭಾಂಗಣದಲ್ಲಿ ನಡೆಯಿತು. ಸಮಾರಂಭದ ಮೊದಲು ಹಾಗೂ ನಂತರ ನಾಟಕಗಳು ಮತ್ತು ಹಾಡುಗಳ ಕಾರ್ಯಕ್ರಮಗಳನ್ನೇ ಏರ್ಪಡಿಸಲಾಗಿತ್ತು.

ಸಮಾರೋಪ ಭಾಷಣ ಮಾಡಿದ ದಲಿತ ಕವಿ ಹಾಗೂ ಶಾಸಕರಾದ ಶ್ರೀ ಸಿದ್ದಲಿಂಗಯ್ಯ ನವರು ಅನಾದಿಕಾಲದಿಂದಲೂ ಅಕ್ಷರ ಜ್ಞಾನವನ್ನು ಕೇವಲ ಕೆಲವರಿಗೆ ಸೀಮಿತಗೊಳಿಸಿಕೊಂಡು ಬಂದ ಭಾರತೀಯ ಸಮಾಜ. ಈಗ ಜನರಿಗೆ ಅಕ್ಷರವನ್ನೂ ಕಲಿಯುವ ಬಯಕೆ ಇದ್ದರೂ ಸರ್ಕಾರ ಮತ್ತು ಈ ವ್ಯವಸ್ಥೆಯ ಕೆಲವು ಸ್ಥಾಪಿತ ಹಿತಾಸಕ್ತಿಗಳಿಂದಾಗಿ ಅದು ಸಾಧ್ಯವಾಗುತ್ತಿಲ್ಲವೆಂದು ವಿಷಾದಿಸಿದರು.

ಮುಖ್ಯ ಅತಿಥಿಗಳಾಗಿದ್ದ ಚಲನಚಿತ್ರ ನಟ ಹಾಗೂ ನಿರ್ದೇಶಕರಾದ ಶ್ರೀ ಲೋಕೇಶ್‌ರವರು ಕಲಾವಿದರಿಗೆ ಪ್ರಶಸ್ತಿ ಪತ್ರಗಳನ್ನೂ ನೀಡಿ ಸಭೆಯನ್ನುದ್ದೇಶಿಸಿ ಶಿಕ್ಷಣವು ಇನ್ನೂ ಹಳೆಯಕಾಲದ ರೀತಿಯಲ್ಲೇ ಇದೆ. ಅದು ಬದಲಾಗಬೇಕು. ಆಗ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದು ತಿಳಿಸಿದರು.

ಸುಧಾ ವಾರಪತ್ರಿಕೆಯ ಉಪಸಂಪಾದಕರಾದ ಶ್ರೀಮತಿ ಆರ್.ಪೂರ್ಣಿಮರವರು ಮಾತನಾಡುತ್ತಾ ತುಂಬಾ ಹಿಂದಿನಿಂದಲೂ ನಮ್ಮ ಸಮಾಜ ಮಹಿಳೆಯರನ್ನು ಮತ್ತು ಶೂದ್ರರನ್ನು ಅಕ್ಷರದಿಂದ ವಂಚಿತರನ್ನಾಗಿ ಮಾಡಿತ್ತು. ಇದರ ವಿರುದ್ಧ ಹೋರಾಟ ನಡೆದು ಎಲ್ಲರಿಗೂ ಶಿಕ್ಷಣ ಸಿಗುವಂತಾಗಬೇಕೆಂದು ಹೇಳಿದರು. ಜಾಥಾದ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ.ಸಿ.ಯತಿರಾಜು ಹಾಗೂ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಸಾಕ್ಷರತಾ ರಾಯಭಾರಿಗಳಾದ ಶ್ರೀ ಎಸ್.ಬಿ. ಉದಯ ಕುಮಾರ್ ಅವರು ಜಾಥಾದ ಸಂದರ್ಭದ ತಮ್ಮ ಅನುಭವಗಳನ್ನು ವಿವರಿಸಿದರು.

ಪುಟ ೬ಕ್ಕೆ

"ನಿಮಗ ಏನಾರ ಹೇಳಿ ಹುಚ್ಚ ಮಾಡ್ತಾರ"

ವಿಶ್ವ ಸಾಕ್ಷರತಾ ವರ್ಷದ ಅಂಗವಾಗಿ ಭಾರತದಾದ್ಯಂತ ನಡೆದಿರುವ ಸಾಕ್ಷರತಾ ಆಂದೋಲನದ ಗುಲ್ಬರ್ಗಾ ಘಟಕದ ಈ ಕಲಾ ಜಾಥಾದಲ್ಲಿ ಕಲಾವಿದನಾಗಿ ಸೇವೆ ಸಲ್ಲಿಸಿ ನನಗಾದ ಕೆಲವು ಸಿಹಿ--ಕಹಿ ಅನುಭವಗಳನ್ನು ನಿಮ್ಮೊಡನೆ ಹಂಚಿಕೊಂಡರೆ ಒಳ್ಳೆಯದೆಂದು ಈ ಎರಡು ಮಾತುಗಳನ್ನು ಬರೆಯುತ್ತಿದ್ದೇನೆ.

ಗುಲ್ಬರ್ಗಾ ಜಿಲ್ಲೆಯ ಸುಮಾರು 169 ಹಳ್ಳಿಗಳಿಗೆ ಭೇಟಿ ಕೊಟ್ಟ ನನಗೆ ಬೇರೆಯವರ ತಾಟಿನಲ್ಲಿ ನೊಣ ಬಿದ್ದಿರುವುದನ್ನು ತೋರಿಸಲಿಕ್ಕೆ ಇಷ್ಟವಿಲ್ಲ. ಹೈದ್ರಾಬಾದ್- ಕರ್ನಾಟಕ ಅಭಿವೃದ್ಧಿ ಮಂಡಳಿ ಎಂದೋ ಸ್ಥಾಪಿಸಬೇಕಾಗಿದ್ದದ್ದು ಇಷ್ಟೇಕೆ ತಡಮಾಡಿದರು ಎಂದು ವ್ಯಥೆಯೆನಿಸುತ್ತದೆ. ನಮ್ಮ ಜಿಲ್ಲೆಯ ಹಿಂದುಳಿಕೆಯ ಅಧ್ಯಯನ ಮಾಡಲು ಇಷ್ಟು ವರ್ಷಗಳು ಬೇಕಾದವೇ? ಎಂದು ಆಶ್ಚರ್ಯವೆನಿಸುತ್ತದೆ.

ಮಾಜಿ ಮುಖ್ಯಮಂತ್ರಿಗಳ ತಾಲೂಕಾದ ಚಿಂಚೋಳಿಯಂತೂ ಅನಾಗರೀಕತೆಯ ಆಗರವಾಗಿದೆ. ಅಲ್ಲಿಯ ಕೆಲವು ಹಳ್ಳಿಗಳ ಜನರ ಪರಿಸ್ಥಿತಿ ಅಕ್ಷರಗಳಲ್ಲಿ ಹಿಡಿದಿಡಲು ಅಸಾಧ್ಯವೆನ್ನುವಷ್ಟರ ಮಟ್ಟಿಗೆ ಶೋಚನೀಯವಾಗಿದೆ. ಹೆಣ್ಣುಮಕ್ಕಳ ತಲೆಯ ಮೇಲೆ ಕೂದಲೇ ಇಲ್ಲ. ಅದನ್ನು ಕುರಿತು ಪ್ರಶ್ನಿಸಿದಾಗ ಬುಟ್ಟಿ ಹೊತ್ತು ಕೂದಲು ಉದುರಿವೆ ಎಂಬ ಉತ್ತರ; ಗಂಡು ಮಕ್ಕಳಿಗೆ ಮೈಮೇಲ ಅರಿವೆ ಇಲ್ಲ. 7 ವರ್ಷದ ಹುಡುಗರು ಮುಂಜಾನೆ ಎದ್ದು ಕೆಲಸಕ್ಕೆ ಹೋಗುವ ದಾರುಣ ಪರಿಸ್ಥಿತಿ ಕಣ್ಣುಕಟ್ಟುತ್ತವೆ. ನಮ್ಮ 'ಅಕ್ಷರ' ಅನ್ನುವಂಥ ನಾಟಕ ಪ್ರಭಾವಕ್ಕೊಳಗಾಗಿ ಒಂದು ಹುಡುಗನಂತೂ 'ನಾನು ದನ ಕಾಯಲು ಹೋಗುವುದಿಲ್ಲ, ಶಾಲೆಗೆ ಹೋಗುತ್ತೇನೆ' ಎಂದು ಅವರ ತಂದೆತಾಯಿಯ ಜೊತೆಗೆ ಜಗಳವಾಡುತ್ತಿತ್ತು. ಅವಾಗ ಅವರ ತಂದೆ ಪ್ರೇಕ್ಷಕರ ಮಧ್ಯದಲ್ಲಿ ಕುಳಿತ ಹುಡುಗನನ್ನು ಎಳೆದುಕೊಂಡು ಹೋಗುವುದನ್ನು ನೋಡಿದರೆ, ಆ ಹುಡುಗ ಮಾಡಿದ ಅಪರಾಧವಾದರೂ ಏನು ಎಂದು ಯಾರಿಗಾದರೂ ಅನಿಸುತ್ತದೆ.

ಯಾದಗಿರಿ ತಾಲೂಕು ಹಾಗೂ ಚಿತಾಪುರ ತಾಲೂಕುಗಳು ಜನಸಾಮಾನ್ಯರ ಕೋಪಣೆಯ ತವರು ಮನೆಯಾಗಿವೆ. ಅಲ್ಲಿಯ ಶಾಲೆ-ಕಾಲೇಜುಗಳು ಮಂಡಲ ಪ್ರಧಾನರ ದನಗಳ ಕೊಠಡಿ ಅಥವಾ ದವಸ ಧಾನ್ಯಗಳ ಗೋಡೌನುಗಳಾಗಿವೆ. ವಯಸ್ಕರ ಶಿಕ್ಷಣ ಇಲಾಖೆಯವರು ಕೊಟ್ಟಿರುವ ಸ್ಲೇಟು, ಪೆನ್ಸಿಲು ಹಾಗೂ ಕಂದೀಲು ಇತ್ಯಾದಿ ಸಾಮಗ್ರಿಗಳೆಲ್ಲ ಪಂಚಾಯಿತಿಯ ಸದಸ್ಯರು ಪಾಲು ಹಾಕಿ ಹಂಚಿಕೊಂಡಿದ್ದಾರೆ. ನಾವು ಅದನ್ನು ಜನತೆಯೊಂದಿಗೆ ಚರ್ಚಿಸಿದಾಗ ಆ ಇಲಾಖೆ ನಮ್ಮೂರಲ್ಲಿ ಇದೆ ಅಥವಾ ಇಲ್ಲ ಎಂಬುದು ನಮಗೆ ಗೊತ್ತೇ ಇಲ್ಲ ಎಂದು ಜನತೆ ಗೋಗರೆದರು. ಜನತೆಯ ಈ ಪರಿಸ್ಥಿತಿಯನ್ನು ಕುರಿತು ಅವರಿಗೆ ಅರಿವು ಮೂಡಿಸಲು ಒಂದೆರಡು ನಿಮಿಷ ಅವರ ಜೊತೆಗೆ ಮಾತನಾಡಿದರೆ, "ಅವರದೇನು ತಂದೀರಿ ಹುಚ್ಚ, ನಿಮಗ ಏನಾರ ಒಂದು ಹೇಳಿ ಹುಚ್ಚ ಮಾಡ್ತಾರ, ನಿಮ್ಮ ಕೆಲಸಕ ನೀವು ಹೋಗ್ರಿ" ಎಂದು ಜನತೆಯನ್ನು ದಬಾಯಿಸುತ್ತಿದ್ದರು.

ಊರಲ್ಲಿ ಯಾರಿಗೆ ರೇಷನ್ ಕೊಡಬೇಕೋ ಅವರಿಗೆ ಕೊಡದೇ, ಎಲ್ಲಾ ಕಾರ್ಡುಗಳನ್ನು ತಮ್ಮ ಮನೆಯಲ್ಲಿಯ ಮಕ್ಕಳು, ನೆಂಟರು ಹೆಸರಿನಿಂದ ತಾವೇ ಇಟ್ಟುಕೊಂಡಿದ್ದಾರೆ. ಕೆಲವು ಹಳ್ಳಿಗಳಲ್ಲಿ ಬಂದಿರುವ ರೇಷನ್ ಹಂಚದೆ ಪಂಚಾಯಿತಿಯಲ್ಲಿಯೇ ಕೊಳೆತು ಹುಳು ಹತ್ತಿ ಹಾಳಾಗುತ್ತಿವೆ. ಜನತೆ ಕೂಳಿಲ್ಲದೆ ಸಾಯುತ್ತಿದ್ದಾರೆ.

ಕೆಲವು ಹಳ್ಳಿಗಳಲ್ಲಿ ನಾವು ನಾಟಕ ಮಾಡಿ ಬಂದ ಮರು ದಿವಸದಿಂದ ಹಿಡಿದುಕೊಂಡೇ ವಯಸ್ಕರ ಶಿಕ್ಷಣ ಸಮಿತಿಯ ಭೋದಕ, ಪ್ರೇರಕರಿಗೆ ದುಂಬಾಲು ಬಿದ್ದು ಊರಿನ ಒಂದು ದೇವರ ಗುಡಿಯಲ್ಲಿ ನೂರಾರು ದನ ಕಾಯುವ ಯುವಕರು--ಯುವತಿಯರು ಅಕ್ಷರ ಅಭ್ಯಾಸ ಮಾಡುತ್ತಿದ್ದಾರೆ. ಅಷ್ಟೇ ಏಕೆ? ಮುಂಜಾನೆ ದನ ಕಾಯಲು ಹೋಗುವಾಗ ಜೊತೆಗೆ ಪಾಟಿ--ಪೆನ್ಸಿಲ್‌ಗಳು ತೆಗೆದುಕೊಂಡು ಹೋಗುತ್ತಿದ್ದಾರೆ.

ಒಟ್ಟು ಜಾಥಾದ ಅನುಭವ ಒಂದೇ ಮಾತಿನಲ್ಲಿ ಹೇಳಬೇಕೆಂದರೆ ----"ನಮ್ಮ ಜನತೆಗೆ ಹಸಿವಾಗಿದೆ--ಊಟ ಮಾಡಲು ಅವಕಾಶ ಬೇಕು"

ಹೀಗೆ ನಡೆಯಿತು ಸಮ್ಮೇಳನ

ಇತಿಹಾಸದ ಪುಟಗಳಿಂದ

ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಪ್ರಥಮ ಅಧಿವೇಶನ ಜರುಗಿದ್ದು 1943ರಲ್ಲಿ.- ಆದರೆ ಇದಕ್ಕೂಮುಂಚೆ ದೇಶದ ವಿವಿಧ ಭಾಗಗಳಲ್ಲಿ ವಿಸ್ತಾರಗೊಂಡು ಬೆಳೆಯುತ್ತಿದ್ದ ಕಮ್ಯುನಿಸ್ಟ್ ಚಳುವಳಿಗೆ ಒಂದು ಅಖಿಲ ಭಾರತ ನಾಯಕತ್ವ ಸಘಟನಾ ಸ್ವರೂಪ ನೀಡಲು ಹಲವಾರು ಸಮ್ಮೇಳನಗಳನ್ನು ಸಂಘಟಿಸುತ್ತಾ ಬರಲಾಗಿದೆ. ಕಮ್ಯುನಿಸ್ಟ್ ಚಳುವಳಿಯನ್ನು ಮುಖ್ಯ ಶತ್ರುವಾಗಿ ನೋಡುತ್ತಿದ್ದ ಬ್ರಿಟೀಶರ ಧಾಳಿ ದಬ್ಬಾಳಿಕೆಗಳನ್ನೆದುರಿಸಿ ಸಂಘಟನಾ ಕೆಲಸಗಳನ್ನು ನಡೆಸಬೇಕಾಗಿತ್ತು. ಇಂತಹ ಕ್ಲಿಷ್ಟ ಸ್ಥಿತಿಯಲ್ಲಿ ಒಂದು ಸಮ್ಮೇಳನ ಸಂಘಟಿಸುವುದೆಂದರೆ ಸುಲಭದ ಕಾರ್ಯವಾಗಿರಲಿಲ್ಲ

1933ರಲ್ಲಿ ಅಖಿಲ ಭಾರತ ಮಟ್ಟದ ಸಮ್ಮೇಳನವೊಂದನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ಇದರ ಜವಾಬ್ದಾರಿಯನ್ನು ಕಲ್ಕತ್ತಾದ ಪಕ್ಷದ ಘಟಕಕೆಗೆದು ಕೊಂಡಿತು.ಕಲ್ಕತ್ತಾ ಘಟಕ ತುಂಬಾ ಕ್ರಿಯಾಶೀಲವಾಗಿತ್ತು. ಆಗಿನ್ನು ಬಂಗಾಲದ ಪ್ರಾಂತಘಟಕವಿರಲಿಲ್ಲ. ಹೀಗಿರುವಾಗ ಚಳುವಳಿಯನ್ನು ಬೆಳೆಸುವ ನಿಟ್ಟಿನಲ್ಲಿ ಒಂದು ಪತ್ರಿಕೆಯನ್ನು ಆರಂಭಿಸಲು ತೀರ್ಮಾನಿಸಲಾಗಿತ್ತು. ಆ ಪತ್ರಿಕೆಯೇ"ದಿ ಕಮ್ಯುನಿಷ್ಟ" ಆಂಗ್ಲಭಾಷೆಯ ಪತ್ರಿಕೆ. ಬರಿ ಕಲ್ಕತ್ತಾ, ಬಂಗಾಳಕ್ಕಷ್ಟೆ ಅಲ್ಲ ಭಾರತದ ವಿವಿಧ ವಿವಿಧ ಕಮ್ಯುನಿಸ್ಟ್ ಗುಂಪುಗಳಿಗೆ ಸಹ ರಾಜಕೀಯ ವಿಶ್ಲೇಷಣೆ ಮಾಡುವುದು, ತೀರ್ಮಾನಗಳನ್ನು ತಿಳಿಸುವುದು ಅದರ ಕೆಲಸ.

ಪತ್ರಿಕೆಯ ಪ್ರಕಟಣೆ ರಹಸ್ಯವಾಗಿಯೇ ನಡೆಸಬೇಕಾಗಿತ್ತು, 1933 ಸೆಪ್ಟಂಬರ್‌ನಲ್ಲಿ ಎರಡನೆಯ ಸಂಚಿಕೆಯ ಬಿಡುಗಡೆಯಾಗಿತ್ತು. ಇದರಲ್ಲಿ ಗಾಂಧಿವಾದ, ರಾಷ್ಟ್ರೀಯ ಕಾಂಗ್ರೆಸ್‌ನ ದಿವಾಳಿ ನೀತಿಗಳ ಬಗ್ಗೆ ಲೇಖನವಿದ್ದವು. ಬ್ರಿಟೀಶ್ ಸಮ್ರಾಜ್ಯಶಾಹಿಗಳಿಗೆದುರಾಗಿ ಅಂತಿಮ ಹೋರಾಟದ ಕರೆಯಿತ್ತು. ಕಾರ್ಮಿಕವರ್ಗದ ನಾಯಕತ್ವ ಏಕೆ?- ಹೇಗೆ ಎಂದು ಚರ್ಚಿಸಿದ್ದ ಲೇಖನದೊಂದಿಗೆ ಇದರ ಅಗತ್ಯವಾಗಿ ಅಖಿಲ ಭಾರತ ಮಟ್ಟದಲ್ಲಿಪಕ್ಷದ ಅಗತ್ಯ ಅದರ ನಿಯಮ,ಶಿಸ್ತುಬದ್ಧ ಸಂಘಟನೆ ಮುಂತಾಗಿ ಮನವರಿಕೆ ಮಾಡಿಕೊಡುವ ಲೇಖನಗಳಿದ್ದವು.

ಅಖಿಲ ಭಾರತ ಸ್ವರೂಪದಲ್ಲಿ ಪಕ್ಷ ಕಟ್ಟುವಬಗ್ಗೆ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯೂ ಒತ್ತಿ ಹೇಳಿತ್ತು. (ಇದರ ಪೂರಕವಾಗಿ ಸಮ್ಮೇಳನ ಸಂಘಟಿಸಲಾಗಿತ್ತು) 1933 ನವೆಂಬರ್‌ನಲ್ಲಿ ಕಲ್ಕತ್ತಾ ಸಮಿತಿಯು ಬಂಗಾಳ ಸಮಿತಿ ಎಂದು ಬದಲಾಗಿ ಕಾಂ:ಅಬ್ದುಲ್ಲಾ ಹಲಿಂ ಅವರು ಕಾರ್ಯದರ್ಶಿಯಾದರು. ಅಖಿಲ ಭಾರತ ಸಮ್ಮೇಳನವನ್ನು ಯಶಸ್ವಿಯಾಗಿ ಸಂಘಟಿಸುವ ಮುಖ್ಯ ಕರ್ತವ್ಯ ಆ ಘಟಕದ ಮೇಲೆ.

ಕಲ್ಕತ್ತಾದಲ್ಲೇ ಸಮ್ಮೇಳನ ಅದಕ್ಕಾಗಿ ಕೆಂಪು ಸ್ವಯಂಸೇವಕರ ಪಡೆ ರಚನೆ. ಅದರಲ್ಲೇ ಒಂದು ಭಾಗಕ್ಕೆ ಸುರಕ್ಷಿತ ಕಾರ್ಯದ ಹಂಚಿಕೆ. ಜಕಾರಿಯಾ ಸ್ಟ್ರೀಟ್‌ನ ಅಮ್ಜದ್ ಹೋಟಲಿನಲ್ಲಿ ಸಮ್ಮೇಳನ ಸೇರುವುದು ವಿವಿಧ ಭಾಗಗಳಿಂದ ಪಕ್ಷದ ಪ್ರತಿನಿಧಿಗಳು, ನಾಯಕರು ಆಗಮಿಸಿದರು (ಸಂಖ್ಯೆ ಬಹಳ ದೊಡ್ಡದಿರಲಿಲ್ಲ)ಬಾಂಬೆ ಯಿಂದ ಗಂಗಾಧರ ಅಧಿಕಾರಿ, ಜವಳಿ ಕಾರ್ಮಿಕರ ನಾಯಕ ಎಸ್.ಸಿ. ಘಟ್ಕರ್, ಉತ್ತರ ಪ್ರದೇಶದಿಂದ ಪಿ.ಸಿ.ಜೋಷಿ ನಾಗಪುರದಿಂದ ಜಯವಂತ್, ಪಂಜಾಬ್ ನಿಂದ ಗುರುಜೀತ್ ಸಿಂಗ್, ಕಲ್ಕತ್ತಾದಿಂದ ಹಲೀಂ, ಲಹರಿ ರಣಸೇನ್ ಮುಂತಾಗಿ... ಈ ಸುದ್ದಿ ಪೋಲೀಸರಿಗೆ ಹೇಗೋ ಗೊತ್ತಾಗಿ ಹೋಯಿತು. ಹುಡುಕಾಟ ಆರಂಭ. ಸಮ್ಮೇಳನದ ಪ್ರದೇಶದ ಬೀದಿಗಳಲ್ಲಿ ಹುಡುಕಾಟ ಆರಂಭವಾಯಿತು.ಇದನ್ನು ತಿಳಿದ ಕೂಡಲೇ ಹೋಟಲನ್ನು ತಕ್ಷಣವೇ ಖಾಲಿ ಮಾಡಲಾಯಿತು. ಎರಡನೆಯ ದಿನದ ಕಲಾಪಗಳು ಆರಂಭವಾದ್ದದ್ದು ಮದನ್ ಬಾಗ್‌ಲೈನಿನ ಹಳೆಯ ಕಟ್ಟಡದಲ್ಲಿ. ಅಲ್ಲಿ ಯಾವುದೇ ಪಿಠೋಪಕರಣಗಳಿಲ್ಲ. ಹಾಸಲು ಚಾಪೆಯೂ ಇಲ್ಲ. ಆದರೇನಂತೆ ದಿನ ಪತ್ರಿಕೆಗಳನ್ನೇ ನೆಲಕ್ಕೆ ಹಾಸಿ ಕಾರ್ಯಕ್ರಮಗಳು ನಡೆದವು. ಆದರೆ ಇಲ್ಲಿಯ ಸಭೆ ಬಗ್ಗೆ ಪೋಲೀಸರು ಹೇಗೋ ವಾಸನೆ ಹಿಡಿದು ಅಲ್ಲಿಗೂ ಧಾಳಿಯಿಡಲು ಮುಂದಾದರು.ಮತ್ತೆಅಲ್ಲಿಂದ ಇನ್ನೊಂದು ಸ್ಥಳಕ್ಕೆ. ಮಾರನೆಯ ದಿನದ ಕಲಾಪಗಳು ನಡೆದದ್ದು ಮಣಿಕತಲ್ ಆಸ್ಪತ್ರೆಯ ಒಂದು ಕೋಣೆಯಲ್ಲಿ. ಇದು ಕೊನೆಯ ದಿನದ ಸಭೆ ಇದರಲ್ಲಿ"ಪಾರ್ಟಿಯ ಥೀಸಿಸ್"ನ್ನು ಅಂಗೀಕರಿಸಲಾಯಿತು. ಡಾ:ಅಧಿಕಾರಿ ಅದರ ಕರಡು ಮಂಡಿಸಿದರು. ನಂತರ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿಯೂ ಮತ್ತು ಒಂದು ಕೇಂದ್ರ ಸಮಿತಿಯನ್ನು ಆರಿಸಲಾಯಿತು. ಕಲಾಪಗಳು ಮುಗಿಯುತ್ತಿದ್ದಂತೆಯೇ ಮತ್ತೆ ಎಲ್ಲರೂ ಬಂದ ದಿಕ್ಕುಗಳಲ್ಲಿ ಕತ್ತಲೆಯಲ್ಲಿ ಹಿಂತಿರುಗಿ ಹೋದರು.

----ಇ.ಕೆ.ಎನ್.ರಾಜನ್

"ಜಾತ್ಯಾತೀತತೆ, ಪ್ರಜಾಸತ್ತೆ ಸಾಮಾಜಿಕ ಬದಲಾವಣೆಗಾಗಿ ಕಾರ್ಮಿಕರನ್ನು ಸಂಘಟಿಸಿ"

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಕರೆ

ಕೋಮುವಾದದ ವಿರುದ್ಧ ನಿರಂತರ ಆಂದೋಲನವನ್ನು ನಡೆಸುವಂತೆ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ತನ್ನ ಎಲ್ಲಾ ಕಾರ್ಮಿಕ ಸಂಘಗಳಿಗೆ ಕರೆ ಕೊಟ್ಟಿದೆ. 1990 ಡಿಸೆಂಬರ್ 6 ರಂದು ಸಂಜೆ 5-30 ರಿಂದು 5-35ರವರೆಗೆ ಬೆಂಗಳೂರು, ಕೆಜಿಎಫ್ ಮಂಗಳೂರು ಕುಂದಾಪುರ ಮೈಸೂರು ಹರಿಹರ,ಹುಬ್ಬಳ್ಳಿ ಧಾರವಾಡ ಬಿಜಾಪುರ ಗುಲ್ಬರ್ಗಾ ಮತ್ತು ದಾಂಡೇಲಿಗಳಲ್ಲಿ " ಮಾನವ ಸರಪಳಿ"ಯನ್ನು ರಚಿಸುವುದರ ಮೂಲಕ ಕೋಮು ಸೌಹಾರ್ದ ದಿನವನ್ನು ಆಚರಿಸಲು ಕರೆ ಕೊಟ್ಟಿತ್ತು.

ಸಿಐಟಿಯುವಿನ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯದಲ್ಲಿ ಇತ್ತೀಚೆಗೆ ಕೋಮು ಗಲಭೆಯಿಂದ ಉಂಟಾಗಿರುವ ಪರಿಸ್ಥಿತಿಯನ್ನು ಅವಲೋಕಿಸಿತು. ರಾಜ್ಯದ ಕಾರ್ಮಿಕ ವರ್ಗವು ಬಿಜೆಪಿಯ 24-11-90 ರ ಭಾರತ್ ಬಂದ್ ನಲ್ಲಿ ಭಾಗವಹಿಸದಿದ್ದರೂ, ಕಾರ್ಮಿಕ ವರ್ಗವು ಜಾತ್ಯಾತೀತತೆ, ಪ್ರಜಾಸತ್ತೆಗಾಗಿ ಹೇಳಿಕೊಳ್ಳುವಂತಹದೇನನ್ನೂ ಮಾಡಿಲ್ಲವೆಂಬುದನ್ನೂ ಗಮನಿಸಿತು. ಕೋಮು ಗಲಭೆಗಳು ದುಡಿಯುವ ಜನರ ದೈನಂದಿನ ಜೀವನವನ್ನು ಗಂಭೀರವಾಗಿ ಭಾದಿಸಿದುವು ಎಂದು ರಾಜ್ಯ ಸಮಿತಿಯು ಗಮನಿಸಿತು.

ನಿಷೇ-

ದಾಜ್ಞೆಗಳು ಮತ್ತು ಕರ್ಫ್ಯೂಗಳಿಂದಾಗಿ ನಿಗದಿತ ಉದ್ಯೋಗ ಮತ್ತು ಆದಾಯ ಇಲ್ಲದ, ದುಡಿಯುವ ಜನ ಸಮುದಾಯದ ಹಲವಾರು ತಮ್ಮ ಜೀವನಾಧಾರವನ್ನು ಗಳಿಸಲು ಕಷ್ಟಪಟ್ಟರು. ಹಲವು ಕಾರ್ಖಾನೆಗಳಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಕಾರ್ಮಿಕರನ್ನು ಕೋಮು ಆಧಾರದ ಮೇಲೆ ವಿಭಜಿಸಲು ಪ್ರಯತ್ನಿಸಿದರು. ಇಂತಹ ಘಟನೆಗಳು ಮರುಕಳಿಸದಂತೆ ಮಾಡಲು, ಜಾತ್ಯಾತೀತತೆ, ಪ್ರಜಾಸತ್ತೆ ಮತ್ತು ಸಾಮಾಜಿಕ ಬದಲಾವಣೆಗಾಗಿ ಕಾರ್ಮಿಕರನ್ನು ಸಂಘಟಿಸುವುದು ಅವಶ್ಯಕವಾಗಿದೆ

ಒಂದು ಸಾವಿರ ಬೀಡಿಗಳನ್ನು ಕಟ್ಟುವುದಕ್ಕೆ ರೂ.25 ಕನಿಷ್ಠ ವೇತನ ಮತ್ತು ಪ್ರತಿ ಪಾಯಿಂಟಿಗೆ 5 ಪೈಸೆ ತುಟ್ಟಿಭತ್ಯೆಯನ್ನು ಒತ್ತಾಯಿಸಿ ಬೀಡಿ ಕಾರ್ಮಿಕರು 1991 ಜನವರಿ 20ರಿಂದ 22ರವರೆಗೆ ರಾಜ್ಯಾದ್ಯಂತ ಮುಷ್ಕರವನ್ನು ನಡೆಸುವರು. ದಾಖಲೆ ಪುಸ್ತಕವನ್ನು ಇಡುವುದು, ಕಾಂಟ್ರಾಕ್ಟ್ ಪದ್ಧತಿಯನ್ನು ನಿಷೇಧಿಸುವುದು ಬೀಡಿ ಕಾರ್ಮಿಕರ ಇತರ ಬೇಡಿಕೆಗಳನ್ನು ಬೀಡಿ ಕಾರ್ಮಿಕರು 1991 ಜನವರಿ 22 ರಂದು ಬೆಂಗಳೂರು ಚಲೋ ನಡೆಸಿ ವಿಧಾನ ಸೌಧದ ಮುಂದೆ ಧರಣಿಯನ್ನು ನಡೆಸುವರು.

ಪ್ಲಾಂಟೇಷನ್ ಕಾರ್ಮಿಕರು ಕನಿಷ್ಠ ಕೂಲಿ ಮತ್ತು ಇತರ ಬೇಡಿಕೆಗಳಿಗಾಗಿ ಜನವರಿ 20, 21ರಂದು ಮುಷ್ಕರ ನಡೆಸುವರು.

'ಟಾಡಾ'ವನ್ನು ಉಪಯೋಗಿಸುವ ರಾಜ್ಯ ಸರಕಾರದ ಪ್ರಸ್ತಾವನೆಯನ್ನು ರಾಜ್ಯ ಸಮಿತಿಯು ಖಂಡಿಸಿ ಅದನ್ನು ಕೈಬಿಡುವಂತೆ ಒತ್ತಾಯಿಸಿದೆ.

1991 ಜನವರಿ 21ರಂದು ಬೆಂಗಳೂರಿನಲ್ಲಿ ನಡೆಯಲಿರುವ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕೃಷಿ ಕೂಲಿಗಾರರ ಸಂಘದ ಜಂಟಿ ಬೃಹತ್ ರ್‍ಯಾಲಿಗೆ ಸಾಧ್ಯವಾದ ಎಲ್ಲಾ ನೆರವನ್ನು ನೀಡಲು ಕಾರ್ಮಿಕ ಸಂಘಗಳಿಗೆ ರಾಜ್ಯ ಸಮಿತಿಯು ಕರೆ ಕೊಟ್ಟಿದೆ.

ಜಿಲ್ಲಾ ಪರಿಷತ್ ಮಂಡಲ್ ಪಂಚಾಯತ್ ಶಾಸನಕ್ಕೆ, ತಿದ್ದುಪಡಿ ಮಾಡಿ ಆಗಿರುವ ಅಧಿಕಾರದ ವಿಕೇಂದ್ರೀಕರಣವನ್ನು ಕಸಿದುಕೊಳ್ಳುವ ಬಂಗಾರಪ್ಪ ಸರಕಾರದ ಪ್ರಗತಿ ವಿರೋಧಿ ಕ್ರಮವನ್ನು ಸಿಐಟಿಯು ತೀವ್ರವಾಗಿ ಖಂಡಿಸಿದೆ

ಅಸ್ಸಾಮಿನಲ್ಲಿ ಸರಕಾರನ್ನು ವಜಾ ಮಾಡಿ, ರಾಷ್ಟ್ರಪತಿ ಆಡಳಿತವನ್ನು ಹೇರಿದ ಶ್ರೀ ಚಂದ್ರಶೇಖರ್ ಸರಕಾರದ ಕ್ರಮವನ್ನು ಸಿಐಟಿಯು ಖಂಡಿಸಿದೆ.

ಕೋಮುವಾದಿಗಳ ವಿರುದ್ಧ ಕ್ರಮಕ್ಕೆ ಕರೆ

ಕೊಡಗು ಜಿಲ್ಲೆಯಲ್ಲಿ ನಡೆದ ಕೋಮು ಗಲಭೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಸಿಪಿಐ(ಎಂ) ವಿರಾಜಪೇಟೆಯ ಶಾಖೆಯು ಕೋಮುಗಲಭೆಗೆ ಕಾರಣರಾದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ಕೋಮು ಗಲಭೆಗಳು ನಡೆದ ಪ್ರದೇಶಗಳಿಗೆ ಸಿಪಿಐ(ಎಂ)ನ ವಿರಾಜಪೇಟೆ ಶಾಖೆಯ ನಿಯೋಗವೊಂದು ಇತ್ತೀಚೆಗೆ ಭೇಟಿ ಮಾಡಿ ನೊಂದವರಿಂದ ಮಾಹಿತಿಯನ್ನು ಸಂಗ್ರಹಿಸಿತು.

ವಿಶ್ವ ಹಿಂದೂ ಪರಿಷತ್ತು ಮತ್ತು ಬಿ.ಜೆ.ಪಿ. ನಡೆಸಿದ ರಾಮಜ್ಯೋತಿಯ ಕಾರ್ಯಕ್ರಮದ ಬಳಿಕ ಇಡೀ ಜಿಲ್ಲೆಯಲ್ಲಿ ಕೋಮು ಉನ್ಮತ್ತತೆಯ ವಾತಾವರಣ ಮೂಡಿತು. ಇನ್ನೂ ಹಲವು ಕಡೆಗಳಲ್ಲಿ ಹಲ್ಲೆಗಳು ಮುಂದುವರೆಯುತ್ತಿವೆ. ಬೆಟ್ಟಳ್ಳಿಯಲ್ಲಿ ಓರ್ವ ವ್ಯಕ್ತಿಯ ಕೊಲೆ ನಡೆದಿದೆ. ಕೋಮುವಾದಿಗಳು ನಡೆಸುತ್ತಿರುವ ಈ ಹಲ್ಲೆಯನ್ನು ವಿರೋಧಿಸಲುಎಲ್ಲಾ ಪ್ರಜಾಸತ್ತಾತ್ಮಕ ರಾಜಕೀಯ ಪಕ್ಷಗಳು ಮುಂದಾಗಬೇಕೆಂದು ತಿಳಿಸಿದೆ. ಕಾಂಗ್ರೆ ಪಕ್ಷದ ಜಿಲ್ಲಾ ಪರಿಷತ್ ಅಧ್ಯಕ್ಷರು ರಾಮಜ್ಯೋತಿಗೆ ಹಾರ ಹಾಕಿ ಸ್ವಾಗತಿಸಿದ್ದಾರೆ. ಅದೇ ಪಕ್ಷದ ಹಲವು ನಾಯಕರು ಕೋಮುವಾದಿಗಳೊಡನೆ ಮತ್ತು ದುಷ್ಕರ್ಮಿಗಳೊಡನೆ ಶಾಮೀಲಾಗಿದ್ದಾರೆಂದೂ, ಕಾಂಗ್ರೆ ಪಕ್ಷದ ಈ ಸಂದರ್ಭಸಾಧಕತನವನ್ನು ಅದೇ ಪಕ್ಷದ ಶಾಸಕರು ಟೀಕಿಸಿದ್ದಾರೆ. ಈ ಕೂಡಲೇ ಸರ್ಕಾರ ಮತ್ತು ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಜಿಲ್ಲೆಯ ರಾಜಕೀಯ ಪಕ್ಷಗಳ ಸಾಮೂಹಿಕ ಸಂಘಟನೆಗಳ ಕಾರ್ಮಿಕ ರೈತ ವಿದ್ಯಾರ್ಥಿಸಂಘಗಳ ಪ್ರತಿನಿಧಿಗಳ ಸಭೆಯನ್ನು ಕರೆಯಬೇಕೆಂದು ಮತ್ತು ದೌರ್ಜನ್ಯ ನಡೆಸುವ ಕೋಮುವಾದಿ ಶಕ್ತಿಗಳ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕೆಂದೂ ಸಿಪಿಐ(ಎಂ) ವಿರಾಜಪೇಟೆ ಶಾಖೆಯು ಒತ್ತಾಯಿಸುತ್ತದೆ.

ಕಾಡುಗೋಡಿ ಸಬ್ ಇನ್ಸ್‌ಪೆಕ್ಟರ್ ಸಸ್ಪೆಂಡ್, ತನಿಖೆಗಾಗಿ ಒತ್ತಾಯ

ಬೆಂಗಳೂರು ಹೊರ ವಲಯದ ವೈಟ್ ಫೀಲ್ಡ್ ರಸ್ತೆಯಲ್ಲಿರುವ ಹರ್ಬಟ್ ಇಂಡಿಯಾ ಲಿಮಿಟೆಡ್ ಕಾರ್ಖಾನೆಯ 350 ಕಾರ್ಮಿಕರು ತಮ್ಮ ನ್ಯಾಯವಾದ ಬೇಡಿಕೆ ಈಡೇರಿಕೆಗಾಗಿ 180 ದಿನಗಳಿಂದ ಹೋರಾಟ ನಡೆಸುತ್ತಿದ್ದು ಈ ಹೋರಾಟವನ್ನು ಹತ್ತಿಕ್ಕಲು ಕಾರ್ಖಾನೆ ಮಾಲೀಕರು, ಕಾಡುಗೋಡಿ ಪೋಲಿಸ್ ಠಾಣೆಯ ಸಬ್ ಇನ್ಸ್ ಪೆಕ್ಟರ್ ದಿನೇಶ್‌ರಾವ್ ಹಾಗೂ ಹೊಸಕೋಟೆ ಸರ್ಕಲ್ ಇನ್ಸ್‌ಪೆಕ್ಟರ್ ಶಾಂಬು ಎಂಬುವವರು ದಿನಾಂಕ: 25-11-90 ರಂದು ದುರುದ್ದೇಶ ಪೂರ್ವಕವಾಗಿ ಕಾರ್ಖಾನೆಯ 4 ಜನ ಮುಖಂಡರನ್ನು ಬಂಧಿಸಿ ಕಳ್ಳತನದ ಆಪಾದನೆ ಹೊರಿಸಿ ಠಾಣೆಯಲ್ಲಿಟ್ಟಿದ್ದರು. ದಿನಾಂಕ 26-11-90 ರಂದು ಆ ಪ್ರದೇಶದ ಸಿ.ಐ.ಟಿ.ಯು. ಮುಖಂಡರಾದ ಹೆಚ್.ಎನ್.ಗೋಪಾಲಗೌಡ ಹಾಗೂ ಸಿ.ಕುಂಜಪ್ಪನ್ ಠಾಣೆಗೆ ವಿಚಾರಿಸಲು ಹೋದಾಗ ಸಬ್ ಇನ್ಸ್‌ಪೆಕ್ಟರ್ ದಿನೇಶ್‌ರಾವ್ ಅವಾಚ್ಯ ಶಬ್ದಗಳಿಂದ ಪೊಲೀಸ್ ಭಾಷೆಯಲ್ಲಿ ಬೈದು ಇಬ್ಬರೂ ಮುಖಂಡರನ್ನು ಮನಸೋ ಇಚ್ಛೆ ಹೊಡೆದು ಕೆಳಗಡೆ ಮಲಗಿಸಿ ಬೂಟ್ ಕಾಲಿನಿಂದ ತುಳಿದಿರುತ್ತಾರೆ. ಇದನ್ನು ತಿಳಿದ ಆ ಪ್ರದೇಶದ ಕಾರ್ಮಿಕರು ಪೊಲೀಸ್ ಠಾಣೆಗೆ ವಿಚಾರಿಸಲು ಹೋದಾಗ ಅಲ್ಲೇ ಇದ್ದ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಲಾಠಿ ಚಾರ್ಜ್ ಮಾಡಿ ಹಲವಾರು ನೌಕರರಿಗೆ ಪೆಟ್ಟುಗಳು ಸಹ ಬಿದ್ದಿವೆ. ಅಲ್ಲದೆ ರಸ್ತೆಯಲ್ಲಿ ಹೋಗುತ್ತಿದ್ದ ಸಾರ್ವಜನಿಕರಿಗೂ ಪೆಟ್ಟುಗಳು ಬಿದ್ದಿವೆ.

ಈ ಘಟನೆಯನ್ನು ಖಂಡಿಸಿ ದಿನಾಂಕ : 27-11-90 ರಂದು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಸಾರ್ವಜನಿಕರು ಪ್ರತಿಭಟನಾ ಮೆರವಣಿಗೆ ನಡೆಸಿ ಈ ವಿಚಾರ ಕುರಿತು ಸಬ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಬೇಕು, ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಈ ಕಾರ್ಯಕ್ರಮದಲ್ಲಿ ರಾಜ್ಯ ಸಿಐಟಿಯು ಅಧ್ಯಕ್ಷರಾದ ಸೂರ್ಯನಾರಾಯಣರಾವ್, ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಭಾಗವಹಿಸಿ ಮುಖಂಡತ್ವ ನೀಡಿ ಡಿ.ವೈ.ಎಸ್.ಪಿಗೆ ಮನವಿ ನೀಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಡುವುದು ಮತ್ತು ನೌಕರರ ಮೇಲೆ ಗೂಂಡಾಗಿರಿ ವಿಪರೀತವಾಗಿರುವುದನ್ನು ಖಂಡಿಸುತ್ತದೆ.

ನ್ಯಾಯಾಂಗ ವಿಚಾರಣೆ ನಡೆಸದಿದ್ದರೆ ಈ ಪ್ರದೇಶದ ನೌಕರರು ಸಾರ್ವಜನಿಕ ಸಂಘಟಿತ ಹೋರಾಟ ನಡೆಸುತ್ತಾರೆಂದು ಕೆ.ಆರ್.ಪುರ ಸ್ಥಳೀಯ ಸಮಿತಿ ಕಾರ್ಯದರ್ಶಿ ಜಾನ್ ವಿನ್ಸೆಂಟ್ ಕರೆ ನೀಡಿದ್ದಾರೆ.

ಕೃಷಿ ಕಾರ್ಮಿಕರ ಧರಣಿ ಸತ್ಯಾಗ್ರಹ

ಬೆಳಗಾವಿ ಜಿಲ್ಲೆಯ ಕರ್ನಾಟಕ ಪ್ರಾಂತ ಕೃಷಿ ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ನವೆಂಬರ್ 19 ರಂದು ಕೃಷಿ ಕಾರ್ಮಿಕರು ಧರಣಿ ಸತ್ಯಾಗ್ರಹವನ್ನು ಆಯಾಯ ಮಂಡಲ ಪಂಚಾಯ್ತಿಮುಂದೆ ನಡೆಸಿದ್ದಾರೆ

ಹಿರೇಕುಂಬಿ ಮಂಡಲ ಪಂಚಾಯ್ತಿ, ಸವದತ್ತಿ ನಗರಸಭೆ, ಯಕ್ಕುಂಡಿ ಮಂಡಲ ಪಂಚಾಯ್ತಿ, ಮುರಗೋಡು ಮಂಡಲ ಪಂಚಾಯಿತಿ, ಹೊಸೂರು ಮಂಡಲ ಪಂಚಾಯಿತಿ, ಮುನವಳ್ಳಿ ಮಂಡಲ ಪಂಚಾಯಿತಿಗಳ ಮುಂದೆ ಧರಣಿ ಸತ್ಯಾಗ್ರಹವನ್ನು ನಡೆಸಿ ಪ್ರಧಾನರಿಗೆ ಮನವಿಯನ್ನು ಅರ್ಪಿಸಲಾಯಿತು.

ತಮ್ಮ ಬೇಡಿಕೆಗಳಾದ ಭೂಹೀನರಿಗೆ ಭೂಮಿ ಹಂಚುವುದು, ಅಕ್ರಮ ಭೂಮಿ ಸಕ್ರಮಗೊಳಿಸುವುದು, ನಿವೇಶನ ಹಾಗೂ ಜನತಾಮನೆ, ಹುಸಿರು ಕಾರ್ಡುಗಳನ್ನು ಹಂಚುವುದು ಇವೇ ಮೊದಲಾದ ಬೇಡಿಕೆಗಳ ನ್ನೊಳಗೆ ಪತ್ರವನು ಅರ್ಪಿಸಿದರು

ಭೂಪಾಲ ದುರಂತದ 6ನೆಯ ವರ್ಷ ಅಂಧಕಾರದಲ್ಲಿ ಬೆಂದ ಜನ

"ಇನ್ನೆಂದೂ ಈ ಮಣ್ಣಲಿ ಭೂಪಾಲ್‌ಗಳು ಬೇಡ ಬೇಡ" ಎಂಬುದು ಭೂಪಾಲದ ಪ್ರತಿಯೊಬ್ಬರ ಅಳಲು. ಆರು ವರ್ಷಗಳ ಹಿಂದೆ 2-3 ರ ಮಧ್ಯರಾತ್ರಿ ಭೂಪಾಲಕ್ಕೆ ಕರಾಳ ರಾತ್ರಿಯಾಗಿತ್ತು. ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ ಹೊರಬಿದ್ದ ವಿಷಾನಿಲ ತನ್ನ ತೆಕ್ಕೆಗೆ ಸಾವಿರಾರು ಜನರನ್ನು ಬಲಿ ತೆಗೆದುಕೊಳ್ಳುತ್ತಾ ಸಾಗಿತು.

ಈಗ 6 ವರ್ಷಗಳ ನಂತರ ಅವರ ಕಥೆ ಹಾಗೆಯೇ ಇದೆ. ಸ್ವತವರ ಜೊತೆ ಇನ್ನಷ್ಟು ಜನ ಸೇರುತ್ತಿದ್ದಾರೆ. ಇದುವರೆಗೂ 4 ಸಾವಿರ ಮಂದಿ ಸತ್ತಿದ್ದಾರೆ ಎಂದು ಅಂದಾಜು ಮಾಡಲಾಗಿದೆ. 5 ಲಕ್ಷ ಜನರು ಅನಿಲ ದುರಂತದ ಪರಿಣಾಮಗಳನ್ನು ಎದುರಿಸುತ್ತಾ ಭರವಸೆಯ ಬೆಳಕಿಗಾಗಿ ತಡಕಾಡುತ್ತಿದ್ದಾರೆ. ಹಲವರು ಕಣ್ಣು ಕಳೆದುಕೊಂಡು ಅಂಧಕಾರದಲ್ಲಿದ್ದಾರೆ. ಸಾವಿರಾರು ಮಹಿಳೆಯರಲ್ಲಿ ಮೇಲಿಂದ ಮೇಲೆ ಗರ್ಭಪಾತವಾಗುತ್ತಿರುವ ವರದಿಗಳು ಬಂದಿವೆ. ಭೂಪಾಲದ ಅನೇಕ ಜನರ ಬದುಕು ಅವಸಾನದ ಅಂಚಿನಲ್ಲಿದೆ.

ಭೂಪಾಲದ ಮಂದಿ ತುತ್ತು ಅನ್ನಕಾಗಿ ಈಗ ಸರಕಾರದ ಅಭಯ ಹಸ್ತ ಕಾಯುತ್ತಾ ಕೂತಿದ್ದಾರೆ. ಆದರೆ ಆರು ವರ್ಷಗಳು ಉರುಳಿದರೂ ಪರಿಹಾರ ಎಂಬುದು ಮರೀಚಿಕೆಯಾಗಿದೆ. ನ್ಯಾಯಾಲಯಗಳಲ್ಲಿ ಕಾನೂನಿನ ಸಮರ ಇನ್ನೂ ಮುಗಿಯದ ಭೂಪಾಲದಲ್ಲಿ ನಿಟ್ಟುಸಿರು ತಾಂಡವವಾಡುತ್ತಿದೆ.

ಈ ನಿಟ್ಟಿನಲ್ಲಿ ರಾಷ್ಟ್ರೀಯ ರಂಗ ಸರಕಾರವೇ ಭೂಪಾಲದ ಮಂದಿಗೆ ನ್ಯಾಯ ಒದಗಿಸುವ ಕಾಳಜಿ ತೋರಿಸಿತ್ತು. ರಾಜೀವ್ ಗಾಂಧಿ ಸರಕಾರ 1989ರಲ್ಲಿ ಯೂನಿಯನ್ ಕಾರ್ಬೈಡ್ ಸಂಸ್ಥೆಯೊಂದಿಗೆ ಕೇವಲ 470 ಕೋಟಿ ಡಾಲರ್ ಪರಿಹಾರಕ್ಕೆ ಒಪ್ಪಿಕೊಂಡು ನೊಂದ ಜನರನ್ನು ಬಾಣಲೆಯಿಂದ ಬೆಂಕಿಗೆ ಎಸೆಯಿತು.

ಇದನ್ನು ಧಿಕ್ಕರಿಸಿ ರಾಷ್ಟ್ರೀಯ ರಂಗ ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಮನವಿ ಸಲ್ಲಿಸಿದೆ. ಹೆಚ್ಚು ಪರಿಹಾರ ನೀಡಲು ಕೇಳಿದೆ. ಅಲ್ಲದೆ ಭೂಪಾಲದ ಸಂತ್ರಸ್ಥರಿಗೆ 310 ಕೋಟಿ ತಾತ್ಕಾಲಿಕ ಪರಿಹಾರ ನೀಡಲು ಮುಂದಾಗಿದೆ. ಇದರಿಂದ ಭೂಪಾಲದ 35 ಲಕ್ಷ ಮಂದಿ ಮೂರು ವರ್ಷಗಳ ಕಾಲ ನಿರಂತರವಾಗಿ 200 ರೂ ಪರಿಹಾರ ಪಡೆಯಲಿದ್ದಾರೆ.

ಈ ಮಧ್ಯೆ ಸರಕಾರವೇ ಬದಲಾದದ್ದು ಭೂಪಲದ ಜನತೆಗೆ ಕರಾಳಕರವಾಗಬಹುದು ಎನ್ನಲಾಗಿತ್ತು. ಕಾಂಗ್ರೆ ನೆರವಿನೊಂದಿಗೆ ಆಡಳಿತ ನಡೆಸುತ್ತಿರುವ ಚಂದ್ರಶೇಖರ್ ಸರಕಾರ ಕಾಂಗ್ರೆ ಮಾಡಿಕೊಂಡ ಒಪ್ಪಂದಕ್ಕೆ ಪ್ರತಿರೋಧ ತೋರುವುದಾದರೂ ಹೇಗೆ? ಎಂಬುದೇ ಹಲವು ಸಂಶಯಗಳಿಗೆ ದಾರಿ ಮಾಡಿಕೊಟ್ಟಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ವಾದ ನಡೆಯುತ್ತಿರುವಾಗ ಸರಕಾರದ ಅಭಿಪ್ರಾಯ ಗೊತ್ತಿಲ್ಲ ಎಂಬ ಕಾರಣಕ್ಕಾಗಿಯೇ ವಿಚಾರಣೆ ಮುಂದೂಡುವ ಪರಿಸ್ಥಿತಿ ಬಂದಿತ್ತು. ಆದರೆ ಪ್ರಧಾನಿ ಚಂದ್ರಶೇಖರ್ ಸಾರ್ವಜನಿಕ ಶೃಂಗ ಮುಗಿಸಿ ಬಂದ ತಕ್ಷಣವೇ ತಾವು ಈ ಸಮಸ್ಯೆಗೆ ಸಂಬಂಧಿಸಿದಂತೆ ವಿ.ಪಿ. ಸರಕಾರದ ನಿಲುವನ್ನು ಬೆಂಬಲಿಸುವುದಾಗಿ ತಿಳಿಸಿದ್ದಾರೆ. ಇದರಿಂದ ಮತ್ತೆ ಭೂಪಾಲದಲ್ಲಿ ಆಶಾಕಿರಣಗಳು ಮೊಳಗಿವೆ.

ತಾತ್ಕಾಲಿಕ ಪರಿಹಾರವನ್ನು ಸಹ ಎಷ್ಟರಮಟ್ಟಿಗೆ ಸರಿಯಾಗಿ ವಿತರಣೆ ಮಾಡಲಾಗುತ್ತದೆ ಎಂಬುದು ಪ್ರಶ್ನೆಯಾಗಿ ಉಳಿದಿದೆ. ಪರಿಹಾರಕ್ಕೆ ಬಾಯಿಬಿಡುವ ಸರಕಾರಿ ಯಂತ್ರಗಳ ಮೇಲೆ ನಿಗಾ ಇರಿಸಬೇಕಾಗಿದೆ. ಇದಲ್ಲದೆ ಪ್ರತಿಯೊಬ್ಬರಿಗೂ 200 ರೂ ಎಂಬ ವಿತರಣೆಯೂ 'ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ' ವಾಗುವ ಸಂಭವವೂ ಇದೆ. ಸಂಪೂರ್ಣ ವಿಕಲಾಂಗರಾಗಿರುವವರಿಗೂ 200 ರೂ ದುಡಿಯಲು ಶಕ್ತಿಇದ್ದು ನೊಂದವರಿಗೂ 20 0 ರೂ ಎನ್ನುವುದು ಅಸಮರ್ಪಕ. ಹೀಗಾಗಿ ದುರಂತದ ಪರಿಣಾಮವನ್ನೂ ಗಣನೆಗೆ ತಂದುಕೊಳ್ಳಬೇಕು.

ಕಳ್ಳನ ಮನಸ್ಸು ಹುಳ್ಳಗೆ

ಈ ಮಧ್ಯೆ ಅಮೇರಿಕಾದಲ್ಲಿ ವಾತಾವರಣವನ್ನು ಕಲುಷಿತಗೊಳಿಸುವುದಿಲ್ಲವೆಂದು ಘೋಷಿಸಲು ಹಲವು ಕೈಗಾರಿಕಾ ಸಂಸ್ಥೆಗಳು ಸಮಾವೇಶವನ್ನು ಏರ್ಪಡಿಸಿದ್ದವು. ಯೂನಿಯನ್ ಕಾರ್ಬೈಡ್ ಸಂಸ್ಥೆಯೂ ಈ ಸಮಾವೇಶದಲ್ಲಿ ಭಾಗವಹಿಸಬೇಕಾಗಿತ್ತು. 'ಕಳ್ಳನ ಮನಸ್ಸು ಹುಳ್ಳಗೆ' ಎಂಬಂತೆ ಯೂನಿಯನ್ ಕಾರ್ಬೈಡ್ ಗೆ ಹೆದರಿಕೆ ಆರಂಭವಾಗಿ ಸಭೆಯಲ್ಲಿ ಭೂಪಾಲ ದುರಂತದ ಪ್ರಶ್ನೆ ಧುತ್ತೆಂದು ಎದ್ದೇಳಬಹುದೆಂದು ಭಾವಿಸಿ ಸಮಾವೇಶಕ್ಕೆ ಕುಂಟು ನೆಪ ಒಡ್ಡಿ ಹಿಂದೆ ಸರಿಯಿತು. ಇದನ್ನು ಎಲ್ಲಾ ಕೈಗಾರಿಕಾ ಸಂಸ್ಥೆಗಳು ಖಂಡಿಸಿವೆ. ಇಷ್ಟೇ ಅಲ್ಲದೆ ಸಭೆ ನಡೆಯುತ್ತಿದ್ದಾಗ ಹೊರಗೆ ಸೇರಿದ್ದ ಸಾವಿರಾರು ಜನರ ತಂಡ 'ಭೂಪಾಲ ದುರಂತ' ರತ್ತ ಜನರ, ಸಮಾವೇಶದ ಭಾಗಿಗಳ ಗಮನ ಸೆಳೆದಿದೆ.

ಬಯಲಾದ ಬಿಜೆಪಿ

ಭೂಪಲ ಅನಿಲ ಸಂತ್ರಸ್ಥರಿಗೆ ನೆರವಾಗುವುದರಿಂದ ಮಧ್ಯಪ್ರದೇಶದ ಬಿಜೆಪಿ ಸರಕಾರ ದೂರ ಸರಿದಿದೆ. ವಿ.ಪಿ.ಸಿಂಗ್ ಸರಕಾರ ಮುಂದಾಗಿ ಮಂಡಿಸಿದ್ದ ಮಧ್ಯಂತರ ಪರಿಹಾರದ ವಿರುದ್ಧ ಕೀರಲು ದನಿ ಎತ್ತಿದೆ. ಈ ಮಧ್ಯೆ ಚಂದ್ರಶೇಖರ್ ಸರಕಾರವೂ ವಿ.ಪಿ. ನೀತಿ ಬೆಂಬಲಿಸಿರುವುದು ಬಿಜೆಪಿಗೆ ರಾಜಕೀಯ ದ್ವೇಷದ ಕಾರಣವಾಗಿ ಇರಿಸುಮುರಿಸುನ್ನುಂಟುಮಾಡಿದೆ. ಮಧ್ಯಪ್ರದೇಶದ ಭೂಪಾಲ ದುರಂತ ಪರಿಹಾರ ಖಾತೆ ಸಚಿವ ಈ ಬಗ್ಗೆ ಬಹಿರಂಗ ಹೇಳಿಕೆ ನೀಡತೊಡಗಿದ್ದಾರೆ.

ಈ

ಅಸಮಧಾನ ಬಿಜೆಪಿ ವಿ.ಪಿ.ಸಿಂಗ್‌ರವರ ಮೇಲೆ ಹಲ್ಲೆ ಮಾಡುವುದರಲ್ಲಿ ಪರ್ಯಾವಸಾನಗೊಂಡಿದೆ. ವಿ.ಪಿ.ಸಿಂಗ್, ಎಸ್.ಆರ್. ಬೊಮ್ಮಾಯಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರಾದ ಹರ್‌ಕಿಷನ್ ಸಿಂಗ್ ಸುರ್ಜಿತ್ ಅವರು ಭೂಪಾಲ ಅನಿಲ ದುರಂತದ 6 ನೇ ವಾರ್ಷಿಕೋತ್ಸವದ ಬಹಿರಂಗ ಸಭೆ ಉದ್ದೇಶಿ ಮಾತನಾಡಲು ಭೂಪಾಲಕ್ಕೆ ಬಂದಿಳಿದಾಗ ಅವರ ಮೇಲೆ ಹಲ್ಲೆ ಮಾಡಲಾಗಿದೆ. ಇಷ್ಟೇ ಅಲ್ಲದೆ ಸಭೆಯ ವೇದಿಕೆ, ಪಾಮಿಯಾನ ಸುಟ್ಟುಹಾಕಲಾಗಿದೆ. ಬಿಜೆಪಿಯ ಅಂತರಂಗದ ಬಹಿರಂಗಗೊಂಡು ಬೀದಿಗೆ ಬಿದ್ದಿದೆ

ಎವರೆಡಿ ಬೇಡ

ಇಷ್ಟೆಲ್ಲಾ ಆದರೂ ಯೂನಿಯನ್ ಕಾರ್ಬೈಡ್‌ಗೆ ನಾವು ಪಾಠ ಕಲಿಸಿದ್ದೇವೆಯೇ? ಯೂನಿಯನ್ ಕಾರ್ಬೈಡ್‌ನ ಉತ್ಪಾದನೆಗಳು ರಾಜಾರೋಷವಾಗಿ ಭಾರತದ ಎಲ್ಲೆಡೆ ಮಾರಾಟವಾಗುತ್ತಿದೆ.

'ಎವರೆಡಿ' ಬ್ಯಾಟರಿ ನಿಮ್ಮ ಮನೆಯ ಸನಿಹದ ಅಂಗಡಿಗಳಿಂದ ಮಾಯವಾಗಿದೆಯೇ? ಖಂಡಿತಾ ಇಲ್ಲ. ಯೂನಿಯನ್ ಕಾರ್ಬೈಡ್‌ಗೆ ನಾವು ಪಾಠ ಕಲಿಸುವಲ್ಲಿ ಅಳಿಲು ಸೇವೆ ಸಲ್ಲಿಸಬೇಕು. ಹೇಗೆ? ನೀವು ಬ್ಯಾಟರಿ ಕೊಳ್ಳಲು ಅಂಗಡಿಗೆ ಹೋದಾಗ 'ಎವರೆಡಿ' ಬೇಡ ಎನ್ನಿ, ಬೇರೆ ಕೊಳ್ಳಿ. ಯೂನಿಯನ್ ಕಾರ್ಬೈಡ್‌ನ ಉತ್ಪಾದನೆಗಳು ಯಾವುವು ಎಂಬುದನ್ನು ಮೊದಲು ಪಟ್ಟಿ ಮಾಡಿ. ನಂತರ ಅವುಗಳನ್ನು ಕೊಳ್ಳುವುದನ್ನು ನಿಲ್ಲಿಸಿ. ಇಡೀ ಭಾರತದ ಬಳಕೆದಾರರು ಹೀಗೆ ಬಹಿಷ್ಕರಿಸಿದರೆ ಯೂನಿಯನ್ ಕಾರ್ಬೈಡ್ ವಿಚಲಿತವಾಗುವುದಿಲ್ಲವೇ? ಇಂದಲ್ಲ ನಾಳೆಯಾದರೂ ಬೀದಿಗೆ ಹರಡುವುದಾದ ಭೂಪಾಲ ಘಟನೆಯ ಬಗ್ಗೆ ಅವರಿಗೆ ಪಾಠ ಕಲಿಸಿದಂತಾಗುವುದಿಲ್ಲವೇ?



ಇಂದಿನ ಗೊಂದಲಮಯ ಸಂದರ್ಭಸಾಧಕ ರಾಜಕೀಯ ವಾತಾವರಣದಲ್ಲಿ ಸಿಪಿಐ(ಎಂ) ವಿವಿಧ ಪಕ್ಷ, ವ್ಯಕ್ತಿಗಳ ಮುಂದೆ ಒಂದು ಸ್ಪಷ್ಟ ತತ್ವಬದ್ಧ ನಿಲುವನ್ನು ತಳೆಯಿತು ಮತ್ತು ವಿವಿಧ ಪಕ್ಷ, ವ್ಯಕ್ತಿಗಳ ಮುಂದೆ ಒಂದು ತತ್ವಬದ್ಧ ಸವಾಲನ್ನು ಮುಂದೊಡ್ಡಿತು. ಆದ್ದರಿಂದ ಪ್ರಸಕ್ತ ರಾಜಕೀಯದ ವಿವಿಧ ಮುಖಗಳ ಬಗ್ಗೆ ಪಕ್ಷದ ನಿಲುವನ್ನು, ಅದರಲ್ಲಿಯೂ ನೀವು ಪ್ರಧಾನಿಯಾಗುವುದಾದರೆ ನಾವೆಲ್ಲಾ ಬೆಂಬಲಿಸುತ್ತೇವೆ ಎಂದು ಬಿಜೆಪಿಯನ್ನು ಹೊರತುಪಡಿಸಿ ಎಲ್ಲಾ ಪಕ್ಷಗಳು ಅಭಿಪ್ರಾಯಪಟ್ಟರೂ "ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ" ಎಂದು ಇಂತಹ ಸ್ಥಾನವನ್ನು ನಿರಾಕರಿಸಿದ ಜ್ಯೋತಿಬಸುರವರ ಅಭಿಪ್ರಾಯವನ್ನು ತಿಳಿಯಲು ಜನಸಾಮಾನ್ಯರಿಗೆ ಕುತೂಹಲ. ಜನಸಾಮಾನ್ಯರ ಮನಸ್ಸಿನ ಈ ಭಾವನೆಗಳಿಗೆ ಬಂಡವಾಳಶಾಹಿ ಪತ್ರಿಕೆಗಳು ಅವುಗಳ ಸ್ವಂತ ನಿಲುವು ಏನೇ ಆದರೂ ಪ್ರತಿಕ್ರಿಯಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಪ್ರಧಾನ ಪತ್ರಿಕಾ ಸರಣಿ 'ಇಂಡಿಯನ್ ಎಕ್ಸ್‌ಪ್ರೆಸ್' ಜ್ಯೋತಿಬಸುರವರ ಸುದೀರ್ಘ ಸಂದರ್ಶನವೊಂದನ್ನು ಮಾಡಿದ್ದಾರೆ.

ಈ ಸಂದರ್ಶನ ನಮ್ಮ ಓದುಗರಿಗೂ ಹಲವು ವಿಷಯಗಳ ಬಗ್ಗೆ ಮಾಹಿತಿ ನೀಡುವುದರಿಂದ ಆಯ್ದ ಭಾಗಗಳನ್ನು ಪ್ರಕಟಿಸಲಾಗಿದೆ.

ರಾಷ್ಟ್ರೀಯ ರಂಗ ಸರಕಾರ ಒಂದೆರಡು ವರ್ಷಗಳ ಕಾಲ ಉಳಿದಿದ್ದರೆ “ಕಾಂಗ್ರೈ ಪಕ್ಷ ಸರ್ವನಾಶವಾಗುತ್ತಿತ್ತು”

* ಕೋಮು ಶಕ್ತಿಗಳು ದೇಶದ ಐಕ್ಯತೆಗೆ ಸಮಗ್ರತೆಗೆ ಒಡ್ಡಿರುವ ಸವಾಲನ್ನು ಗಮನಿಸಿ ಜಾತ್ಯತೀತ ಶಕ್ತಿಗಳು ತಕ್ಷಣ ಮರು ಗುಂಪುಗೊಳ್ಳುವ ಅಗತ್ಯವಿದೆಯೇ?

ಮರು ಗುಂಪುಗೊಳ್ಳುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಜಾತ್ಯತೀತ ಶಕ್ತಿಗಳು, ಅದು ಸರಕಾರದಲ್ಲಿರಲಿ, ಹೊರಗಿರಲಿ ಒಟ್ಟಾಗಬೇಕು. ಇದು ಸದಾ ನಮ್ಮ ದೃಷ್ಟಿಕೋನ.

* ಹೇಗೆ ಒಟ್ಟಾಗುವುದು?

ಅವರು ಸ್ವತಂತ್ರವಾಗಿ ಮುಂದುವರಿಯಬಹುದು. ಅಥವಾ ಸಾಮೂಹಿಕವಾಗಿ ಒಂದು ಸರಕಾರ ಪ್ರಾಮಾಣಿಕ ಪ್ರಯತ್ನ ನಡೆಸುವುದಾದರೆ ಎಲ್ಲಾ ಜಾತ್ಯತೀತ ಶಕ್ತಿಗಳನ್ನು ಕರೆದು ಅವುಗಳ ಸಹಾಯದಿಂದ ಜನರಿಗೆ ಶಿಕ್ಷಣ ನೀಡಿ ಕೋಮು ಶಕ್ತಿಗಳನ್ನು ಮೂಲೆಗೊತ್ತಬಹುದು.

* ಕಾಂಗ್ರೆಸ್(ಐ)ಗೆ ನಿಮ್ಮ ಇಂತಹ ಯೋಜನೆಯಲ್ಲಿ ಜಾಗವಿದೆಯೇ?

ಹಿಂದೆ ಕಾಂಗ್ರೆಸ್ ಕೋಮುವಾದಿ ಪಕ್ಷ ಅಲ್ಲ ಎಂದು ನಾವು ಹೇಳಿದ್ದೇವೆ. ಆದರೆ ಇಂದು ದೇಶದಲ್ಲಿ ಏನು ನಡೆಯುತ್ತಿದೆಯೋ ಅದಕ್ಕೆ ಅದೇ ಹೊಣೆ ಎಂದೂ ಹೇಳಿದ್ದೆವು. ಈಗಲೂ ಅದನ್ನೇ ಹೇಳುತ್ತೇವೆ. ಈ ದೊಡ್ಡ ಪಕ್ಷ ಸ್ವಾತಂತ್ರ್ಯ ಸಿಕ್ಕಂದಿನಿಂದ, ವಿಶೇಷವಾಗಿ ಉತ್ತರಾರ್ಧದಲ್ಲಿ ಕೋಮು ಶಕ್ತಿಗಳೊಂದಿಗೆ ಲಾಬಿ ಮಾಡಿಕೊಂಡಿದೆ. ಶಾ ಬಾನು ಕೇಸ್ ಮತ್ತು ರಾಮಜನ್ಮ ಭೂಮಿ-ಬಾಬ್ರಿ ಮಸೀದಿ ವಿವಾದ ಎರಡು ಉದಾಹರಣೆಗಳಷ್ಟೆ.

* ಎಡಪಂಥೀಯರು ಕಾಂಗ್ರೆಸ್(ಐ)ನೊಂದಿಗೆ ಜಾತ್ಯತೀತತೆಯ ಪ್ರಶ್ನೆಯಲ್ಲಿ ಜತೆಗೂಡಬಾರದೇಕೆ?

ಹೌದು. ಕಾಂಗ್ರೆಸ್ ಜಾತ್ಯತೀತ ಪಕ್ಷ. ಆದರೆ ಚುನಾವಣಾ ಕಾರಣಗಳಿಗಾಗಿ ಅದು ಸದಾ ಕೋಮುವಾದಿ ಶಕ್ತಿಗಳೊಂದಿಗೆ ರಾಜಿಮಾಡಿಕೊಂಡಿದೆ. ಈಗಲೂ ಮುಸ್ಲಿಂ ಲೀಗ್‌ನ ಜೊತೆ ಅದರ ಮೈತ್ರಿ ಇದೆ. ಹೌದು-ನಾವು ಕೇರಳದಲ್ಲಿ ಒಂದು ತಪ್ಪು ಮಾಡಿದೆವು. ಆದರೆ ನಂತರ ಅದನ್ನು ಸರಿಪಡಿಸಿಕೊಂಡೆವು. ಈಗಿರುವಂಥಾ ಪರಿಸ್ಥಿತಿಯನ್ನು ಸೃಷ್ಟಿಸಿದವರೇ ಅವರಾದ್ದರಿಂದ ಜಾತ್ಯತೀತ ಶಕ್ತಿಗಳನ್ನು ಒಟ್ಟಾಗಿಸಬೇಕಾದರೆ ಅವರು ತಮ್ಮ ನಿಯಮಗಳ ಮರುಚಿಂತನೆ ಮಾಡಬೇಕು. ಆತ್ಮ ವಿಮರ್ಶೆ ಮಾಡಿಕೊಳ್ಳಬೇಕು. ಆದರೆ ಅವರಿಗಿನ್ನೂ ಬಾಗಿಲು ತೆರೆದಿದೆ. ಹೌದು-ಏಕಾಗಬಾರದು.?

* ಮುಲಾಯಂಸಿಂಗ್ ಚಂದ್ರಶೇಖರ್ ಜತೆಗಿದ್ದರೂ ಇನ್ನೂ ಅವರು ವಿ.ಪಿ.ಸಿಂಗ್ ಸಮಯದಲ್ಲಿದ್ದಂತೆ ಇದ್ದಾರೆಂದು ನಿಮಗನ್ನಿಸುತ್ತದೆಯೇ?

ಹೌದು. ಉತ್ತರಪ್ರದೇಶದಲ್ಲಿ ಮುಲಾಯಂ ಸಿಂಗ್ ಅತ್ಯುತ್ತಮ ಕೆಲಸ ಮಾಡಿದರು. ಇದರಲ್ಲಿ ನಾವು ಅವರಿಗೆ ನೆರವಾದೆವು. ಕಷ್ಟದ ಕೆಲಸವಾಗಿತ್ತು. 'ನಿಮ್ಮ ಪೋಲೀಸರು ದಂಗೆ ಏಳದಂತೆ ಎಚ್ಚರವಹಿಸಿ' ಎಂದೆವು. ಕೇಂದ್ರ ಸರಕಾರವೂ ಇದರಲ್ಲಿ ಅವರಿಗೆ ನೆರವಾಯಿತು. ಮುಂಬರುವ ದಿನಗಳಲ್ಲಿ ಅವರು ಏನು ಮಾಡುತ್ತಾರೋ ನೋಡೋಣ, ಮುಂದಿನ ಸುತ್ತಿನ ಕರಸೇವೆ ಆರಂಭವಾಗುವ ಡಿಸೆಂಬರ್ 6 ರಂದು.

* ಚಂದ್ರಶೇಖರರನ್ನು ಅನೀತಿಯುತ ರಾಜಕಾರಣಿ ಎಂದು ನೀವು ಟೀಕಿಸುತ್ತೀರಿ. ಆದರೆ ದೇವಿಲಾಲರ ಮೂಲಕ ತಂತ್ರ ಮಾಡಿ ವಿ.ಪಿ.ಸಿಂಗ್ ಪ್ರಧಾನಿಯಾದರು. ಅಷ್ಟೇ ಅನೀತಿಯುತ ಎಂದು ನಿಮಗನಿಸುವುದಿಲ್ಲವೇ?

ಇಲ್ಲ. ಇಲ್ಲ. ಅದು ಜನತಾದಳದ ವಿಷಯವಾಗಿತ್ತು. ಹೌದು-ಅದು ಸರಿಯಲ್ಲ. ನಾವದನ್ನು ಒಪ್ಪಲು ಸಾಧ್ಯವಿಲ್ಲ. ಆದರೆ ಪಕ್ಷಗಳ ಆಂತರಿಕ ವಿಷಯಗಳ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಅದಕ್ಕೂ ಚಂದ್ರಶೇಖರ್‌ಗಂತೂ ಸಂಬಂಧವಿರಲಿಲ್ಲ. ಜನ ಏಕೆ ಪಾಠ ಕಲಿಯುವುದಿಲ್ಲವೋ ಅರ್ಥವಾಗುವುದಿಲ್ಲ. ಬಹುಶಃ ಸಂಸದೀಯ ಪ್ರಜಾಪ್ರಭುತ್ವದ ಅರಿವು ಇಲ್ಲದ್ದರಿಂದ ಇರಬೇಕು. ಒಂದು ನಿರ್ದಿಷ್ಟ ಕಾರ್ಯಕ್ರಮದೊಂದಿಗೆ, ಒಂದು ಪಕ್ಷದ ಕಾರ್ಯಕ್ರಮ ಧೋರಣೆಗಳನ್ನು ವಿರೋಧಿಸಿ ಜನರೆದುರು ಹೋಗುತ್ತೀರಿ. ಮರುದಿನ ಜನರ ಹತ್ತಿರ ಹೋಗಿ ಹೇಳುತ್ತೀರಿ--"ನಾನು ಮಿತ್ರರನ್ನು ಬದಲಿಸಿದ್ದೇನೆ. ನಿನ್ನೆಯ ಶತ್ರು ಇಂದು ನನ್ನ ಮಿತ್ರ "ಎನ್ನುತ್ತೀರಿ. ಆದರೆ ಆದೇಕೆ, ನಿಮ್ಮ ಕಾರ್ಯಕ್ರಮ, ಧೋರಣೆಗಳೇನು ಎಂದೂ ಜನಕ್ಕೆ ನೀವು ಹೇಳಬೇಕು. ಇಲ್ಲವಾದರೆ ಕೆಟ್ಟ ಪರಂಪರೆ ಹಾಕಿದಂತೆ. ನಾವು ಜನರಿಗೆ ಇದನ್ನು ಹೇಳಲು ಪ್ರಯತ್ನಿಸುತ್ತಿದ್ದೇವೆ. ಅವರು ಒಪ್ಪುತ್ತಾರೆಂದು ನನ್ನ ನಿರೀಕ್ಷೆ. ಆದರೆ ಒಪ್ಪುತ್ತಾರೋ ಗೊತ್ತಿಲ್ಲ.

* ವಿ.ಪಿ.ಸಿಂಗ್ ನಿರ್ಣಾಯಕ ವಿಷಯಗಳಲ್ಲಿ ಏಕಪಕ್ಷೀಯ, ತನಗೆ ತೋಚಿದ ನಿರ್ಣಯ ಕೈಗೊಳ್ಳುವ ಪ್ರವೃತ್ತಿ ತೋರಿಲ್ಲವೇ?

ನಿಮಗೆ ಹೇಗೆ ಗೊತ್ತು. ಅವರ ನಿರ್ಣಯಗಳು ಏಕಪಕ್ಷೀಯವೆಂದು? ತನ್ನ ಸಹದ್ಯೋಗಿಗಳೊಂದಿಗೆ ಸಮಾಲೋಚನೆ ನಡೆಸಿಲ್ಲವೆಂದು ನಿಮಗೆ ಹೇಗೆ ಗೊತ್ತು?. ....ಯಾವ ಸಂದರ್ಭದಲ್ಲೂಅವರ ಯಾವುದೇ ಸಹದ್ಯೋಗಿ ಅವರ ನಿರ್ಣಯಗಳ ಬಗ್ಗೆ ಪ್ರತಿಭಟನೆ ಎತ್ತಿದ್ದು ನನಗೆ ಕಂಡಿಲ್ಲ..... ಅವರ ಪಕ್ಷದೊಳಗೆ ಭಿನ್ನಾಭಿಪ್ರಾಯ ಇರಬಹುದು. ನಾನು ಅದನ್ನು ಹೀಗೆ ತೋರಿಸುತ್ತೇನೆ. ಯಾವುದಾದರು ನಿರ್ಣಯ ತಪ್ಪೆಂದು ಸಾಬೀತಾದರೆ ಅದರ ಜವಾಬ್ದಾರಿ ಇಡೀ ಸರಕಾರದ್ದು, ಒಬ್ಬ ವ್ಯಕ್ತಿಯದ್ದಲ್ಲ. ಚಂದ್ರಶೇಖರ್ ಆಳುವ ಪಕ್ಷದ ಮುಖಂಡರಾಗಿದ್ದರು. ಅವರೇಕೆ ತಮ್ಮ ಪಕ್ಷದ ವೇದಿಕೆಯಲ್ಲಿ ತಮ್ಮ ಧ್ವನಿ ಎತ್ತಲಿಲ್ಲ? ನಾನು ಈ ಬಗ್ಗೆ ಹಲವು ಬಾರಿ ಅವರನ್ನು ವಿಚಾರಿಸಿದ್ದೆ. "ನಮ್ಮ ಪಕ್ಷ ಕೆಲಸವೇ ಮಾಡುವುದಿಲ್ಲ"-ಎಂದರು ಅವರು. ಕನಿಷ್ಠ ನಿಮಗಾದರೂ ಗೊತ್ತಿರಬೇಕು, ನೀವು ಪ್ರಧಾನ ಮಂತ್ರಿಯಾಗಿದ್ದಿರಲ್ಲಾ ಎಂದು ರಾಜೀವ್ ಗಾಂಧಿಗೂ ಹೇಳಿದ್ದೆ. ನೀವೇಕೆ ವಿ.ಪಿ.ಯನ್ನು ಕೈಬಿಡಿ ಎಂದು ಕೇಳುತ್ತಿದ್ದೀರಿ? ಇಡೀ ರಾಷ್ಟ್ರೀಯ ರಂಗ ಸರಕಾರವೇ ಹೋಗಬೇಕೆಂದು ನೀವು ಕೇಳಬೇಕು....ಎಂದಿದ್ದೆ.

* ಅಂದರೆ ಯಾವುದೇ ವ್ಯಕ್ತಿ ಆತ ಪ್ರಧಾನ ಮಂತ್ರಿಯಾಗಿದ್ದರೂ ಟೀಕೆಯ ಗುರಿಯಾಗಬಾರದೇ?

ಹೌದು. ನಾನು ಹಾಗೆ ಭಾವಿಸುತ್ತೇನೆ.

* ಆದರೆ ರಾಜೀವ್ ಗಾಂಧಿ ಪ್ರಧಾನ ಮಂತ್ರಿಯಾಗಿದ್ದಾಗ ನೀವು ಅವರು ಕೆಳಗಿಳಿಯಬೇಕು ಎನ್ನಲಿಲ್ಲವೇ? ಕಳೆದ ಚುನಾವಣೆಗಳಲ್ಲಿ ಅದು ನಿಮ್ಮ ಪ್ರಮುಖ ಪ್ರಚಾರದ ವಿಷಯವಾಗಿರಲಿಲ್ಲವೇ?

ಇಲ್ಲ. ಎಂದೂ ಇಲ್ಲ. ರಾಜೀವ್ ಗಾಂಧಿಯಲ್ಲ ಅವರ ಪಕ್ಷದ ಧೋರಣೆಗಳು ತಪ್ಪು ಎಂದು ನಾವು ಹೇಳಿದ್ದೆವು. ರಾಜೀವ್ ಗಾಂಧಿಯವರಿಗೂ ನಾನು ಇದನ್ನೇ ಹೇಳಿದ್ದೆ. ಸಹಜವಾಗಿಯೇ ಪ್ರಧಾನಿಯವರೂ ಇಳಿಯಬೇಕಾಗುತ್ತದೆ.........ನಾವು ಸಮಯಸಾಧಕರಲ್ಲ. ನಮ್ಮ ಸಂಖ್ಯೆ ಸೊನ್ನೆಗಿಳಿದರೂ ಚಿಂತೆಯಿಲ್ಲ. ದೇಶದಲ್ಲಿ ಈಗಲೂ ನೀತಿಗಳಲ್ಲಿ ನಂಬಿಕೆ ಇಟ್ಟುಕೊಂಡಿರುವ ಕೆಲವೇ ಜನಗಳಲ್ಲಿ ನಾವೂ ಒಂದು.........ನನ್ನ ಈ ಹೇಳಿಕೆಗಳಿಗೆ ದಸ್ತಾವೇಜುಗಳ ಪುರಾವೆ ಕೂಡಾ ನೀಡಬಲ್ಲೆ.... ..ರಾಜೀವ್ ಗಾಂಧಿಯವರಿಗೂ ಈ ಬಗ್ಗೆ ನೆನಪಿಸಿದ್ದೆ. ಅದು ಬೇರೆ ಸಂಗತಿ.

* ಅದೇ ಆಳತೆಗೋಲು ಇಟ್ಟುಕೊಳ್ಳುವುದಾದರೆ ಚಂದ್ರಶೇಖರ್ ವಿ.ಪಿ.ಸಿಂಗ್ ಧೋರಣೆಗಳನ್ನು ವಿರೋಧಿಸಿಲ್ಲವೇ?

ಶೇಖರ್ ಸಾರ್ವಜನಿಕವಾಗಿ ರಾಷ್ಟ್ರೀಯ ರಂಗದ ಕೈಗಾರಿಕಾ ಧೋರಣೆಯನ್ನು ವಿರೋಧಿಸಿದ್ದರು. ವಿರೋಧಿಸಬೇಕೆಂದಿದ್ದರೆ ಪಕ್ಷದ ವೇದಿಕೆಯಲ್ಲಿ ಮಾಡಬಹುದಿತ್ತು. ಎಂದಾದರೂ ಅವರು ಅದನ್ನು ಮಾಡಿದರೇ? ಪಕ್ಷದ ಒಂದಾದರೂ ಸಭೆಯಲ್ಲಿ ಈ ಬಗ್ಗೆ ಭಾಗವಹಿಸಿದರೇ? ಮಂತ್ರಿಗಳನ್ನು ಕಂಡು ಮಾತನಾಡಿದರೇ? ನಾವೂ ಆ ಧೋರಣೆಯನ್ನು ವಿರೋಧಿಸಿದ್ದೇವೆ. ನಾವು ಪ್ರಧಾನ ಮಂತ್ರಿಗಳನ್ನು, ಕೈಗಾರಿಕಾ ಮಂತ್ರಿಗಳನ್ನು ಭೇಟಿಯಾಗಿದ್ದೆ. ಈ ಬಗ್ಗೆ ನಮಗೆ ಕಳಕಳಿ ಇತ್ತು. ಆದರೆ ಅವರಿಗೆ ಅದಿರಲಿಲ್ಲ. ಆದ್ದರಿಂದ ಈ ಬಗ್ಗೆ ಅವರ ವಿಶ್ವಾಸಾರ್ಹತೆಯೇನು? ಸೊನ್ನೆ.

* ವಿ.ಪಿ.ಸಿಂಗ್‌ರ ಅಯೋಧ್ಯೆ ಪ್ರಶ್ನೆಯ ನಿರ್ವಹಣೆ ಸ್ವಲ್ಪ ಗೋಜಲು ಗೋಜಲಾಗಿತ್ತು ಎಂದು ನೀವು ಹೇಳಬಲ್ಲಿರಾ?

ನಾನು ಹಾಗೆ ಭಾವಿಸುವುದಿಲ್ಲ. ವಿ.ಪಿ. ತನ್ನಿಂದಾದ್ದೆಲ್ಲಾ ಮಾಡಿದರು. ಈ ವಿವಾದದಲ್ಲಿ ತೊಡಗಿದ್ದವರೊಂದಿಗೆ ಒಂದು ರಾಜಿಗೆ ಬರಲು ಸಾಧ್ಯವೆಂದೇ ಅವರು ಮೊದಲಿಂದ ಭಾವಿಸಿದ್ದರು. ಮುಲಾಯಂ ಸಿಂಗ್‌ಗೆ ಇದರಿಂದ ಅವರ ಬಗ್ಗೆ ಸ್ವಲ್ಪ ಬೇಸರವಾಯಿತು. ವಿ.ಪಿ. ಸಿಂಗ್ ವಿ.ಎಚ್.ಪಿ.ಯೊಂದಿಗೆ ರಾಜಿ ಮಾಡಿಕೊಳ್ಳಲು ಯತ್ನಿಸಿದ ಕೈಗೊಂಡ ಕ್ರಮಗಳ ಬಗ್ಗೆ ಅವರಿಗೆ ತಿಳಿಸಲಿಲ್ಲ ಎಂದು ಮುಲಾಯಂ ಹೇಳಿದರು. ಅದೊಂದು ಬೇರೆಯೇ ಕಥೆ. ಆದರೂ ಕೊನೆಗೂ ವಿ.ಪಿ. ಕರಸೇವೆ ನಿಲ್ಲಿಸಲು ಮುಲಾಯಂ ಮತ್ತಿತರರ ಮೇಲೆ ಅವಲಂಬಿಸಿದರು.

* ಅಡ್ವಾನಿಯವರನ್ನು ರಥಯಾತ್ರೆ ಆರಂಭಿಸುವ ಮೊದಲೇ ತಡೆದಿದ್ದರೆ ಇಂತಹ ಸನ್ನಿವೇಶ ಬರುತ್ತಿಲಿಲ್ಲವಲ್ಲವೇ?

ಹಾಗೆಂದು ನೀವು ಹೇಗೆ ಹೇಳಬಲ್ಲಿರಿ? ಹಾಗೆ ಮಾಡಿದ್ದರೆ ತಮಗೆ ಅಸ್ತಿತ್ವ ಹೋಗುವ ಹಕ್ಕು ಕೊಡುತ್ತಿಲ್ಲ ಎಂದು ಬಿಜೆಪಿಯವರು ಹೇಳುತ್ತಿದ್ದರು. ಆದ್ದರಿಂದಲೇ ಕೊನೆ ಗಳಿಗೆಯವರೆಗೆ ಮಾತುಕತೆ ನಡೆಯಿತು. ಅಡ್ವಾನಿಯವರೊಂದಿಗೆ ನನ್ನ ಮಾತುಕತೆ ವಿಫಲವಾದ ಮೇಲೆ ಏನೂ ಆಸೆ ಇಟ್ಟುಕೊಳ್ಳುವಂತಿಲ್ಲ ಎಂದು ನನಗೆ ಅನಿಸಿತು. ಆಗ ವಿವಿಧ ಗುಂಪುಗಳನ್ನು ಒಟ್ಟಿಗೆ ತರಲು ಸಾಧ್ಯವಾಗಬಹುದು ಎಂದು ವಿ.ಪಿ.ಯವರಿಗೆ ಅನಿಸಿತು. ಏನೂ ಆಗಲಿಲ್ಲ.

* ವಿ.ಪಿ.ಸಿಂಗ್ ಅಕ್ಟೋಬರ್ 30 ರಂದು ತನಗೆ ಕರಸೇವೆಗೆ ಅವಕಾಶ ಕೊಡಲು ಕೇಳಿದರು ಎಂದು ಈಗ ಮುಲಾಯಂ ಸಿಂಗ್ ಹೇಳುತ್ತಾ ಇದ್ದಾರೆ. ನಿಮ್ಮ ಟಿಪ್ಪಣಿ.

ನನಗೆ ಗೊತ್ತಿಲ್ಲ. ನಾನೆಲ್ಲೂ ಇದನ್ನು ಓದಿಲ್ಲ. ಮುಲಾಯಂ ನನಗಿದನ್ನು ಹೇಳಿಲ್ಲ. ....ಈಗ ಅವರು ಹೀಗೆನ್ನುತ್ತಾರಾದರೆ ನಾನೇನು ಹೇಳಲಿ? ಅವರಂತೂ ಒಳ್ಳೆ ಕೆಲಸ ಮಾಡಿದ್ದಾರೆ.

* ಚಂದ್ರಶೇಖರ್-ಕಾಂಗ್ರೆಸ್(ಐ), ವಿ.ಪಿ.ಸಿಂಗ್-ಮುಲಾಯಂ ಜೊತೆಯನ್ನು ಒಡೆದು ಹಿಂದುಳಿದ ವರ್ಗಗಳು ಹಾಗೂ ಅಲ್ಪಸಂಖ್ಯಾತರನ್ನು ಪ್ರತ್ಯೇಕಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮುಂದಿನ ಚುನಾವಣೆಗಳಲ್ಲಿ ಇದರಿಂದ ವಿ.ಪಿ.ಸಿಂಗರಿಗೆ ತೊಂದರೆಯಾಗುವುದಿಲ್ಲವೇ? ಅವರು ಈ ಎರಡೂ ವಿಭಾಗಗಳ ಮೇಲೆ ಬಹಳಷ್ಟು ಅವಲಂಬಿಸಿದ್ದಾರಲ್ಲವೇ?

ಹೌದು. ಈ ಜತೆ ಒಡೆದಿದೆ. ಇದು ವಿ.ಪಿ.ಸಿಂಗರವರನ್ನು ಹೇಗೆ ತಟ್ಟುತ್ತದೆ-- ಹೇಳಲಾರೆ. ಮುಂದಿನ ಚುನಾವಣೆಗಳಲ್ಲಿ ದೇಶದಲ್ಲೆಲ್ಲಾ ಮತದಾನದ ರೀತಿ ಒಂದೇ ಇರುವುದಿಲ್ಲ. ಅಲ್ಲದೆ ಹಿಂದುಳಿದ ವರ್ಗಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲಿಸುತ್ತಿವೆ. ಬಿಜೆಪಿ ಕೂಡಾ. ಆದ್ದರಿಂದ ಅಂತಿಮವಾಗಿ ಏನಾಗಬಹುದು-- ನನಗೆ ಗೊತ್ತಿಲ್ಲ. ಈ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ.

* ಚಂದ್ರಶೇಖರ್ ಕಾಂಗ್ರೆಸ್ ಸೇರುವರೇ?

ಅವರು ಕಾಂಗ್ರೆಸ್ ಸೇರುತ್ತಾರೆ, ಅಥವಾ ಕಾಂಗ್ರೆಸ್ ಅವರನ್ನು ಸೇರುತ್ತದೆ. ಬೇರೆ ದಾರಿಯೇನಿದೆ?

* ಚಂದ್ರಶೇಖರ್‌ರವರೇ ಕಾಂಗ್ರೆಸ್ ನಾಯಕತ್ವ ವಹಿಸುವ ಸನ್ನಿವೇಶ ಕಾಣುತ್ತೀರಾ?

ನನಗೆ ಗೊತ್ತಿಲ್ಲ. ಈ ಪಕ್ಷಗಳಲ್ಲಿ ಏನೂ ಆಗಬಹುದು. ಆದರೆ ಹಾಗಾಗುವಂತೆ ಕಾಣುವುದಿಲ್ಲ.

* ಪ್ರಧಾನ ಮಂತ್ರಿ ಪದವಿಯಿಂದ ಇಳಿಸಿದ ಮೇಲೆ ರಾಜೀವ್ ಗಾಂಧಿ ರಾಜಕಾರಣಿಯಾಗಿ ಪ್ರಬುದ್ಧರಾಗಿದ್ದಾರೆಯೇ?

ಜನಗಳ ಬಗ್ಗೆ ತೀರ್ಪು ನೀಡಲು ನಾನು ಹೋಗುವುದಿಲ್ಲ. ಮೊನ್ನೆಯಷ್ಟೇ ಅವರೊಡನೆ ತಮಾಷೆಯಾಗಿ ಹೇಳಿದ್ದೆ--ವಿರೋಧಿ ಮುಖಂಡರಾಗಿ ನೀವು ಸರಿಯಾದ, ಒಳ್ಳೆಯ ಹೇಳಿಕೆ ನೀಡುತ್ತಿದ್ದೀರಿ--ಪ್ರಧಾನ ಮಂತ್ರಿಯಾಗಿ ನೀವು ಹಾಗೆ ಮಾಡುತ್ತಿರಲಿಲ್ಲ!

* ಅವರು ರಾಜಕೀಯ ಚಾಣಾಕ್ಷತನದಲ್ಲಿ ಚಂದ್ರಶೇಖರ್‌ಗೆ ಸರಿಸಾಟಿಯಾಗಬಲ್ಲರೇ? ಅಥವಾ ಕೊನೆಗೆ ಚಂದ್ರಶೇಖರ್ ಅವರನ್ನು ನುಂಗಿಬಿಡುವರೇ?

ಇಲ್ಲ. ಇಲ್ಲ. ನಾನು ಈ ಜನಗಳನ್ನು ದೇವರೆಂದು ಭಾವಿಸುವುದಿಲ್ಲ. ಅವರು ಅಷ್ಟೊಂದು ಶಕ್ತಿಶಾಲಿಗಳಲ್ಲ. ದೇಶದಲ್ಲಿ ಇತರ ಶಕ್ತಿಗಳು ಕಾರ್ಯನಿರತವಾಗಿವೆ. ವ್ಯಕ್ತಿಗಳು ಆ ರೀತಿಯಲ್ಲಿ ಲೆಕ್ಕಕ್ಕೆ ಬರುವುದಿಲ್ಲ.

* ಆದರೆ ಕಾಂಗ್ರೆಸ್‌ನಲ್ಲಿ ಕೇವಲ ವ್ಯಕ್ತಿಗಳದ್ದೇ ಲೆಕ್ಕ.

ಇಲ್ಲ. ಇಲ್ಲ. ದೇಶದಲ್ಲೆಲ್ಲಾ ವ್ಯಕ್ತಿಗಳು ಅವರವರ ಪಕ್ಷದ ಮೇಲೆಯೇ ಅವಲಂಬಿಸಬೇಕು.

* ಕಾಂಗ್ರೆಸ್‌ನಿಂದ ವಿ.ಪಿ. ನೇತೃತ್ವದ ಜನತಾದಳ ಒಡೆದು ಜನತಾದಳ(ಎಸ್)ನತ್ತ ಧಾವಿಸಬಹುದೇ?

ಎರಡೂ ಪಕ್ಷಗಳು ಸನ್ನದ್ಧಗೊಳ್ಳುತ್ತಿವೆ. ಜನತಾದಳವನ್ನು ಒಡೆದು, ಅದರ ಮೊದಲು ಎಲ್ಲಾ ರೀತಿಯ ವಿನಾಶಕಾರಿ ಹೇಳಿಕೆಗಳ ಮೂಲಕ ಪಕ್ಷವನ್ನು ದುರ್ಬಲಗೊಳಿಸಿ ಚಂದ್ರಶೇಖರ್ ಕಾಂಗ್ರೆಸ್ ಒಡೆದು ಅದು ಅದರ ಸದಸ್ಯರು ಬೇರೆಡೆಗೆ ಧಾವಿಸುವುದನ್ನು ತಡೆದಿದ್ದಾರೆ. ರಾಷ್ಟ್ರೀಯ ರಂಗ ಸರಕಾರ ಎರಡು ವರ್ಷಗಳ ಕಾಲ ಉಳಿದಿದ್ದರೆ ಕಾಂಗ್ರೆಸ್ ಸೊನ್ನೆಯಾಗುತ್ತಿತ್ತು.

* ಚುನಾವಣೆಗಳು ಯಾವಾಗ ನಡೆಯಬಹುದು?

ಮುಂದಿನ ಬಜೆಟ್‌ವರೆಗ ಚುನಾವಣೆಯಿರುವುದಿಲ್ಲ. ವರ್ಷದ ಕೊನೆಗೆ ನಡೆಬಹುದು. ಕಾಂಗ್ರೆಸ್ ಚುನಾವಣೆಗೆ ಯಾವಾಗ ಸಿದ್ಧವಾಗುತ್ತದೋ ಅದರ ಮೇಲೆ ಎಲ್ಲವೂ ಹೊಂದಿಕೊಂಡಿದೆ.

* ಮುಂಬರಬಹುದಾದ ರಾಜಕೀಯ ಮೈತ್ರಿ ಹೇಗಿರುತ್ತದೆ? ಜನತಾದಳ, ಎಡ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳು

ಪ್ರಾದೇಶಿಕ ಪಕ್ಷಗಳು ರಾಷ್ಟ್ರೀಯ ರಂಗದ ಭಾಗ. ಅವೆಲ್ಲಾ ನಮ್ಮೊಡನೆ ಇರುತ್ತವೆಯೋ ನೋಡಬೇಕು. ಅವರೊಡನೆ ಮಾತುಕತೆ ಮುಂದುವರಿಯುತ್ತಿದೆ.

* ಜನತಾದಳ--ಎಡ ಪಕ್ಷಗಳ ಕೂಟ ಚುನಾವಣೆ ಗೆಲ್ಲಬಹುದೇ? ಕೇಂದ್ರದಲ್ಲಿ ನೀವು ಅಧಿಕಾರ ಹಂಚಿಕೊಳ್ಳುತ್ತೀರಾ?

ಇಲ್ಲ. ಇಲ್ಲ. ಸಧ್ಯ ನಮಗೆ ಇಂತಹ ವಿಚಾರವಿಲ್ಲ. ಏಕೆಂದರೆ ನಾವು ಶಕ್ತಿಶಾಲಿಯಾಗಿಲ್ಲ. ಆದರೆ ಎಲ್ಲವೂ ವಿವಿಧ ಶಕ್ತಿಗಳ ಮರು ಹೊಂದಾಣಿಕೆಯನ್ನು ಹೊಂದಿಕೊಂಡಿದೆ. ಈಗಿನ ಸನ್ನಿವೇಶದಲ್ಲಿ ಕೇಂದ್ರದಲ್ಲಿ ಅಧಿಕಾರ ಹಂಚಿಕೊಳ್ಳುವ ಸಂದರ್ಭ ನಾನು ಕಾಣು-

ಪುಟ 5 ಕ್ಕೆ

ಪಂಜಾಬಿನಲ್ಲಿ ಸ್ಥಿತಿ ಹದಗೆಡುತ್ತಿದೆ. ಪಾಕಿಸ್ತಾನದ ರಾಜಕೀಯ ಬೆಳವಣಿಗೆಗಳು ಹಾಗೂ ನಮ್ಮ ದೇಶದಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿನ ಬದಲಾವಣೆಗಳು ಕಾಶ್ಮೀರ ಮತ್ತು ಪಂಜಾಬಿನ ಪ್ರತ್ಯೇಕತಾವಾದಿ ಆಂದೋಲನಗಳಿಗೆ ಇನ್ನಷ್ಟು ಕುಮ್ಮಕ್ಕು ನೀಡಿದಂತಾಗಿದೆ.

ಪಾಕಿಸ್ತಾನದಲ್ಲಿ ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ಸೋಲು ಹಾಗೂ ಐಜೆಐ ಕೂಟ 2ರಂದು ಸತ್ತವರ ಬೂದಿಯನ್ನು ದೇಶಾದ್ಯಂತ ಒಯ್ಯುತ್ತಿರುವಂತೆ ಈ ಮುಖಂಡರೂ ಸಿಖ್‌ರಲ್ಲಿ ಭಾವೋದ್ರೇಕ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ಭಾರತದ ಸಂವಿಧಾನದ ಚೌಕಟ್ಟಿನಲ್ಲೇ ಪರಿಹಾರ ಕಂಡ ಹಿಡಿಯಲು ಪ್ರಯತ್ನಿಸಬೇಕು ಎಂದು ಆರಂಭಿಸಿದ ಮಾನ್ ಈಗ ಬಹಿರಂಗವಾಗಿ ಖಾಲಿಸ್ತಾನದ ಘೋಷಣೆಯನ್ನು ಪ್ರತಿಪಾದಿಸುತ್ತಿದ್ದಾರೆ. ತೋಹ್ರಾ, ತೋತಾ ಸಿಂಗ್ ಮುಂತಾದ ಅಕಾಲಿ

> ಕೇಂದ್ರ ಸರಕಾರ
> ಪಂಜಾಬ್ ಸಮಸ್ಯೆ ಕುರಿತಂತೆ
> ಈಗಾಗಲೇ ರಾಷ್ಟ್ರೀಯ ಸಮಗ್ರತಾ ಮಂಡಳಿ
> ಒಪ್ಪಿರುವ ನಾಲ್ಕು ಅಂಶಗಳ
> ಕ್ರಮಗಳ ಜಾರಿಗೆ
> ಆದ್ಯತೆ ನೀಡಬೇಕು
> ಎನ್ನುತ್ತಾರೆ ಕಾಂ. ಹರ್ಕಿಷನ್‌ಸಿಂಗ್ ಸುರ್ಜೀತ್

ಗಳನ್ನು ಕೆಗೆದುಕೊಳ್ಳಬೇಕಾಗುತ್ತದೆ.

1)ಉಗ್ರವಾದ ಪ್ರತ್ಯೇಕತಾವಾದದ ಅಪಾಯವನ್ನು ಎದುರಿಸುವ ಏಕಮಾತ್ರ ಉದ್ದೇಶದಿಂದ ಆಡಳಿತವನ್ನು ಇನ್ನಷ್ಟು ಧೃಢಸ್ಥಿತಗೊಳಿಸಿ, ಜನರು ಆಡಳಿತದ ಬಗ್ಗೆ ಅವಿಶ್ವಾಸ ಹೊಂದುವಂತೆ ಮಾಡುವ ಭ್ರಷ್ಟ ವ್ಯಕ್ತಿಗಳನ್ನು ಗುರುತಿಸಿ ಆಡಳಿತದಿಂದ ತೆಗೆದುಹಾಕಬೇಕು. ರಾಷ್ಟ್ರ-ವಿರೋಧಿ ಶಕ್ತಿಗಳಿಗೆ ಅಧಿಕಾರ ವರ್ಗಾಯಿಸಬಹುದೆಂಬ ತಪ್ಪು

ಸಹಾಯ ನೀಡಲು ಸಿದ್ಧವಿರುವಾಗ ಈ ಸಮಸ್ಯೆಯನ್ನು ಹೀಗೆ ನೆನೆಗುದಿಯಲ್ಲಿ ಇಡಲು ಈಗ ಯಾವ ಕಾರಣವೂ ಇಲ್ಲ.

ನದಿ ನೀರಿನ ಬಗ್ಗೆ ರಾಜೀವ್-ಲೋಂಗೋವಾಲ್ ಒಪ್ಪಂದವನ್ನು ಹರ್ಯಾಣ ಮತ್ತು ರಾಜಸ್ಥಾನ ಸರಕಾರಗಳು ಅಂಗೀಕರಿಸಲು ಸಿದ್ಧವಿಲ್ಲವಾದ್ದರಿಂದ ಅದನ್ನು ಸುಪ್ರೀಂ ಕೋರ್ಟಿನ ತೀರ್ಪಿಗೆ ಒಪ್ಪಿಸಿ ಇದರಿಂದ ಯಾರೂ ರಾಜಕೀಯ ಲಾಭ

ಪಂಜಾಬ್ ಸಮಸ್ಯೆಗೆ ಆದ್ಯತೆ ನೀಡಬೇಕು

ಅಧಿಕಾರಕ್ಕೆ ಬಂದ ನಂತರ ಝಿಯಾನ ಮಿಲಿಟರಿ ಕೂಟ ಪ್ರಜಾಪ್ರಭುತ್ವದ ಮುಖವಾಡ ಹೊತ್ತು ಮತ್ತೆ ಮರಳಿದಂತಾಗಿದೆ. ಅದು ಉಗ್ರಗಾಮಿಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡುತ್ತಿದೆ. ಪಂಜಾಬಿನ ಅಲ್ಪಸಂಖ್ಯಾತರು ಬಹುಸಂಖ್ಯೆಯಲ್ಲಿ ವಲಸೆ ಹೋಗುವಂತಹ ಪರಿಸ್ಥಿತಿ ಸೃಷ್ಟಿಸುವುದೇ ಈಗ ಅವರ ಯೋಜನೆಯಂತಿದೆ.

ರಾಮಜನ್ಮ ಭೂಮಿ--ಬಾಬರಿ ಮಸೀದೆ ಪ್ರಶ್ನೆಯಿಂದಾಗಿ ದೇಶದಲ್ಲಿ ಉಂಟಾಗಿರುವ ಉದ್ರೇಕಕಾರಿ ಕೋಮು ಪರಿಸ್ಥಿತಿಯಲ್ಲಿ ದೇಶದ ಇತರೆಡೆ ಸಿಖ್ಖರ ವಿರುದ್ಧ ದ್ವೇಷ ಹುಟ್ಟಿಸುವುದು ಕಷ್ಟದ ಕೆಲಸವೇನಲ್ಲ.

ನಿಜ--ಕಳೆದ ಒಂದೂವರೆ ತಿಂಗಳಲ್ಲಿ ಪಂಜಾಬಿನಲ್ಲಿ ಭದ್ರತಾ ಪಡೆಗಳು ಕೆಲವು ಮುಖ್ಯ ಭಯೋತ್ಪಾದಕರನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಉಗ್ರಗಾಮಿಗಳೂ ತಮ್ಮ ಚಟುವಟಿಕೆಗಳನ್ನು ಹಲವು ಪಾಲು ಹೆಚ್ಚಿಸಿದ್ದಾರೆ ಎಂಬುದನ್ನು ನಾವು ಮರೆಯುವಂತಿಲ್ಲ. ಈಗ ಗುರುದಾಸ್ ಪುರ್, ಅಮೃತ್‌ಸರ್, ಫಿರೋಜ್‌ಪುರ್‌ಗಳಿಗೆ ಮಾತ್ರ ಅವರ ಚಟುವಟಿಕೆಗಳು ಸೀಮಿತವಾಗಿದ್ದರೂ ರಾಜ್ಯದ ಇತರೆಡೆಯೂ ಅವರು ತಮ್ಮ ಪ್ರಭಾವ ಹರಡುತ್ತಿದ್ದಾರೆ.

ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸುವ ದುರುದ್ದೇಶದಿಂದ ದೆಹಲಿ ಮತ್ತು ಜಾಲಂಧರ್‌ನಲ್ಲಿ ಒಂದೇ ವೇಳೆಗೆ ಸಿಖ್ ಧರ್ಮಗ್ರಂಥವನ್ನು ಸುಡುವ ಕೆಲಸವನ್ನು ತಮ್ಮ ಏಜೆಂಟರ ಮೂಲಕ ಅವರು ಮಾಡಿಸಿದ್ದಾರೆ. ಈ ದುಷ್ಕೃತ್ಯವನ್ನು ದೇಶದ ಎಲ್ಲಾ ಜನ ವಿಭಾಗಗಳೂ ಖಂಡಿಸಿದ್ದಾರೆ. ಆದರೆ ವಿವಿಧ ಅಕಾಲಿ ಗುಂಪುಗಳು ಇದನ್ನು ಬಳಸಿ ಪ್ರತ್ಯೇಕತಾವಾದಿ ಘೋಷಣೆಗಳನ್ನು ಎತ್ತಲು ಪ್ರಯತ್ನಿಸುತ್ತಿದ್ದಾರೆ. ವಿಎಚ್‌ಪಿ ಅಯೋಧ್ಯೆಯಲ್ಲಿ ನವೆಂಬರ್ 30 ಹಾಗೂ ಡಿಸೆಂಬರ್

ಮುಖಂಡರೂ ಕೂಡಾ ಈ ವಿಚ್ಛಿದ್ರಕಾರಿ ಪ್ರಯತ್ನವನ್ನು ತಡೆಯುವ ಧೈರ್ಯ ಮಾಡುತ್ತಿಲ್ಲ. ಹಿಂದಿನ ಅನುಭವದಿಂದ ಅವರು ಪಾಠ ಕಲಿಯುವಂತಿಲ್ಲ.

ಕಳೆದ ಕೆಲವು ವಾರಗಳಿಂದ ಕೇಂದ್ರ ಸರಕಾರ ಕೂಡಾ ಪಂಜಾಬಿನ ಘಟನೆಗಳ ಬಗ್ಗೆ ಎಚ್ಚೆತ್ತುಕೊಂಡಿಲ್ಲ ಎಂಬುದು ನಿಜಕ್ಕೂ ದುರದೃಷ್ಟಕರ ಸಂಗತಿ. ಪಂಜಾಬಿನಲ್ಲಿ ಸರಕಾರದ ಹೆಸರಿನಲ್ಲಿ ಏನಿದೆಯೋ , ಅದು ಕೂಡಾ ದಿಕ್ಕಿಲ್ಲದಂತಿದೆ. ತಮಗೆ ಮುಕ್ತ ಅವಕಾಶ ದೊರಕಿದೆ ಎಂಬ ಸೂಚನೆ ಉಗ್ರಗಾಮಿಗಳಿಗೆ ಸಿಕ್ಕಿದಂತಿದೆ. ಈ ದಿಶಾಹೀನತೆ ಅತ್ಯಂತ ಅಪಾಯಕಾರಿ,

ಇಂತಹ ಸ್ಥಿತಿಯಲ್ಲೂ ಪಂಜಾಬಿ ಜನತೆ ಉಗ್ರಗಾಮಿಗಳಿಗೆ ಬೆಂಬಲ ನೀಡಿಲ್ಲ ಎಂಬುದನ್ನೂ ಗಮನಿಸಬೇಕು. ಇದಕ್ಕೆ ಸಾಕಷ್ಟು ಪುರಾವೆಗಳನ್ನು ಕೊಡಬಹುದು. ಸಿಮ್ರಾನ್‌ಜಿತ್ ಸಿಂಗ್ ಮಾನ್ ಬಂಧನವಾದಾಗ ಪ್ರತಿಭಟನೆ ಕೇವಲ ಸಾಂಕೇತಿಕವಾಗಿತ್ತು. ಸಿಖ್ ವಿದ್ಯಾರ್ಥಿ ಫೆಡರೇಷನ್ ನವೆಂಬರ್ 13 ರ ಧರಣೆ ಕಡೆಗೆ ರಾಜ್ಯಾದ್ಯಂತ ಕೇವಲ 400 ಜನ ಓಗೊಟ್ಟರು. ಚಂಡೀಘಡದಲ್ಲಿ ರಾಜ್ಯಪಾಲರ ನಿವಾಸದೆದುರು ಕೇವಲ 120 ಮಂದಿಯಿದ್ದರು. ಸತ್ತ ಉಗ್ರಗಾಮಿಗಳ 'ಭೋಗ್' ಸಮಾರಂಭಗಳಲ್ಲಿ ಬೆದರಿಕೆಯೊಡ್ಡಿಯಷ್ಟೇ ಜನ ಸೇರಿಸುವುದು ಅವರುಗಳಿಗೆ ಸಾಧ್ಯವಾಗುತ್ತಿದೆ. ಸರಕಾರ ದೃಢ ಕ್ರಮ ಕೈಗೊಂಡಾಗಲೆಲ್ಲಾ ಜನರನ್ನು ಅಣಿನೆರೆಸುವುದು ಸರಕಾರಕ್ಕೆ ಸಾಧ್ಯವಾಗಿದೆ. ಆದರೆ ಸರಕಾರ ದೃಢ ಕ್ರಮ ಕೈಗೊಳ್ಳದಿದ್ದರೆ ಜನರಿಗೆ ಆಡಳಿತದಲ್ಲಿ ನಂಬಿಕೆ ಹೋಗಿ ಉಗ್ರಗಾಮಿಗಳ ಆಟಕ್ಕೆ ಬಲಿಯಾಗುವ ಭಯವಿದೆ.

ಈಗಲೂ ರಾಜ್ಯದಲ್ಲಿ ದೇಶಪ್ರೇಮಿಗಳ ಬರವಿಲ್ಲ ಆದರೆ ಎಡ ಪಕ್ಷಗಳಷ್ಟೇ ಉಗ್ರಗಾಮಿಗಳನ್ನು ಪ್ರತ್ಯೇಕತಾವಾದಿಗಳನ್ನು ರಾಜಕೀಯವಾಗಿ ಎದುರಿಸುತ್ತಿದ್ದಾರೆ.

ಪಂಜಾಬಿನಲ್ಲಿ ಪರಿಸ್ಥಿತಿ ಬೆಳೆಯುತ್ತಾ ಬಂದ ರೀತಿಯ ಮೇಲೆ ಒಂದು ಪಕ್ಷಿನೋಟ ಬೀರಿದರೆ ಕೇಂದ್ರದಲ್ಲಿ ಬಂದ ಸರಕಾರಗಳು ಸಮಸ್ಯೆಯನ್ನು ಪೂರ್ಣ ಅರಿತುಕೊಳ್ಳಲಿಲ್ಲ, ಕೇವಲ ತಮ್ಮದೇ ಪ್ರಯೋಗಗಳನ್ನು ಮಾಡಿದಂತೆ ಕಾಣುತ್ತದೆ. ಎಲ್ಲಾ ಸರಕಾರಗಳು ಅದು ಕೇವಲ ಪಂಜಾಬಿಗೆ ಸೀಮಿತವಾದ ಸಮಸ್ಯೆ ಎಂದು ಕಂಡಿದ್ದಾರೆ.

ಕಳೆದ ಆರು ತಿಂಗಳಲ್ಲಿ ಪಂಜಾಬಿನ ಬಗ್ಗೆ ಚರ್ಚೆಯಾಗುತ್ತಿರುವುದು ಕೇವಲ ಒಂದು ವಿಷಯದ ಮೇಲೆ. ಅಲ್ಲಿ ಚುನಾವಣೆ ನಡೆಯಬೇಕೆ ಬೇಡವೇ ಎಂದು. ಚುನಾವಣೆ ನಡೆಯಬೇಕು ನಿಜ. ಆದರೆ ಮುಕ್ತ ನ್ಯಾಯ ಚುನಾವಣೆ ನಡೆಸಲು ಸಾಧ್ಯವಾಗುವ ವಾತಾವರಣವೂ ಸೃಷ್ಟಿಯಾಗಬೇಕಲ್ಲ. ಇದಕ್ಕಾಗಿ ನಾಲ್ಕು ನಿರ್ದಿಷ್ಟ ಕ್ರಮಗಳನ್ನು ಸಿಪಿಐ(ಎಂ) ಮುಂದಿಟ್ಟಿತು. ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಸುಮಾರಾಗಿ ಇದನ್ನು ಒಪ್ಪಿತ್ತು. ವಿ.ಪಿ. ಸಿಂಗ್ ಸರಕಾರ ಇದರಲ್ಲಿ ಆರ್ಥಿಕ ಪ್ಯಾಕೇಜುಗಳನ್ನೇನೋ ಘೋಷಿಸಿತು. ಆದರೆ ರಾಮಜನ್ಮ ಭೂಮಿ--ಬಾಬ್ರಿ ಮಸೀದೆ ವಿವಾದ ಸೃಷ್ಟಿಸಿದ ಬಿಕ್ಕಟ್ಟಿನಲ್ಲಿ ಅದು ಇತರ ಅಂಶಗಳನ್ನು ಜ್ಯಾರಿಗೆ ತರಲಾಗಲಿಲ್ಲ.

ನಾಲ್ಕು ನಿರ್ದಿಷ್ಟ ಕ್ರಮಗಳನ್ನು ಸಿಪಿಐ(ಎಂ) ಮುಂದಿಟ್ಟಿತು. ಮದ್ರಾಸಿನಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆಯಲ್ಲಿ ಸುಮಾರಾಗಿ ಇದನ್ನು ಒಪ್ಪಿತ್ತು.

ಈಗಲೂ ಪಂಜಾಬಿನಲ್ಲಿ ಪ್ರತ್ಯೇಕತಾವಾದಿಗಳ ಆಟ ಸಾಗದಂತೆ ಮಾಡಬೇಕಾದರೆ, ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಅವಕಾಶ ದೊರೆತ ದೇಶದ ಐಕ್ಯತೆ ರಕ್ಷಿಸಬೇಕೆಂದಿದ್ದರೆ ಈ ಕೆಳಗಿನ ನಾಲ್ಕು ಕ್ರಮಸಂಕೇತಗಳನ್ನು ಕೊಡುವುದನ್ನು ನಿಲ್ಲಿಸಬೇಕು. ಇಂತಹ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲವೆಂದು ಸ್ಪಷ್ಟ ನಿಲುವು ತಳೆಯಬೇಕು.

2) ವಿಪಿ ಸಿಂಗ್ ಸರಕಾರ ಘೋಷಿಸಿದ ಆರ್ಥಿಕ ಪ್ಯಾಕೇಜನ್ನು ಇನ್ನಷ್ಟು ಬಲಗೊಳಿಸಿ, ಹತಾಶರಾಗಿ ಉಗ್ರಗಾಮಿಗಳ ಜೊತೆ ಸೇರಬೇಕಾದ ಒತ್ತಡ ಎದುರಿಸಬೇಕಾಗಿರುವ ನಿರುದ್ಯೋಗಿ ಯುವಕರನ್ನು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ಒಳಗೊಳ್ಳುವಂತೆ ಪ್ರಯತ್ನಿಸಬೇಕು.

3) ಪ್ರಮುಖ ರಾಜಕೀಯ ಮುಖಂಡರು ನಿರ್ಲಕ್ಷಿಸಿದ , ಆದರೆ ಬಹಳ ಮಹತ್ವದ ಚಂಢೀಗಢ ಮತ್ತು ನದಿ ನೀರಿನ ಪ್ರಶ್ನೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಇದು ರಾಜೀವ್--ಲೋಂಗೋವಾಲ್ ಒಪ್ಪಂದದ ಒಂದು ಪ್ರಮುಖ ಅಂಗವಾಗಿತ್ತು.ಇದರ ಬಗ್ಗೆ ನಿರ್ಲಕ್ಷ್ಯದಿಂದಾಗಿ ಪಂಜಾಬಿನ ಜನತೆಗೆ ಕೇಂದ್ರ ಸರಕಾರದ ಬಗ್ಗೆ ಅವಿಶ್ವಾಸ ಹೆಚ್ಚಲಾರಂಭಿಸಿತು. ಉಗ್ರಗಾಮಿಗಳ ವಿರುದ್ಧ ಅವರ ಸಿಟ್ಟನ್ನು ಜಾಗ್ರತಗೊಳಿಸದಂತೆ ತಡೆಯುವ ಒಂದು ಮುಖ್ಯ ಅಂಶವಿದು.

1961ರಲ್ಲಿ ಜನಗಣತಿಯಲ್ಲಿ ಪಂಜಾಬಿ ಭಾಷೆಯ ವಿರುದ್ಧ ಹಿಂದೂ ಕೋಮುವಾದಿಗಳು ರಾಜ್ಯದ ಸಿಖ್ಖೇತರ ಜನ ತಮ್ಮ ಮಾತೃಭಾಷೆ ಹಿಂದಿಯೆಂದು ಕೊಡಬೇಕೆಂದು ನಡೆಸಿದ ವ್ಯಾಪಕ ಅಪಪ್ರಚಾರದಿಂದಾಗಿ ಜನಗಣತಿಯ ಅಂಕಿ-ಅಂಶಗಳು ವಿಕೃತಗೊಂಡಿದ್ದವು. ಆ ವಿಕೃತ ಅಂಕಿ- ಸಂಖ್ಯೆಯ ಆಧಾರದಲ್ಲಿ ಚಂಢೀಗಢವನ್ನು ಪಂಜಾಬಿನಿಂದ ಪ್ರತ್ಯೇಕ ಇಡಲಾಗಿತ್ತು. ಆದರೆ ಮುಂದೆ ಅದನ್ನು ಪಂಜಾಬಿಗೆ ವರ್ಗಾಯಿಸಬೇಕೆಂದು ಒಪ್ಪಲಾಯಿತು. ಕೇಂದ್ರಸರಕಾರ ಒಂದು ಪರ್ಯಾಯ ರಾಜಧಾನಿ ರಚಿಸಲು ಹರ್ಯಾಣಕ್ಕೆ ಹಣ ಪಡೆಯದಂತೆ ಮಾಡಬೇಕು.

ಇದಲ್ಲದೆ ಒಂದು ಅಖಿಲ--ಭಾರತ ಗುರುದ್ವಾರ ಕಾನೂನು ಮಾಡಬೇಕೆಂಬುದು ಸಿಖ್ಖರ ಇನ್ನೊಂದು ಬೇಡಿಕೆ, ಇದಕ್ಕೂ ಯಾರ ಅಭ್ಯಂತರವೂ ಇರಲು ಸಾಧ್ಯವಿಲ್ಲ. ಪಂಜಾಬ್, ದಿಲ್ಲಿಗಳಲ್ಲಿ ಇಂತಹ ಶಾಸನಗಳು ಈಗಾಗಲೇ ಇವೆ. ಇವನ್ನು ಇಡೀ ದೇಶಕ್ಕೆ ವಿಸ್ತರಿಸಬೇಕಷ್ಟೇ.

ಪಂಜಾಬಿ ಭಾಷೆಗೆ ಸೂಕ್ತ ಪ್ರೋತ್ಸಾಹ ನೀಡದಿರುವ ಬಗ್ಗೆ ಇನ್ನೊಂದು ಅಸಂತೃಪ್ತಿ ರಾಜ್ಯದ ಜನತೆಯಲ್ಲಿದೆ. ಈ ಬೇಡಿಕೆಯನ್ನು ಸುಲಭವಾಗಿ ಪರಿಹರಿಸಲು ಸಾಧ್ಯ.

ರಾಜ್ಯಗಳಿಗೆ • ಸ್ವಾಯತ್ತತೆ ಪ್ರಶ್ನೆ [illegible] ಇಲ್ಲಿ ಎದ್ದಿದೆ. ಇದು ಬಹಳ [illegible] ಗಳಿಂದ ಎದ್ದಿರುವ ಪ್ರಶ್ನೆ. [illegible] -ರಾಜ್ಯಗಳ ಸಂಬಂಧದ ಪುನರ್ರಚನೆ [illegible] ಮಾತ್ರವೇ ಪರಿಹರಿಸಬಹುದಾದ ಪ್ರಶ್ನೆ.

4) ಈ ಮೇಲಿನ ಕ್ರಮಗ[illegible] ಕೈಗೊಂಡರೆ ಜನರನ್ನು ಪ್ರತ್ಯೇಕತಾ[illegible] ಹಾಗೂ ಭಯೋತ್ಪಾದನೆಯ ವಿ[illegible] ರಾಜಕೀಯವಾಗಿ ಅಣಿನೆರೆಸುವ ಪ್ರಮು[illegible] ಕಾರ್ಯವನ್ನು ಸುಲಭವಾಗಿ ಕೈಗೆತ್ತಿಕೊ[illegible] ಸಾಧ್ಯವಾಗುತ್ತದೆ. ರಾಜ್ಯದಲ್ಲಿ ವ್ಯಾಪಕ ರಾ[illegible]ಕೀಯ ಪ್ರಕ್ಷೋಭೆ ನಡೆಸಿ ಇದರಲ್ಲಿ ದೇ[illegible]ದ ಐಕ್ಯತೆ, ಸಮಗ್ರತೆ ಬಯಸುವ ಎಲ್ಲಾ ಶಕ್ತಿಗಳನ್ನು ಒಂದುಗೂಡಿಸಬೇಕು.

ಪಂಜಾಬಿನಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆ ಮತ್ತೆ ಆರಂಭಗೊಳ್ಳುವಂತಹ ವಾತಾವರಣ ಸೃಷ್ಟಿಸಲು ಈ ನಾಲ್ಕು ಕ್ರಮಗಳಿಗೆ ಎಲ್ಲಾ ರಾಜಕೀಯ ಪಕ್ಷಗಳು ಬೆಂಬಲ ನೀಡಬೇಕು. ಕೇಂದ್ರ ಸರಕಾರ ಈ ಪ್ರಶ್ನೆಗಳಿಗೆ ಆದ್ಯತೆ ನೀಡುವಂತೆ ಮಾಡಬೇಕು ಇಲ್ಲವಾದರೆ ತೀವ್ರ ದುಷ್ಪರಿಣಾಮಗಳನ್ನು ಪಂಜಾಬ್ ಹಾಗೂ [illegible]ಶ ಎದುರಿಸಬೇಕಾಗುತ್ತದೆ.

ತ್ತಿಲ್ಲ. ಕೇವಲ ಒಂದು ಜಾತ್ಯಾತೀತ- ಪಕ್ಷವಾಗುವುದೇ ಸಾಕಾಗುವುದಿಲ್ಲ. ಒಂದು ಸರಕಾರ ಎಂದರೆ ಅದು ಕೋಮುವಾದ-ವಿರೋಧಿ ಪ್ರಕ್ಷೋಭೆಯಲ್ಲ. ಸರಕಾರ ನಡೆಸಲು ಕಾರ್ಯಕ್ರಮಗಳು ಬೇಕು, ಧೋರಣೆಗಳು ಬೇಕು. ಅವೇನೆಂದು ಮೊದಲು ನೋಡಬೇಕು.

* ಅಸ್ಸಾಂನಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ಕೇಂದ್ರ ಮತ್ತು ಕಾಂಗ್ರೆಸೇತರ ರಾಜ್ಯ ಸರಕಾರಗಳ ನಡುವೆ ಸಂಘರ್ಷದ ಹೊಸ ಘಟ್ಟ ಆರಂಭಿಸಿದೆಯಲ್ಲವೇ?

ಇದೊಂದರಿಂದಲೇ ಆ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಇದು ಪುನರಾವರ್ತನೆಯಾಗಲಿಕ್ಕಿಲ್ಲವೆಂದು ನಮ್ಮ ನಿರೀಕ್ಷೆ. 'ಉಲ್ಫಾ' ಅಸ್ಸಾಂನಲ್ಲಿ ವಾಸ್ತವ ಸಂಗತಿ. ಆ ರಾಷ್ಟ್ರ ವಿರೋಧಿ ಶಕ್ತಿಗಳನ್ನು ಎದುರಿಸಲು ಎಜೆಪಿ ಸರಕಾರವನ್ನು ಒಪ್ಪಿಸಬೇಕಾಗಿತ್ತು. ಅದಕ್ಕೆ ನೆರವಾಗಬೇಕು ಎಂದು ವಿ.ಪಿ. ಸಿಂಗರಿಗೆ ನಾನು ಹೇಳುತ್ತಲೇ ಇದ್ದೆ.

* ಅಸ್ಸಾಂನಲ್ಲಿ ರಾಷ್ಟ್ರಪತಿ ಆಳ್ವಿಕೆ ಅಗತ್ಯವಿತ್ತೆ?

ನನ್ನಲ್ಲಿ ಎಲ್ಲಾ ಮಾಹಿತಿಯಿಲ್ಲ. ಆದ್ದರಿಂದ ನನಗೆ ಈ ಬಗ್ಗೆ ಮನವರಿಕೆಯಾಗಿಲ್ಲ. ಆದರೆ ಚಂದ್ರಶೇಖರ್ ಸರಕಾರ ಚುನಾಯಿತ ಎಜೆಪಿ ಸರಕಾರದ ಮೂಲಕ ಉಲ್ಫಾ ವಿರುದ್ಧ ಕ್ರಮ ಆರಂಭಿಸಬಹುದಿತ್ತು. ಎಜೆಪಿ ನಿರಾಕರಿಸಿದ್ದರೆ ಜನರೆದುರು ಹೋಗಿ ಈ ತೀವ್ರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ವಿವರಿಸಬಹುದಾಗಿತ್ತು. ನಂತರ ಕೇಂದ್ರ ಸರಕಾರ ಕ್ರಮ ಕೈಗೊಂಡಿದ್ದರೆ ಅದನ್ನು ಒಪ್ಪಬಹುದಾಗಿತ್ತು.

. ಯಾವುದೇ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆಗೆ ನಮ್ಮ ವಿರೋಧವಿದೆ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಅದು ಅನಿವಾರ್ಯವಾದರೆ ಅದನ್ನು ಜನರೆದುರು ಇಡಬೇಕು.

* ಎಜೆಪಿ ಸರಕಾರವೇ ಉಲ್ಫಾ ಪ್ರಶ್ನೆ ಎದುರಿಸದೆ ರಾಷ್ಟ್ರಪತಿ ಆಳ್ವಿಕೆಯನ್ನು ಆಹ್ವಾನಿಸಿದಂತಾಗಲಿಲ್ಲವೇ?

ಇಲ್ಲ. ಎಜೆಪಿ ಉಲ್ಫಾ ಪ್ರಶ್ನೆ ಎದುರಿಸಲು ವಿಫಲವಾಗಿತ್ತು ಎನ್ನುವುದು ಸಾಧ್ಯವಿಲ್ಲ. ಉಲ್ಫಾವನ್ನು ತಡೆಹಿಡಿಯುವುದರಲ್ಲಿ ಅದು ವಿಫಲವಾಯಿತು ಎಂದು ನಾನು ಹೇಳುವುದು ವಿ.ಪಿ.ಸಿಂಗ್ ಸರಕಾರವಾಗಲೀ ಚಂದ್ರಶೇಖರ್ ನೇತೃತ್ವದ ಸರಕಾರವಾಗಲೀ ಎಜೆಪಿ ಹೇಳಿದ್ದನ್ನು ಕಿವಿಗೆ ಹಾಕಿಕೊಳ್ಳುವುದಿಲ್ಲ ಎಂದು ದೂರಿಲ್ಲ. ನಾನು ಎರಡು ವರ್ಷಗಳ ಹಿಂದೆ ಇಂತಹ ಸನ್ನಿವೇಶವನ್ನು ಡಾರ್ಜಲಿಂಗ್‌ನಲ್ಲಿ ಎದುರಿಸಿದ್ದು ನಿಮಗೆ ನೆನಪಿರಬಹುದು. ನಾನು ರಾಜಕೀಯವಾಗಿಯೇ ಅದನ್ನು ಎದುರಿಸಿದೆ. ಕೇಂದ್ರದ ನೆರವಿನಿಂದ ಎರಡು ವರ್ಷಗಳ ನಂತರ ಅದನ್ನು ಎದುರಿಸುವಲ್ಲಿ ಯಶಸ್ವಿಯಾದೆ.

* ಜಮ್ಮು-ಕಾಶ್ಮೀರದಲ್ಲಿ ಡಾ.ಫಾರೂಕ್ ಅಬ್ದುಲ್ಲಾಗೆ ಏನಾದರೂ ಪಾತ್ರವಿರಬಲ್ಲದೆ.?

ಅಲ್ಲಿ ಸ್ವಲ್ಪವಾದರೂ ಪ್ರಭಾವವಿರುವ ಪಕ್ಷ ನ್ಯಾಷನಲ್ ಕಾನ್ಫರೆನ್ಸ್ ಮಾತ್ರ. ಫಾರೂಕ್‌ರವರೊಂದಿಗೆ ಸಂಪರ್ಕವಿಟ್ಟುಕೊಳ್ಳಿ ಎಂದು ರಾಜಕೀಯ [illegible] ಹಾರ ತ[illegible]ಲು ಅವರ ಪಾತ್ರ ಬೇಕು ಎಂದು ವಿ.ಪಿ.ಯವರಿಗೂ ನಾನು ಹೇಳಿದ್ದೆ.

* ಶೇಖರ್ ವಿರೋಧಿ ಪ್ರಚಾರ ಹಚ್ಚಿದ ಬಂಗಾಳದ ಹಿತಾಸಕ್ತಿಗಳಿಗೆ ತೊಂದರೆ ತರಬಹುದೇ?

ಆ ಬಗ್ಗೆ ನಮಗೆ ಭಯವಿಲ್ಲ. ನಾವು ಸದಾ ಕಾಂಗ್ರೆಸ್‌ಗೆ ವಿರೋಧವಾಗಿರುವವರು.

* ಅಂಬಾನಿಗಳು, ರಿಲೆಯನ್ಸ್ ಉದ್ದಿಮೆಗಳ ಮಾತು ಈಗ ಕೇಂದ್ರದಲ್ಲಿ ಚೆನ್ನಾಗಿ ನಡೆಯುತ್ತಿದೆ ಎಂದು ಕೇಳಬರುತ್ತಿದೆಯಲ್ಲಾ?

ರಾಜೀವ್ ಗಾಂಧಿ ಕಾಲದಲ್ಲೂ ಅವರಿಗೆ ಈ ಅವಕಾಶವಿತ್ತು. ಅವರು(ದೊಡ್ಡ ಬಂಡವಾಳಿಗರು) ಬೇರೇನು ಮಾಡಬಲ್ಲರು? ಅಧಿಕಾರಕ್ಕೆ ಯಾರು ಬರುತ್ತಾರೋ ಅವರ ಒಡನಾಟ ಬೇಕು ಅವರಿಗೆ. ಒಂದರ್ಥದಲ್ಲಿ ಅವರೂ ಸರಿಯೇ.

* ಹಲವರು ನಿಮ್ಮನ್ನು ಪ್ರಾದೇಶಿಕ ಪೆರೆಸ್ತ್ರೋಯಿಕಾದ ಆರಂಭಕರ್ತ, ಭಾರತದ ಗೋರ್ಬಚೇವ್ ಎಂದು ಕಾಣುತ್ತಾರೆ. ನಿಮ್ಮ ಪ್ರತಿಕ್ರಿಯೆ ಏನು?

ನಾನೇನು ಹೇಳಲಿ? ನನ್ನ ಅನುಭವದಿಂದ, ಮಾರ್ಕ್ಸ್‌ವಾದದ ನನ್ನ ಅಧ್ಯಯನದಿಂದ ಕೆಲವು ತೀರ್ಮಾನಗಳಿಗೆ ಬಂದಿದ್ದೇನೆ. ನಾನು ಇಡೀ ಭಾರತ[illegible]ವಲ್ಲ. [illegible] ಜನ[illegible]ರಿಗೆ ಏನು ನಾನು ಮಾಡಬಲ್ಲೆನೋ ಅದನ್ನು ಮಾಡಿದ್ದೇನೆ. ನಾನು ಮಾಡಿದ ಕೆಲಸಗಳ ಬಗ್ಗೆ ನನಗೆ ಬೇಸರವಿಲ್ಲ.

* ಪಶ್ಚಿಮ ಬಂಗಾಳದಲ್ಲಿ ಒನ್-ಮ್ಯಾನ್ ಶೋ(ಏಕವ್ಯಕ್ತಿ ಪ್ರದರ್ಶನ) ಎನ್ನುತ್ತಾರೆ ಹಲವರು. ಪ್ರತಿಯೊಂದು ಪ್ರಶ್ನೆಗೆ ನಿಮ್ಮ ಗಮನವೇಕೆ ಬೇಕು.?

ಅದು ಸರಿಯಲ್ಲ. ಹಾಗೆಂದು ಅದನ್ನು ನೋಡುವವರನ್ನು ಅದಕ್ಕಾಗಿ ನಾನು ದೂರುವುದಿಲ್ಲ. ಏಕೆಂದರೆ ಅವರ ಪಕ್ಷಗಳಲ್ಲಿ ಅವರಿಗೆ ಅಂತಹುದರ ಮೇಲೆ ನಂಬಿಕೆ. ಸಾಮೂಹಿಕ ನಿರ್ಣಯವೆನ್ನುತ್ತಾರೆ-ನಿಜವಾಗಿ ಅದು ಒಬ್ಬನ ನಿರ್ಣಯವಾಗಿರುತ್ತದೆ. ನನ್ನ ಪಕ್ಷದಲ್ಲಿ ಹಾಗಿಲ್ಲ. ಅದು ಯಾವಾಗಲೂ ಸಾಮೂಹಿಕ ನಿರ್ಣಯವೇ. ಅದು ಮಾರ್ಕ್ಸ್‌ವಾದಿ ಪಕ್ಷ. ನಾನೆ ನನ್ನನ್ನು ಹೊರಗಿಡಬಹುದು.

* ನಿಮಗೀಗ 78 ವರ್ಷ. ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾಗಬೇಕೆಂದು ಎಂದಾದರೂ ಅನಿಸುತ್ತದೆಯೇ?

ಇಲ್ಲ. ಇಲ್ಲ. ನಾನು ದೈಹಿಕವಾಗಿ ಕೆಲಸ ಮಾಡಲು ಸಾಧ್ಯವಿರುವವರೆಗೆ ನಾನು ಕೆಲಸ ಮುಂದುವರಿಸುತ್ತೇನೆ. ಸಂಗಾತಿ [illegible] ನಾನು [illegible] ಮುಂದುವರಿಸಬೇಕು ಎಂದು ಬಯಸುವವರೆಗೆ.

ಪಶ್ಚಿಮ ಬಂಗಾಳದಲ್ಲಿ ಐಕ್ಯತಾ ಮಾಸ

ಹತ್ತು ದಿನಗಳ ಅಂತರದಲ್ಲೇ ಕೋಮು ಸೌಹಾರ್ದ ಎರಡು ಬೃಹತ್ ರ್‍ಯಾಲಿಗಳನ್ನು ಕಂಡ ಪಶ್ಚಿಮ ಬಂಗಾಳ ಈಗ ನವೆಂಬರ್ 16ರಿಂದ ರಾಷ್ಟ್ರೀಯ ಐಕ್ಯತೆ ಮತ್ತು ಸಮಗ್ರತೆಗಾಗಿ ರಾಜ್ಯವ್ಯಾಪಿ ಪ್ರಚಾರ ಮಾಸಾಚರಣೆ ನಡೆಸುತ್ತಿದೆ. ರಾಜ್ಯಾದ್ಯಂತ ಈ ಒಂದು ತಿಂಗಳಲ್ಲಿ ಜನರ ನಡುವೆ ತೀವ್ರ ಪ್ರಚಾರ ನಡೆಸಲು ಎಡರಂಗ ನಿರ್ಧರಿಸಿದೆ. ಈ ಮಾಸದ ಕೊನೆಯಲ್ಲಿ ಡಿಸೆಂಬರ್ 15 ರಂದು ಕಲ್ಕತ್ತೆಯ ಬ್ರಿಗೇಡ್ ಪೆರೇಡ್ ಮೈದಾನದಲ್ಲಿ ಒಂದು ಬೃಹತ್ ರ್‍ಯಾಲಿ ನಡೆಯಲಿದೆ. ಇದರಲ್ಲಿ ಮುಖ್ಯಮಂತ್ರಿ ಜ್ಯೋತಿ ಬಸು ಮತ್ತಿತರ ಮುಖಂಡರಲ್ಲದೆ ಮಾಜಿ ಪ್ರಧಾನಿ ವಿ.ಪಿ. ಸಿಂಗ್‌ರವರೂ ಭಾಗವಹಿಸಲಿದ್ದಾರೆ. ಈ ಪ್ರಚಾರ ಮಾಸ ಎಡಪಕ್ಷಗಳ ಹಾಗೂ ಜನತಾದಳ ಯೋಜಿಸಿರುವ ದೇಶವ್ಯಾಪಿ ಪ್ರಕ್ಷೋಭೆಯ ಭಾಗವಾಗಿ ನಡೆಯಲಿದೆ.

ಎರಡು ಘಟ್ಟಗಳಲ್ಲಿ ಇದನ್ನು ಯೋಜಿಸಲಾಗಿದ್ದು ಮೊದಲ ಘಟ್ಟ ನವೆಂಬರ್ 30 ರಂದು ಮುಗಿದಿದೆ. ಈ ಘಟ್ಟದಲ್ಲಿ ಕಾರ್ಯಕ್ರಮಗಳು ಗ್ರಾಮ ಪಂಚಾಯತ್, ಬ್ಲಾಕ್ ಮಟ್ಟಗಳಲ್ಲಿ, ಮಾರುಕಟ್ಟೆ ಸ್ಥಳಗಳಲ್ಲಿ ನಡೆದಿದೆ. ಎರಡನೇ ಘಟ್ಟದಲ್ಲಿ ಜಿಲ್ಲಾ ಮಟ್ಟಗಳಲ್ಲಿ ಕಾರ್ಯಕ್ರಮ ನಡೆಯುತ್ತವೆ. ಎಲ್ಲಾ ಮಟ್ಟಗಳಲ್ಲಿ ಎಡರಂಗದ ಪಕ್ಷಗಳ ಸ್ಥಳೀಯ ಘಟಕಗಳು, ಸಾಮಾಜಿಕ ಸಂಘಟನೆಗಳು ಈ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿವೆ.

ನಾಲ್ಕು ರಾಜ್ಯಗಳಲ್ಲಿ ಬೆಳವಣಿಗೆಗಳು

ದೇಶದ ಮೂರು ರಾಜ್ಯಗಳಲ್ಲಿ ವೈವಿಧ್ಯಮಯ ಬೆಳವಣಿಗೆಗಳು ಘಟಿಸಿವೆ. ಅಸ್ಸಾಮಿನಲ್ಲಿ ರಾಷ್ಟ್ರಪತಿ ಆಡಳಿತ; ಉಲ್ಫಾ ನಿಷೇಧ; ಗೋವಾದಲ್ಲಿ ಸರಕಾರಕ್ಕೆ ಬೆಂಬಲ ವಾಪಸು, ನಾಗಾಲ್ಯಾಂಡ್‌ನಲ್ಲಿ ಸರಕಾರದಿಂದ ನಿರ್ಗಮನ, ಉಚ್ಚಾಟನೆ, ನಾಗಾಲ್ಯಾಂಡ್ ಉಗ್ರಗಾಮಿ ಸಂಘಟನೆ ನಿಷೇಧ.,, ಇತ್ಯಾದಿ.

ಕಾಂಗ್ರೆಸ್(ಐ) ನೆರವಿನಿಂದ ಅಧಿಕಾರಕ್ಕೆ ಬಂದ ಚಂದ್ರಶೇಖರ್ ಸರಕಾರ ಈಶಾನ್ಯದ ಅಸ್ಸಾಮ್ ಸರಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಹೇರಿದೆ. ಅಲ್ಲಿನ ಉಗ್ರಗಾಮಿ ಸಂಘಟನೆ 'ಅಸ್ಸಾಂ ಸಂಯುಕ್ತ ವಿಮೋಚನಾ ರಂಗ' (ಉಲ್ಫಾ)ವನ್ನು ನಿಷೇಧಿಸಿದೆ.

ಉಲ್ಫಾದ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಿ, ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹದಗೆಟ್ಟಿರುವುದರಿಂದ ಈ ಕ್ರಮ ಅನಿವಾರ್ಯವಾಗಿತ್ತೆಂದು ಪ್ರಧಾನಿ ಚಂದ್ರಶೇಖರ್ ಸಮರ್ಥಿಸಿದ್ದಾರೆ.

ಏನಿದ್ದರೂ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾಗಿದ್ದ ಅಸ್ಸಾಂ ಗಣ ಸಂಗ್ರಾಮ್ ಪರಿಷತ್(ಎಜಿಪಿ) ಸರಕಾರವನ್ನು ವಜಾ ಮಾಡಿದ್ದು ಶೇಖರ್ ಸರಕಾರದ ಮುಂದಿನ ನಡೆಯ ಸೂಚನೆಯಂತಿದೆ. ಇನ್ನು ಕೆಲವೇ ದಿನಗಳಲ್ಲಿ ಅಸ್ಸಾಂ ವಿಧಾನಸಭೆಗೆ ಚುನಾವಣೆಗಳು ನಡೆಯ ಬೇಕಾಗಿದ್ದವು.

'ಉಲ್ಫಾ'ದ ಮೇಲೆ ಪೋಲೀಸ್ ಮತ್ತು ಸೇನಾ ಸಿಬ್ಬಂದಿಗಳು ದಾಳಿ ನಡೆಸುತ್ತಿದ್ದು ಅನೇಕ ಉಗ್ರಗಾಮಿಗಳನ್ನು ಬಂಧಿಸಿದ್ದಾರೆ. ಉಲ್ಫಾವನ್ನು ನಿಷೇಧಿಸಿದ ದಿನವೇ ನಾಗಾಲ್ಯಾಂಡ್‌ನ 'ನಾಗಾಲ್ಯಾಂಡ್ ರಾಷ್ಟ್ರೀಯ ಸಮಾಜವಾದಿ ಮಂಡಳಿ' (ಎನ್‌ಎಸ್‌ಸಿಎನ್) ಕಾನೂನು ಬಾಹಿರ ಎಂದು ಕೇಂದ್ರ ಸರಕಾರ ಘೋಷಿಸಿತು. ಈ ವಿಚಾರದಲ್ಲಿ ರಾಜ್ಯ ಸರಕಾರದೊಂದಿಗೆ ಕೇಂದ್ರ ಸಮಾಲೋಚಿಸಿರಲಿಲ್ಲ ಎಂದು ನಾಗಾಲ್ಯಾಂಡ್ ಮುಖ್ಯಮಂತ್ರಿ ವಮುಜೋ ಸಿಟ್ಟು ವ್ಯಕ್ತಪಡಿಸಿದ್ದಾರೆ.

ಉಲ್ಫಾ ಮತ್ತು ಎನ್‌ಎಸ್‌ಸಿಎನ್ ಪ್ರಾದೇಶಿಕವಾದವನ್ನು ಪ್ರಚುರಪಡಿಸುತ್ತಾ ಜನರ ಮೇಲೆ ಹಲ್ಲೆ ನಡಿಸಿ, ಕೊಲೆ ಸುಲಿಗೆ ಮಾಡುತ್ತಾ ಈಶಾನ್ಯ ಭಾರತದಲ್ಲಿ ಅಸ್ಥಿರತೆ ಉಂಟುಮಾಡುವ ಸಾಮ್ರಾಜ್ಯಶಾಹಿ ಸಂಚುಗಳಿಗೆ ರಂಗ ಸಜ್ಜುಗೊಳಿಸಿಕೊಡುತ್ತಿದ್ದವು.

ಗೋವಾ:

ಗೋವಾದ ಪ್ರಗತಿಪರ ಪ್ರಜಾಸತ್ತಾತ್ಮಕ ರಂಗ(ಪಿಡಿಎಫ್) ಸರಕಾರದ ಮುಖ್ಯಮಂತ್ರಿ ಡಾ. ಲೂಯಿಸ್ ಪ್ರೊತೊ ಬಾಬ್ರೋಸಾರಿಗೆ ರಂಗದ ಅಂಗಪಕ್ಷವಾದ ಮಹಾರಾಷ್ಟ್ರ ಗೋಮಾಂತಕ ಪಕ್ಷ(ಎಂಜಿಪಿ) ಬೆಂಬಲ ವಾಪಸು ಪಡೆದಿರುವುದರಿಂದ ಅಸ್ಥಿರತೆಯುಂಟಾಗಿ ರಾಜ್ಯದಲ್ಲಿ ಸರಕಾರದ ಕಾರ್ಯಗಳು ಎಂಜಿಪಿಯ ರಮಾಕಾಂತ್ ಖಲಾಪ್‌ಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟುಕೊಡಬೇಕೆನ್ನುವುದು ಎಂಜಿಪಿ ಕೇಳಿಕೆಯಾಗಿತ್ತು.

ಕಾಂಗ್ರೆಸ್(ಐ) ಸಹಾಯದಿಂದ ಸರಕಾರ ರಚಿಸಲು ಎಂಜಿಪಿ ಪ್ರಯತ್ನಿಸಿ ವಿಫಲವಾಗಿದೆ. ಕಾಂಗ್ರೆಸ್(ಐ) ಸರಕರಾದ ರಚಿಸಲು ತಮ್ಮ ಗೋವಾ ಪೀಪಲ್ಸ್ ಪಾರ್ಟಿಯ(ಜಿಪಿಪಿ)ಎಲ್ಲಾ 7 ಶಾಸಕರು ಬೆಂಬಲ ಕೊಡುತ್ತಾರೆಂದು ಮುಖ್ಯಮಂತ್ರಿ ಬಾಬ್ರೋಸಾ ಪ್ರಕಟಿಸಿದ್ದಾರೆ. 'ಏನಿದ್ದರೂ ನಾವು ಮೂಲತಃ ಕಾಂಗ್ರೆಸಿಗರು' ಎಂದವರು ಹೇಳಿದ್ದಾರೆ. ಅಂದರೆ ಇವರು ಕೆಲ ಸಮಯದ ಹಿಂದೆ ಈ ಪಕ್ಷವನ್ನು ಬಿಟ್ಟು ಬಂದಿದ್ದು ಅಧಿಕಾರ ಲಾಲಸೆಯಿಂದಷ್ಟೇ ಎನ್ನಬಹುದೇನೋ.

ನಾಗಾಲ್ಯಾಂಡ್

ಅಸ್ಸಾಂ ಮತ್ತು ಗೋವಾ ಬೆಳವಣಿಗೆಗಳು ಒಂದೆಡೆಯಾದರೆ ನಾಗಾಲ್ಯಾಂಡ್‌ನಲ್ಲಿ ಬೇರೆಯೇ ರೀತಿ. ಅಲ್ಲಿ ಸಂಯುಕ್ತ ಶಾಸಕಾಂಗ ಪಕ್ಷ ಅಧಿಕಾರದಲ್ಲಿದೆ. ಕಾಂಗ್ರೆಸ ಐ.ಕೆ.ಸೇಮಾ ಉಪಮುಖ್ಯಮಂತ್ರಿ ಆಗಿದ್ದರು. ನಾಗಾಲ್ಯಾಂಡ್ ಪೀಪಲ್ಸ್ ಪಾರ್ಟಿಯ ವಮುಜೊ ಮುಖ್ಯಮಂತ್ರಿ . ನವೆಂಬರ್ 30 ರಂದು ಉಪಮುಖ್ಯಮಂತ್ರಿ ರಾಜೀನಾಮೆ ನೀಡಿದರು. ವೈಯಕ್ತಿಕ ಕಾರಣಕ್ಕಾಗಿ ತಾವು ಸ್ಥಾನ ತೊರೆಯುವುದಾಗಿ ಅವರು ಹೇಳಿದರು. ಆದರೆ ಅದು ಸಂಯುಕ್ತ ಶಾಸಕಾಂಗ ಪಕ್ಷದ ಅಂಗ ಪಕ್ಷಗಳ ನಡುವಣ ವೈಮನಸ್ಯದ ಪರಿಣಾಮ ಎಂಬುದು ಅನಂತರದ ಬೆಳವಣಿಗೆ ತೋರಿಸಿಕೊಟ್ಟಿದೆ. ಡಿಸೆಂಬರ್ ಎರಡರಂದು ಕಾಂಗ್ರೆಸವರೇ ಆದ ಕ್ರೀಡಾ ಸಚಿವ ಹೆರೆಯಿಪಾ ಸೇಮಾ ರಾಜೀನಾಮೆ ಕೊಟ್ಟರು. ಮುಖ್ಯಮಂತ್ರಿಯವರು ಸಹೋದ್ಯೋಗಿಗಳೊಂದಿಗೆ ಸಮಾಲೋಚಿಸದೆ ನಿರ್ಧಾರ ಕೈಗೊಳ್ಳುತ್ತಿರುವುದರಿಂದ ಸಂಪುಟದಿಂದ ಹೊರಬಂದಿರುವುದಾಗಿ ಅವರ ವಿವರಣೆ.

ಈ ಮಧ್ಯೇ, ಎಲ್ಲಾ ಕಾಂಗ್ರೆ ಸಚಿವರು ರಾಜೀನಾಮೆ ಕೊಡಬೇಕು , ಇಲ್ಲದಿದ್ದರೆ ಉಚ್ಚಾಟಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಕಾಂಗ್ರೆ ಸಚಿವರನ್ನು ಸಂಪುಟದಿಂದ ಕೈ ಬಿಡಬೇಕೆಂದು ಅವರು ರಾಜ್ಯಪಾಲರಿಗೆ ಶಿಫಾರಸು ಮಾಡಿದ್ದಾರೆ.

ಕೇಂದ್ರದಲ್ಲಿ ತಾನಾಡಿಸುವ ಕೈಗೊಂಬೆ ಸರಕಾರವನ್ನು ಅಧಿಕಾರಕ್ಕೆ ತಂದ ಮೇಲೆ ವಿವಿಧ ರಾಜ್ಯಗಳಲ್ಲಿ ಕೈತಪ್ಪಿ ಹೋಗಿರುವ ಸರಕಾರಗಳನ್ನೂ ಹಿಡಿಯುವ ಕಾಂಗ್ರೆಸ್(ಐ)ನ ತಂತ್ರ, ಪ್ರಯತ್ನಗಳನ್ನು ಈ ಎಲ್ಲಾ ಬೆಳವಣಿಗೆಗಳಲ್ಲಿ ಕಾಣಬಹುದಾಗಿದೆ.

ನನ್ನನ್ನಿಲ್ಲಿ ಬದುಕ ಬಿಡುವರೇ?

ಇದು ಐದು ವರ್ಷದ ಮುಸ್ಲಿಂ ಬಾಲಕನೊಬ್ಬ ಸಿಪಿಐ(ಎಂ) ತಂಡಕ್ಕೆ ಬಿಜನೋರ್‌ನ ಮಛಲಿ ಬಝಾರ್ ಪ್ರದೇಶದಲ್ಲಿ ಕೇಳಿದ ಮುಗ್ಧ ಪ್ರಶ್ನೆ---ಪಿಎಸಿ ಸೈನಿಕರು ಅವನನ್ನು ಪಾಕಿಸ್ತಾನಕ್ಕೆ ಹೋಗು ಎಂದು ದಬಾಯಿಸಿದರಂತೆ.

ಅಯೋಧ್ಯೆಯಲ್ಲಿ ಅಕ್ಟೋಬರ್ 30 ರಂದು ಬಿಜೆಪಿ--ವಿಎಚ್‌ಪಿಯ 'ಕರಸೇವೆ'ಯ ರಾಜಕೀಯ ಆಟ ನಡೆಯುತ್ತಿದ್ದಾಗ ಅದೇ ರಾಜ್ಯದ ಬಿಜನೋರ್ ತೀವ್ರ ಕೋಮು ದಂಗೆಗಳನ್ನು ಕಂಡಿತು. ಕರ್ಫ್ಯೂ ಇದ್ದರೂ, ಮರುದಿನವೇ ಮುಂದುವರಿದ ಗಲಭೆಗಳಲ್ಲಿ ಕನಿಷ್ಟ 150 ಮಂದಿ ಸತ್ತಿದ್ದಾರೆ. ಇವರಲ್ಲಿ ಬಹುಪಾಲು ಅಲ್ಪಸಂಖ್ಯಾತ ಕೋಮಿಗೆ ಸೇರಿದವರು. ಈ ಹಲ್ಲೆಗಳ ನೇತೃತ್ವ ವಹಿಸಿದವರು ಆರ್‌ಎಸ್‌ಎಸ್--ಬಿಜೆಪಿ, ವಿಎಚ್‌ಪಿ, ಭಜರಂಗ ದಳದ ಕಾರ್ಯಕರ್ತರು. ಅಲ್ಲಿಯ ಆಡಳಿತ ಹಾಗೂ ಪ್ರಾದೇಶಿಕ ಸಶಸ್ತ್ರ ಸೇನೆ(ಪಿಎಸಿ) ಶಾಂತಿಕಾಪಾಡುವ ಬದಲು ದಂಗೆಕೋರರೊಂದಿಗೆ ಶಾಮೀಲಾಯಿತು. ಸೆಕ್ಷನ್ 144 ಜ್ಯಾರಿಯಲ್ಲಿದ್ದರೂ 'ಕರಸೇವೆ' ನಡೆಯಿತು ಎಂಬ ಸುಳ್ಳು ಸುದ್ದಿಯ ಮೇಲೆ 'ವಿಜಯ ಯಾತ್ರೆ' ಗೆ ಆಡಳಿತ ಅವಕಾಶ ನೀಡದಿದ್ದರೆ ಈ ದಂಗೆ ನಡೆಯುತ್ತಿರಲಿಲ್ಲ.

ಈ ಅಂಶಗಳ ಬಿಜನೋರ್‌ಗೆ ಭೇಟಿ ನೀಡಿದ ಸಿಪಿಐ(ಎಂ) ತಂಡ ನಡೆಸಿದ ಮಾತುಕತೆ, ತನಿಖೆಗಳಿಂದ ತಿಳಿದು ಬಂದಿದೆ. ರಾಜ್ಯ ವಿಧಾನ ಸಭೆಯಲ್ಲಿ ಸಿಪಿಐ(ಎಂ) ಗುಂಪಿನ ಮುಖಂಡ ರಾಜ್‌ಕಿಶೋರ್ ಸಿಂಗ್, ರಾಜ್ಯ ಸೆಕ್ರೆಟಾರಿಯಟ್ ಸದಸ್ಯ ಗುಲಾಬ್‌ಸಿಂಗ್ ಮತ್ತಿತರರು ಇದ್ದ ಈ ತಂಡ ಬಿಜನೋರ್‌ನ ಗಲಭೆ ಪೀಡಿತ ಪ್ರದೇಶಗಳಲ್ಲಿ ಸಂಚರಿಸಿ ಜನರನ್ನು ಸಂದರ್ಶಿಸಿತು.

ದೇಶದ ವಿಭಜನೆಯ ಅತ್ಯಂತ ದುರ್ದಿನಗಳಲ್ಲೂ ಕೋಮು ಸೌಹಾರ್ದ ಕಾಪಾಡಿಕೊಂಡಿದ್ದ ಹಲವಾರು ಪ್ರದೇಶಗಳು ಈ ಬಾರಿ ಕೋಮು ಭಾವೋದ್ರೇಕಕ್ಕೆ ಬಲಿಯಾದವು. ಇವುಗಳಲ್ಲಿ ಬಿಜನೋರ್ ಕೂಡಾ ಒಂದು. ಒಂದು ತಿಂಗಳಿಂದ ಆರ್‌ಎಸ್‌ಎಸ್, ಬಿಜೆಪಿ, ವಿಎಚ್‌ಪಿಯ ವಿಷ ಪ್ರಚಾರದಿಂದಾಗಿ ಗಂಭೀರ ಪರಿಸ್ಥಿತಿ ಉಂಟಾಗಿತ್ತು. ಈ ದಂಗೆಗಳು ಪೂರ್ವಯೋಜಿತವಾಗಿದ್ದವು. ಎರಡೂ ಕೋಮುಗಳ ಮತಾಂಧರು ಇದಕ್ಕೆ ಸಿದ್ಧತೆ ನಡೆಸಿದ್ದರು. ಆಡಳಿತದ, ಪೋಲೀಸ್ ಪಡೆಯ ಅಜಾಗರೂಕತೆ ಹಾಗೂ ಶಾಮೀಲು ಎರಡೂ ಕಡೆಯ ಮತಾಂಧರಿಗೆ ಸುವರ್ಣಾವಕಾಶ ಒದಗಿಸಿತು. ನಂತರ ಪಿಎಸಿ ಸೈನಿಕರೇ ಲೂಟಿ, ದರೋಡೆಯಲ್ಲಿ ತೊಡಗಿದರು. ಬಿಜನೋರ್ ಗಲಭೆಗಳ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು, ಶಾಮೀಲಾದ ಬೇಜವಾಬ್ದಾರಿಯಿಂದ ವರ್ತಿಸಿದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು ಹಾಗೂ ಸತ್ತವರ ಕುಂಟುಂಬಗಳಿಗೆ ತಲಾ ಒಂದು ಲಕ್ಷ ರೂ ಪರಿಹಾರ ನೀಡಬೇಕೆಂದು ಸಿಪಿಐ(ಎಂ) ತಂಡ ಒತ್ತಾಯಿಸಿದೆ.

ಅಸ್ಸಾಂ ಸರಕಾರ ವಜಾ: ಪಿ.ಬಿ. ಖಂಡನೆ

ಅಸ್ಸಾಂ ಸರಕಾರವನ್ನು ಕೇಂದ್ರಸರಕಾರ ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಹೇರಿರುವುದನ್ನು ಸಿಪಿಐ(ಎಂ) ಪಾಲಿಟ್ ಬ್ಯುರೋ ಖಂಡಿಸಿದ್ದು. ಹೇಳಿಕೆಯ ಪೂರ್ಣ ಪಾಠ ಹೀಗಿದೆ:

ಅಸ್ಸಾಂನಲ್ಲಿ ಕಾನೂನು ಮತ್ತು ವ್ಯವಸ್ಥೆ ಪರಿಸ್ಥಿತಿ ಹದಗೆಡುತ್ತಿರುವ ಬಗ್ಗೆ ಕಳೆದ ಕೆಲವು ತಿಂಗಳುಗಳಿಂದ ಸಿಪಿಐ(ಎಂ) ಗಂಭೀರ ಕಳವಳ ವ್ಯಕ್ತಪಡಿಸುತ್ತಾ ಬಂದಿದೆ. 'ಉಲ್ಫಾ' ಚಟುವಟಿಕೆಗಳನ್ನು ತಡೆಯಲು ರಾಜ್ಯ ಸರಕಾರ ವಿಫಲವಾದ್ದರಿಂದ ರಾಜ್ಯದ ಅನೇಕ ಭಾಗಗಳಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳು, ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಹಾಗೂ ಅಲ್ಪ ಸಂಖ್ಯಾತರಲ್ಲಿ ಅಭದ್ರತೆಯನ್ನು ಸೃಷ್ಟಿಸಿತ್ತು. ನಾಗರೀಕರ ಜೀವ ಮತ್ತು ಸೊತ್ತಿನ ರಕ್ಷಣೆಗೆ ಸಾಕಷ್ಟು ಕ್ರಮ ಕೈಗೊಳ್ಳುವಂತೆ ಸಿಪಿಐ(ಎಂ) ಹಿಂದಿನ ರಾಷ್ಟ್ರಿಯ ರಂಗ ಸರಕಾರವನ್ನು ಒತ್ತಾಯಿಸಿತ್ತು. ವಿಧಾನಸಭೆ ಚುನಾವಣೆಗಳನ್ನು ನಡೆಸಲು ಬೇಕಾದ ಪರಿಸ್ಥಿತಿ ನಿರ್ಮಾಣಕ್ಕೆ ಅಂಥ ಕ್ರಮಗಳು ಅಗತ್ಯವಾಗಿದ್ದವು.

ಈಗ ಚಂದ್ರಶೇಖರ್ ನೇತೃತ್ವದ ಹೊಸ ಸರಕಾರ ರಾಜ್ಯ ಸರಕಾರವನ್ನು ವಜಾ ಮಾಡಿ ಅಸ್ಸೆಂಬ್ಲಿಯನ್ನು ವಿಸರ್ಜಿಸಿದೆ. ಇದೊಂದು ತಪ್ಪು ಹೆಜ್ಜೆ ಹಾಗೂ ರಾಜ್ಯದಲ್ಲಿ ಯಥಾಸ್ಥಿತಿಯನ್ನು ಮರಳಿಸಲು ನೆರವಾಗದು. ರಾಜ್ಯ ಸರಕಾರವನ್ನು ಕಿತ್ತು ಹಾಕಿ ರಾಷ್ಟ್ರಪತಿ ಆಡಳಿತ ಹೇರಿರುವುದರಿಂದ ರಾಜ್ಯದಲ್ಲಿ ವಿಚ್ಛಿದ್ರತೆ ಮತ್ತು ಪ್ರಾದೇಶಿಕವಾದವನ್ನು ಬಿತ್ತುವ ಶಕ್ತಿಗಳಿಗೆ ಅವಕಾಶ ದೊರೆದಂತಾಗುತ್ತದೆ.

"ಮಹಿಳಾ ಆಂದೋಲನದಲ್ಲಿ ಸೈದ್ಧಾಂತಿಕ ಮಧ್ಯಪ್ರವೇಶ ತೀಕ್ಷ್ಣಗೊಳ್ಳಬೇಕು"

ನವೆಂಬರ್ 9 ರಿಂದ 12 ರವರೆಗೆ ಕಲ್ಕತ್ತೆಯಲ್ಲಿ ನಡೆದ ಅಖಿಲ ಭಾರತ ಜನಸತ್ತಾತ್ಮಕ ಮಹಿಳಾ ಸಂಘಟನೆಯ ಮೂರನೇ ರಾಷ್ಟ್ರೀಯ ಸಮ್ಮೇಳನ ಮಹಿಳಾ ಕಾರ್ಯಕರ್ತರ ಮುಂದೆ ಈಗ ಹನ್ನೆರಡು ಕರ್ತವ್ಯಗಳನ್ನು ಇಟ್ಟಿದೆ.

1.ಕೋಮುವಾದಿ-ವಿರೋಧಿ ಪ್ರಚಾರವನ್ನು ತೀವ್ರಗೊಳಿಸುವುದು ಈಗಿನ ಅತ್ಯಂತ ತುರ್ತು ಕರ್ತವ್ಯ. ಇದನ್ನು ಸಾರ್ವತ್ರಿಕ ಪ್ರಜಾಪ್ರಭುತ್ವ ಹೋರಾಟದೊಂದಿಗೆ ಬೆಸೆಯಬೇಕು. ಕೋಮುವಾದದ ವಿರುದ್ಧ ಜಾತ್ಯತೀತ ಭಾವನೆಗಳನ್ನು ಬೆಳೆಸಲು ಮಹಿಳಾ ಸಂಘಟನೆಗಳ ಒಂದು ವ್ಯಾಪಕ ರಂಗ ರಚಿಸಲು ಮುಂದಾಗಬೇಕು.

2.ದೇಶದಲ್ಲಿ ನಡೆಯುತ್ತಿರುವರಾಜಕೀಯ ಬದಲಾವಣೆಗಳ ಸಂದರ್ಭದಲ್ಲಿ ಸರ್ವಾಧಿಕಾರಿ ಶಕ್ತಿಗಳು ಮತ್ತೆ ತಲೆಯೆತ್ತುವುದರ ವಿರುದ್ಧ, ಪ್ರಜಾಪ್ರಭುತ್ವ ಹಕ್ಕುಗಳ ನಿರಾಕರಣೆಯ ವಿರುದ್ಧ ಹೋರಾಟ.

3.ತ್ರಿಪುರಾದ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದು ಮಹಿಳೆಯರ ಮೇಲೆ ಕಾಂಗ್ರೆ ಗೂಂಡಾಗಳ ಅತ್ಯಾಚಾರ ಮತ್ತಷ್ಟು ತೀವ್ರಗೊಳ್ಳುತ್ತಿದೆ. ಆದ್ದರಿಂದ ಎಲ್ಲೆಡೆ ಸೌಹಾರ್ದ ಪ್ರಕ್ಷೋಭೆ ಅನಿವಾರ್ಯ.

4. ಗ್ರಾಮೀಣ ಮಹಿಳೆಯರ ಸಮಸ್ಯೆಗಳು, ಬೇಡಿಕೆಗಳು ಇನ್ನು ಮುಂದೆ ಎ.ಐ.ಡಿ.ಡಬ್ಲ್ಯು. ಎ. ದ ಪ್ರಮುಖ ಕೆಲಸವಾಗಬೇಕು. ವಿಭಿನ್ನ ಪ್ರದೇಶಗಳ ವಿಭಿನ್ನ ಸ್ತರಗಳ ಗ್ರಾಮೀಣ ಮಹಿಳೆಯರ ವಿಶಿಷ್ಟ ಸಮಸ್ಯೆಗಳನ್ನು ವಿಶ್ಲೇಷಿಸಿ, ಅವುಗಳ ಪರಿಹಾರಕ್ಕೆ ಸೂಕ್ತ ಬೇಡಿಕೆಗಳನ್ನು ರೂಪಿಸಬೇಕು. ರಾಜ್ಯಗಳಲ್ಲಿ ಗ್ರಾಮೀಣ ಮಹಿಳೆಯರ ಸಮಾವೇಶಗಳನ್ನು ನಡೆಸಬೇಕು.

5. ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ರಚನೆಯಾಗಿದ್ದರೂ ರಾಜ್ಯಗಳಲ್ಲಿ ಇಂತಹ ಆಯೋಗಗಳಿಲ್ಲದಿದ್ದರೆ ಪರಿಣಾಮಕಾರಿಯಾಗುವುದಿಲ್ಲ. ಆದ್ದರಿಂದ ರಾಜ್ಯ ಮಟ್ಟದ ಆಯೋಗಗಳನ್ನು ರಚಿಸಲು ಪ್ರಕ್ಷೋಭೆ ನಡೆಸಬೇಕು.

6. ಬೆಲೆಯೇರಿಕೆಯ ವಿರುದ್ಧ, ಉದ್ಯೋಗ ಖಾತರಿ ಯೋಜನೆಗಳಿಗಾಗಿ ಚಳುವಳಿ ತೀವ್ರಗೊಳಿಸಬೇಕು.

7. ನಿರ್ದಿಷ್ಟ ಬೇಡಿಕೆಗಳಿಗಾಗಿ ಚಳುವಳಿಗಳನ್ನು ಆರಂಭಿಸುವಾಗ ಹೆಣ್ಣು ಮಗುವಿನ ಸಮಸ್ಯೆಗಳ ಬಗ್ಗೆ ತಿಳಿಸಲು ಪ್ರಾಧಾನ್ಯತೆ ನೀಡಬೇಕು.

8. ಭ್ರೂಣದ ಲಿಂಗ ನಿರ್ಧಾರವನ್ನು ನಿಷೇದಿಸಲು ರಾಷ್ಟ್ರಮಟ್ಟದ ಕಾನೂನು ರಚಿಸಲು ಪ್ರಚಾರ ನಡೆಸಬೇಕು.

9. ದುಡಿಯುವ ಮಹಿಳೆಯರ, ವಿಶೇಷವಾಗಿ ಅಸಂಘಟಿತ ಮಹಿಳಾ ಕಾರ್ಮಿಕರ ಸಮಸ್ಯೆಗಳನ್ನು ಸಕ್ರಿಯವಾಗಿ ಎತ್ತಿಕೊಳ್ಳಬೇಕು.

10. ಸಮೂಹ ಮಾಧ್ಯಮಗಳಲ್ಲಿ ಮಹಿಳೆಯರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ವಿಕೃತಗೊಳಿಸುವುದರ, ಹೊಲಸುಗೊಳಿಸುವುದರ ವಿರುದ್ಧ ಬಲಶಾಲೀ ಪ್ರಕ್ಷೋಭೆ, ದೂರದರ್ಶನ ಕಾರ್ಯಕ್ರಮಗಳ ನಿರೀಕ್ಷಣೆಗೆ ಮಹಿಳಾ ಸಂಘಟನೆಗಳ ಪ್ರತಿನಿಧಿಗಳಿರುವ ಉಸ್ತುವಾರಿ ಸಮಿತಿಗಳನ್ನು ರಚಿಸಬೇಕೆಂದು ಒತ್ತಾಯಿಸಿ ಚಳುವಳಿ ನಡೆಸಬೇಕು.

11. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಶೋಚನೀಯ ಪರಿಸ್ಥಿತಿ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆಯ ಅಭಾವ, ಕುಟುಂಬ ಕಲ್ಯಾಣ ಕ್ಯಾಂಪುಗಳ ದುಸ್ಥಿತಿ ಮತ್ತಿತರ ಆರೋಗ್ಯಪಾಲನೆಯ ಅಂಶಗಳತ್ತ ಗಮನ ಕೇಂದ್ರೀಕರಿಸಬೇಕು.

12. ಮಹಿಳಾ ಆಂದೋಲನ ಹಾಗೂ ಮಹಿಳಾ ಅಧ್ಯಯನಗಳ ನಡುವೆ ನಿಕಟ ಸಂಪರ್ಕ ಬೆಳೆಸುವ ಒಂದು ಭಾಗವಾಗಿ ಎ.ಐ.ಡಿ.ಡಬ್ಲ್ಯು.ಎ. ಕಾರ್ಯಕರ್ತೆಯರು ಸಂಶೋಧನಾ ಪ್ರವೃತ್ತಿ ಬೆಳೆಸಿಕೊಂಡು, ಮಹಿಳೆಯರ ಸಮಸ್ಯೆಗಳ ಆಳವಾದ ಅಧ್ಯಯನ ನಡೆಸಬೇಕು. ಇದರಿಂದ ಈ ಸಮಸ್ಯೆಗಳನ್ನು ಉತ್ತಮ ರೀತಿಯಲ್ಲಿ ಎದುರಿಸಲು ಸಾಧ್ಯ. ಮಹಿಳೆಯರ ಪ್ರಶ್ನೆಗಳಲ್ಲಿ ಸೈದ್ಧಾಂತಿಕ ಮಧ್ಯಪ್ರವೇಶ ಹೆಚ್ಚಿಸಬೇಕು, ಅದನ್ನು ತೀಕ್ಷ್ಣಗೊಳಿಸಬೇಕು.

ಮೂರನೇ ಸಮ್ಮೇಳನ 66 ಸದಸ್ಯರಿರುವ ಹೊಸ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ರಚಿಸಿತು. ಹೊಸ ಪದಾಧಿಕಾರಿಗಳ ಹೆಸರುಗಳು ಹೀಗಿವೆ.

ಅಧ್ಯಕ್ಷರು : ಸುಶೀಲಾ ಗೋಪಾಲನ್

ಪ್ರಧಾನ ಕಾರ್ಯದರ್ಶಿ:ಶ್ಯಾಮಲೀ ಗುಪ್ತ

ಉಪಾಧ್ಯಕ್ಷರು:ಕನಕ್ ಮುಖರ್ಜಿ, ಅಹಲ್ಯಾ ರಂಗ್ನೇಕರ್, ವಿಮಲಾ ರಣದಿವೆ, ಮಂಜ ಗುಪ್ತ, ಅಕ್ಷ್ಮಿ ಸಹಗಲ್, ಪಾಪಾ ಉಮಾನಾಥ್, ಸರೋಜಿನಿ ಬಾಲಾನಂದನ್, ಮಂಗಲೇಶ್ವರಿ ದೇವ್‌ಬರ್ಮಾ, ರಾಜೆಂದರ್ ಕೌರ್, ಉದಯಂ ಮತ್ತು ರಶಿಯಾ ಖಾತುಂ.

ಜಂಟೀ ಕಾರ್ಯದರ್ಶಿಗಳು: ಬೃಂದಾ ಕಾರಟ್, ಮೈಥಿಲಿ ಶಿವರಾಮನ್ ಮತ್ತು ಮಧು ಸೇಥಿಯಾ.

ಕೋಶಾಧಿಕಾರಿ: ಬಿಬಾ ಘೋಷ್ ಗೋಸ್ವಾಮಿ

ಕರ್ನಾಟಕದ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಹರಿಣಿ ಕಣ್ಣೀರಿ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಎಸ್.ವಿಮಲಾ ಕೇಂದ್ರ ಕಾರ್ಯಕಾರಿ ಸಮಿತಿಯಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಭಾರತ ಜ್ಞಾನ ವಿಜ್ಞಾನ ಜಾಥಾ

ಪುಟ 2 ರಿಂದ

ಅಧ್ಯಕ್ಷತೆ ವಹಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ಶ್ರೀ.ಸಿ.ನಾರಾಯಣಸ್ವಾಮಿ ಯವರು ಕಲಾವಿದರನ್ನು ಮತ್ತು ಜಾಥಾದ ಕಾರ್ಯಕರ್ತರನ್ನು ಅಭಿನಂಧಿಸಿದರು.

ಗುಲ್ಬರ್ಗಾದಲ್ಲಿ

ಗುಲ್ಬರ್ಗಾ ಜಿಲ್ಲೆಯಾದ್ಯಂತ ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಭಾರತ ಜ್ಞಾನ ವಿಜ್ಞಾನ ಜಾಥಾ ಸಮಿತಿಯ ಆಶ್ರಯದಲ್ಲಿ ಸಾಕ್ಷರತಾ ಆಂದೋಲನ ಯಶಸ್ವಿಯಾಗಿ ನಡೆಯಿತು.

ಜ್ಞಾನ ವಿಜ್ಞಾನ ಜಾಥಾ ತಂಡದಲ್ಲಿ ಸುಮಾರು 30ರಿಂದ 40ಪುರುಷರು ಮತ್ತು ಮಹಿಳಾ ಕಲಾವಿದರು ಭಾಗವಹಿಸಿದ್ದರು. ಪ್ರೊ.ಆರ್.ಕೆ. ಹುಡಿಗಿಯವರು ರಚಿಸಿದ್ದ 'ಅಕ್ಷರ' ಎಂಬ ನಾಟಕವನ್ನು ಹಳ್ಳಿಹಳ್ಳಿಗಳಲ್ಲಿ, ಬೀದಿಬೀದಿಗಳಲ್ಲಿ ಪ್ರದರ್ಶಿಸಿದರು. ನಾಟಕ್ಕೆ ರೈತರಿಂದ . ಜನಸಾಮಾನ್ಯರಿಂದ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿತು. ಅವರನ್ನು ಕಲಿಯುವಂತೆ ಪ್ರೇರೇಪಿಸಿದೆ. ಭಾಗೋಡಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದ ರೇವಣ್ಣ ಸಿದ್ದಪ್ಪ, ಬೀದರದ ಸಾಕ್ಷರತಾ ರಾಯಭಾರಿಗಳಾದ ಎಂ.ಬಿ. ಸಜ್ಜನ, ಶಂಕರಯ್ಯ ಘಂಟಿ ಹಾಗೂ ಗುಲ್ಬರ್ಗಾ ಸಮುದಾಯದ ಅಧ್ಯಕ್ಷರಾದ ಪ್ರೊ.ಪ್ರಭು ಕಾನಪೂರೆ ಉಪಸ್ಥಿತರಿದ್ದವರಲ್ಲಿ ಪ್ರಮುಖರು. ಜಾಥಾವನ್ನು ಜಿಲ್ಲೆಯ ಮಂಡಲ ಪಂಚಾಯಿತಿ ಪ್ರಧಾನರು, ಉಪಪ್ರಧಾನರು, ಸದಸ್ಯರು, ಜಿಲ್ಲಾ ಪರಿಷತ್ತಿನ ಸದಸ್ಯರು, ಸರಕಾರಿ ಅಧಿಕಾರಿಗಳು ಹಾಗೂ ಸ್ಥಳೀಯ ಯುವ ಮತ್ತು ಮಹಿಳಾ ಸಂಘಟನೆಗಳು ಸ್ವಾಗತಿಸಿ ಬರಮಾಡಿಕೊಂಡರು.

ಇರಾಕ್ ಮೇಲೆ ಬಲಪ್ರಯೋಗದ ಬೆದರಿಕೆ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಇರಾಕ್‌ನ ಕುವೈತ್ ಮೇಲಿನ ಆಕ್ರಮಣದ ಬಗೆಗೆ 12 ನೇ ನಿರ್ಣಯ ತೆಗೆದುಕೊಂಡಿದೆ. ಈ ಚಾರಿತ್ರಿಕ ನಿರ್ಣಯದ ಪ್ರಕಾರ ಇರಾಕ್‌ಗೆ ಕುವೈತ್‌ನಿಂದ ಸೈನ್ಯ ವಾಪಸು ತೆಗೆದುಕೊಳ್ಳಲು ಜನವರಿ 15 ರವರೆಗೆ ಅಂದರೆ 45 ದಿನಗಳ ಗಡುವು ಕೊಡಲಾಗಿದೆ. ಇದನ್ನು ಇರಾಕ್ ಪಾಲಿಸದಿದ್ದರೆ ನಿರ್ಣಯ ವಿಶ್ವಸಂಸ್ಥೆಯ ಸದಸ್ಯ ದೇಶಗಳಿಗೆ ಬಲಪ್ರಯೋಗ ಮಾಡುವ ಹಕ್ಕು ಕೊಟ್ಟಿದೆ. ಆದರೆ ಈ ನಿರ್ಣಯ ಅವಿರೋಧವಾಗಿರಲಿಲ್ಲ. ಭದ್ರತಾ ಸಮಿತಿಯ 15 ಸದಸ್ಯ ದೇಶಗಳಲ್ಲಿ 12 ಪರವಾಗಿ ಮತ ನೀಡಿದರೆ, ಚೀನಾ ಮತದಾನದಲ್ಲಿ ಭಾಗವಹಿಸಲಿಲ್ಲ. ಕ್ಯುಬಾ ಮತ್ತು ಯೆಮೆನ್ ನಿರ್ಣಯದ ವಿರುದ್ಧ ಮತ ನೀಡಿದವು.

ಸುಮಾರು 40 ವರ್ಷಗಳ ಹಿಂದೆ ಕೊರಿಯಾದಲ್ಲಿ ಇಂತಹ ಬಲಪ್ರಯೋಗಕ್ಕೆ ವಿಶ್ವ ಸಂಸ್ಥೆ ಅನುಮತಿ ನೀಡಿತ್ತು. ಆದರ ನಂತರ ಬಲಪ್ರಯೋಗಕ್ಕೆ ಭದ್ರತಾ ಸಮಿತಿ ಅನುಮತಿ ನೀಡುತ್ತಿರುವುದು ಇದು ಎರಡನೇ ಬಾರಿ. ಕಳೆದ ಕೆಲವುವಾರಗಳಿಂದ ಅಮೇರಿಕ ತೀವ್ರ ರಾಯಭಾರ ಪ್ರಯತ್ನಗಳಿಂದ , ಈ ನಿರ್ಣಯಕ್ಕೆ ವ್ಯಾಪಕ ಬೆಂಬಲ ಗಳಿಸಲು, ಗಂಭೀರ ಪ್ರಯತ್ನಗಳನ್ನು ನಡೆಸಿತ್ತು.ಫ್ರಾನ್ಸ್ ಮತ್ತು ಸೋವಿಯತ್ ಒಕ್ಕೂಟ ಇದಕ್ಕೆ ಬೆಂಬಲ ನೀಡಲು ಹಿಂತೆಗೆದಿದ್ದವು. ಬಲಪ್ರಯೋಗ ವಿಶ್ವಸಂಸ್ಥೆಯ ಉಸ್ತುವಾರಿಯಲ್ಲಿ ನಡೆಯಬೇಕು, ಯಾವುದೇ ಸದಸ್ಯ ದೇಶ ಇದನ್ನು ತನ್ನ ವೈಯಕ್ತಿಕ ಜವಾಬ್ದಾರಿ ಎಂದು ತಿಳಿಯಬಾರದು ಎಂಬ ನಿಲುವನ್ನು ಬಿಟ್ಟುಕೊಟ್ಟು ಅಮೇರಿಕನ್ ನಿರ್ಣಯಕ್ಕೆ ಬೆಂಬಲ ನೀಡಿದೆ.

ಇನ್ನೊಂದು ದೇಶದ ಮೇಲೆ ಆಕ್ರಮಣ ಮಾಡಿ ಅದರ ಮೇಲೆ ಅಧಿಪತ್ಯ ಸಾಧಿಸಬಹುದು ಎಂಬುದನ್ನು ಅಸಾಧ್ಯಗೊಳಿಸಬೇಕು ಮತ್ತು ಅದು ವಿಶ್ವಸಂಸ್ಥೆಯ ಮೂಲಕ ಆಗಬೇಕು ಎಂಬ ಬಗ್ಗೆ ಯಾವುದೇ ಸಂಶಯಕ್ಕೆ ಆಸ್ಪದವಿಲ್ಲ. ಆದರೆ ಅಮೇರಿಕಕ್ಕೆ ಬಲಪ್ರಯೋಗ ಮಾಡಲು ಅಧಿಕಾರ ನೀಡುವುದು ಈ ನೀತಿಯ ಪಾಲನೆ ಅಲ್ಲ ಎಂಬುದು ಅದರ ಉದ್ದೇಶಗಳ ಬಗೆಗೆ ಗೊತ್ತಿದ್ದವರಿಗೆ ಸ್ಪಷ್ಟ. ಅದು ಇರಾಕ್ ಮೇಲೆ ಆಕ್ರಮಣಕ್ಕೆ ಹೊರಟಿರುವುದು, ಕೊಲ್ಲಿಯ ತೈಲದ ಮೇಲೆ ತನ್ನ ಅಧಿಪತ್ಯಕ್ಕೆ ಸವಾಲೊಡ್ಡುವ ಯಾವುದೇ ಮಿಲಿಟರಿ ಶಕ್ತಿಯನ್ನು ಇಲ್ಲವಾಗಿಸುವುದಕ್ಕೆ, ಯಾವುದೇ ನೀತಿಯನ್ನು ಎತ್ತಿ ಹಿಡಿಯುವುದಕ್ಕಲ್ಲ. ಅಮೇರಿಕವೇ ತನ್ನ ಹಿತಾಸಕ್ತಿಗಳಿಗೆ ವಿರುದ್ಧವಾದ ಸರಕಾರಗಳನ್ನು ಕಿತ್ತುಹಾಕಲು ಪನಾಮಾ ಮತ್ತು ಗ್ರೆನೆಡಾದಲ್ಲಿ ಮಿಲಿಟರಿ ಆಕ್ರಮಣ ಮಾಡಿದ್ದು ಇಬ್ಬಂದಿತನದ ಪರಮಾವಧಿ. ಅದೇ ಅಲ್ಲದೆ ಅದೇ ಕೊಲ್ಲಿಯಲ್ಲಿ ದಶಕಗಳಿಂದ ಪ್ಯಾಲೆಸ್ಟೇನ್ನರ ತಾಯ್ನಾಡನ್ನು ಆಕ್ರಮಿಸಿ ಕೂತಿರುವ ಇಸ್ರೇಲ್ ವಿರುದ್ಧ ಅದೇ ಭದ್ರತಾ ಸಮಿತಿ ಅಂಗೀಕರಿಸಿದ ನಿರ್ಣಯಗಳು ಧೂಳು ಹಿಡಿಯುತ್ತಾ ಕೂತಿವೆ. ಇತ್ತೀಚೆಗೆ ಇಸ್ರೇಲ್‌ನಲ್ಲಿ ಪ್ಯಾಲೆಸ್ತೇನಿಯರ ರಕ್ಷಣೆ ಬಗ್ಗೆ ವಿಶ್ವ ಸಂಸ್ಥೆ ಮಹಾ ಕಾರ್ಯದರ್ಶಿ ನೇಮಿಸಿದ ನಿಯೋಗದ ಶಿಫಾರಸುಗಳ ಆಧಾರದ ಮೇಲೆ ಭದ್ರತಾ ಸಮಿತಿ ಅಂಗೀಕರಿಸ ಬೇಕಾಗಿದ್ದ ನಿರ್ಣಯಗಳನ್ನು ಅಮೇರಿಕ ತನ್ನ ಎಲ್ಲಾ ಪ್ರಭಾವ ಬೀರಿ ಇರಾಕ್ ಮೇಲಿನ ನಿರ್ಣಯದ ನಂತರ ತೆಗೆದುಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದೆ. ಅಮೇರಿಕ ತನ್ನ ಮೂಗಿನ ನೇರಕ್ಕೆ ವಿಶ್ವ ಸಂಸ್ಥೆ ಒಪ್ಪುವಂತೆ ಮಾಡಲು ಸಾಧ್ಯವಾಗಿರುವುದು ಅಪಾಯಕಾರಿ ಸೂಚನೆ.

ಕೊಲ್ಲಿಯಲ್ಲಿ ಯುದ್ಧವಾದರೆ ಅದರಿಂದ ಇಡೀ ಜಗತ್ತಿಗೆ, ಅದರಲ್ಲೂ ಮೂರನೇ ಜಗತ್ತಿನ ದೇಶಗಳ ಮೇಲೆ ಭೀಕರ ಪರಿಣಾಮವಾಗುವುದರಲ್ಲಿ ಸಂಶಯವಿಲ್ಲ. ಈಗಾಗಲೇ ಈ ದೇಶಗಳು ಇದರ ಪರಿಣಾಮದಿಂದ ತತ್ತರಿಸಿವೆ. 45 ದಿನಗಳ ಗಡುವಿನಲ್ಲಿ ಮಾತುಕತೆಗಳ ಮೂಲಕ ಶಾಂತಿಯುತ ಪರಿಹಾರ ಆಗುವುದೆಂಬ ಆಸೆಗೆ ಕೆಲವು ಸೂಚನೆಗಳು ಕಂಡುಬಂದಿವೆ. ಅಮೇರಿಕಾದ ಕಾಂಗ್ರೆಸ್ ಮತ್ತು ಸೆನೆಟ್, ಜನಾಭಿಪ್ರಾಯ, ಕೊಲ್ಲಿ ಯುದ್ಧಕ್ಕೆ ತೀವ್ರವಾಗಿ ವಿರುದ್ಧವಿರುವುದು ಇಂತಹ ಒಂದು ಸೂಚನೆ. ಯುದ್ಧಕ್ಕೆ ಕಾಂಗ್ರೆಸ್‌ನ ಅನುಮತಿ ತೆಗೆದುಕೊಳ್ಳಬೇಕೆಂದು ತಾಕೀತು ಮಾಡಿದ್ದು, ಅಂತಹ ಅನುಮತಿ ನೀಡುವ ಸಾಧ್ಯತೆ ಬಹಳ ಕಡಿಮೆ. ಇದಲ್ಲದೆ ಅಮೇರಿಕ--ಇರಾಕ್ ನೇರ ಮಾತುಕತೆಗಳೂ ಶುಭ ಸೂಚನೆ. ಇದು ಸಾಧ್ಯವಾಗಿರುವುದೂ ಅಮೇರಿಕನ್ ಜನಾಭಿಪ್ರಾಯದ ಒತ್ತಡದಿಂದಲೇ.

ಬ್ರಿಟನ್‌ಗೆ ಹೊಸ ಪ್ರಧಾನಿ

ಥ್ಯಾಚರ್ ಪ್ರಧಾನಿ ಪಟ್ಟದಿಂದ ರಾಜಿನಾಮೆ ನೀಡಿದ ಮೇಲೆ ಆಳುವ ಟೋರಿ ಪಕ್ಷ ಥ್ಯಾಚರ್‌ರ ಹಣಕಾಸು ಸಚಿವ ಜಾನ್ ಮೇಜರ್ ಅವರನ್ನು ಪ್ರಧಾನಿ ಪಟ್ಟಕ್ಕೆ ಆರಿಸಿದೆ.ಅವರು ಡೊಗ್ಲಾಸ್ ಹರ್ಡ್ ಮತ್ತು ಮೈಕೇಲ್ ಹೆಸಲಿನ್‌ರನ್ನು ಸೋಲಿಸಿ ಆಯ್ಕೆಯಾದರು. ಅವರು 20 ನೇ ಶತಮಾನದಲ್ಲೇ ಬ್ರಿಟನ್ ಪ್ರಧಾನಿಗಳಲ್ಲಿ ಅತ್ಯಂತ ಕಡಿಮೆ ವಯಸ್ಸಿನವರು.

ಜಾನ್ ಮೇಜರ್ ಪ್ರಮುಖ ಥ್ಯಾಚರ್‌ವಾದಿಗಳಲ್ಲಿ ಒಬ್ಬರು. ಅದರಲ್ಲೂ ಆರ್ಥಿಕ ನೀತಿಗಳಲ್ಲಿ. ಆದರೆ ವರ್ಣಭೇದ, ಯುದ್ಧ-ಶಾಂತಿ ಪ್ರಶ್ನೆ ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ಹೆಚ್ಚು ಉದಾರವಾದಿಗಳು ಎನ್ನಲಾಗಿದೆ. ಅವರು ಹೆಚ್ಚು ಕಡಿಮೆ ಥ್ಯಾಚರ್ ಮಂತ್ರಿಮಂಡಲ ಉಳಿಸಿಕೊಂಡಿದ್ದು, ಟೋರಿ ಪಕ್ಷದ ಹಲವು ಗುಂಪುಗಳನ್ನು ಒಗ್ಗೂಡಿಸಲು ಪ್ರಯತ್ನಿಸುತ್ತಿದ್ದಾರೆ. ಕುಗ್ಗುತ್ತಿರುವ ಟೋರಿ ಪಕ್ಷದ ಜನಪ್ರಿಯತೆ ಇನ್ನೂ ಕುಗ್ಗದಂತೆ ತಡೆಯಲು ಪ್ರಯತ್ನಿಸುತ್ತಿದ್ದಾರೆ.

ಜಾನ್ ಮೇಜರ್ ಬಡ ಕುಟುಂಬದಿಂದ ಬಂದವರು. ಬಡತನದ, ನಿರುದ್ಯೋಗ ಭತ್ಯೆ ಮೇಲೆ ಜೀವನ ಮಾಡಿದ ಅನುಭವ ಇದ್ದವರು ಎನ್ನಲಾಗಿದೆ.

ಹೊಸ ಪ್ರಧಾನಿ ಮೇಜರ್ ಸಂಪುಟದ ಬಗ್ಗೆ ಟಿಪ್ಪಣಿ ಮಾಡುತ್ತಾ ವಿರೋಧಿ ಲೇಬರ್ ಪಕ್ಷದ ನಾಯಕ, ಇದು ಹೊಸ ರಿಂಗ್ ಮಾಸ್ಟರ್‌ರ ನಾಯಕತ್ವದ ಹಳೇ ಸರ್ಕಸ್ ಕಂಪನಿ ಎಂದಿದ್ದಾರೆ. ಪ್ರಮುಖ ನೀತಿಗಳಲ್ಲಿ ಬದಲಾವಣೆಯನ್ನು ಈ ಸರಕಾರದಿಂದ ನಿರೀಕ್ಷಿಸುವಂತಿಲ್ಲ ಎಂದಿದ್ದಾರೆ.

ಬಾಂಗ್ಲಾದೇಶದಲ್ಲಿ ತುರ್ತು ಪರಿಸ್ಥಿತಿ

ಬಾಂಗ್ಲಾ ದೇಶದಲ್ಲಿ ಅಧ್ಯಕ್ಷ ಎರ್ಷಾದ್‌ರ ರಾಜಿನಾಮೆ, ತಾತ್ಕಾಲಿಕ ಪಕ್ಷ ರಹಿತ ಸರಕಾರ ಮತ್ತು ತತ್‌ಕ್ಷಣ ಚುನಾವಣೆಗಳ ಬೇಡಿಕೆ ಮೇಲೆ ಆಧಾರಿತ ಎಲ್ಲಾ ವಿರೋಧ ಪಕ್ಷಗಳ ಪ್ರಜಾತಾಂತ್ರಿಕ ಚಳುವಳಿ ತೀವ್ರವಾಗಿದ್ದು ಇದನ್ನು ಎದುರಿಸಲು ಅಧ್ಯಕ್ಷ ಎರ್ಷಾದ್ ತಮ್ಮ 'ಪ್ರಜಾಪ್ರಭುತ್ವ'ದ ಮುಖವಾಡ ತೆಗೆದು ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ.

ಆದರೆ ತುರ್ತು ಪರಿಸ್ಥಿತಿಯಿಂದ ಜನರ ಬೇಡಿಕೆಯನ್ನು ದಮನಿಸಲು ಸಾಧ್ಯವಾಗಬಹುದೆಂಬ ಅವರ ನಿರೀಕ್ಷೆ ಹುಸಿಯಾಗುವ ಲಕ್ಷಣಗಳು ಕಾಣಬರುತ್ತಿವೆ. ತುರ್ತು ಪರಿಸ್ಥಿತಿಯ ವಿರುದ್ಧ ಭಾರಿ ಪ್ರದರ್ಶನಗಳು ನಡೆದಿದ್ದು, ಹಲವು ದಿನಗಳಿಂದ ಪ್ರತಿದಿನ ಬೇರೆ ಬೇರೆ ರೀತಿಯಲ್ಲಿ ತುರ್ತು ಪರಿಸ್ಥಿತಿ ವಿರೋಧಿ ಚಳುವಳಿ ಬೆಳೆಯುತ್ತಿರುವುದು ಕಂಡು ಬಂದಿದೆ. ವಕೀಲರು, ಪತ್ರಿಕೋದ್ಯಮಿಗಳು ತಮ್ಮ ಕೆಲಸವನ್ನು ಬಹಿಷ್ಕರಿಸಿದ್ದಾರೆ. 12 ಗಂಟೆಗಳ ಬಾಂಗ್ಲಾದೇಶ ಬಂದ್ ಅತ್ಯಂತ ಯಶಸ್ವಿಯಾಗಿದೆ. ತುರ್ತು ಪರಿಸ್ಥಿತಿ ವಿರೋಧಿ ಚಳುವಳಿ ದೇಶವನ್ನು ಎಷ್ಟು ಕಲಕಿದೆಯೆಂದರೆ ರಾಜಧಾನಿ ಢಾಕ್ಕಾ ಸೇರಿದಂತೆ ಆರು ಪ್ರಮುಖ ನಗರಗಳಲ್ಲಿ ಸತತವಾಗಿ ಕರ್ಫ್ಯೂ ಹೇರಲಾಗಿದೆ. 1982 ರಲ್ಲಿ ಜನರಲ್ ಎರ್ಷಾದ್ ಅಧಿಕಾರ ಕಿತ್ತುಕೊಂಡ ಮೇಲೆ ಮೂರನೇ ಬಾರಿಗೆ ಹೇರಿರುವ ಈ ತುರ್ತುಪರಿಸ್ಥಿತಿಯನ್ನು ತೀವ್ರವಾಗಿ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ಈ ದಮನಕಾರಿ ಆಡಳಿತದ ವಿರುದ್ಧ ಬಾಂಗ್ಲಾ ದೇಶದ ಜನತೆಯ ಹೋರಾಟಗಳಿಗೆ ಬೆಂಬಲ ವ್ಯಕ್ತಪಡಿಸಿದೆ.

ಹೊಸ ಸೋವಿಯತ್ ಟ್ರೇಡ್ ಯೂನಿಯನ್ ಕಾನ್ಫಡರೇಷನ್

ಸೋವಿಯತ್ ಒಕ್ಕೂಟದ ಟ್ರೇಡ್ ಯೂನಿಯನ್ ಸಂಘಟನೆಯ ರೂಪದಲ್ಲಿ ಪ್ರಮುಖ ಬದಲಾವಣೆಗಳು ಕಂಡುಬಂದಿವೆ. ಇದು ಸೋವಿಯತ್ ಟ್ರೇಡ್ ಯೂನಿಯನ್‌ಗಳ ಅಖಿಲ ಒಕ್ಕೂಟ ಕೇಂದ್ರೀಯ ಮಂಡಳಿಯ 19 ನೇ ಕಾಂಗ್ರೆಸ್‌ನಲ್ಲಿ ನಿರ್ಧಾರಿತವಾಯಿತು. ಇತ್ತೀಚೆಗೆ ನಡೆದ ಕಾಂಗ್ರೆಸ್‌ನಲ್ಲಿ ಸೋವಿಯತ್ ಒಕ್ಕೂಟದ ಹೊಸ ನೀತಿಗಳ ಆಧಾರದ ಮೇಲೆ ಪುನಃರ್ರಚನೆ ಮತ್ತು ಆರ್ಥಿಕತೆ ಮಾರುಕಟ್ಟೆ ಆಧಾರಿತವಾಗುವ ಸಂಕ್ರಮಣ ಸ್ಥಿತಿಯಲ್ಲಿ ಹಳೆಯ ನೀತಿಗಳ ಮೇಲೆ ಆಧಾರಿತ ಟ್ರೇಡ್ ಯೂನಿಯನ್ ಕಾರ್ಮಿಕರ ಹಿತರಕ್ಷಣೆ ಮಾಡಲಾಗದು ಎಂದು ಅಭಿಪ್ರಾಯ ಪಟ್ಟಿತು. ಆದ್ದರಿಂದ ಹಳೆಯ ಕೇಂದ್ರ ಮಂಡಳಿ ವಿಸರ್ಜಿಸಿ 'ಟ್ರೇಡ್ ಯೂನಿಯನ್‌ಗಳ ಜನರಲ್ ಕಾನ್ಫೆಡರೇಷನ್' ನಿರ್ಮಿಸಲು ಕಾಂಗ್ರೆಸ್ ನಿರ್ಧರಿಸಿತು.

ಸರ್ಕಾರ, ಪ್ರಭುತ್ವ, ಆರ್ಥಿಕ ನಿರ್ವಹಣಾ ಸಂಘಟನೆಗಳು, ರಾಜಕೀಯ ಮತ್ತು ಸಾಮಾಜಿಕ ಸಂಘಟನೆಗಳಿಂದ ಸ್ವಾತಂತ್ರ್ಯ ಈ ಹೊಸ ಕಾನ್ಫೆಡರೇಷನ್‌ನ ಪ್ರಮುಖ ನೀತಿಯಾಗಿರುತ್ತದೆ. 14 ಕೋಟಿ ಕಾರ್ಮಿಕರನ್ನು ಪ್ರತಿನಿಧಿಸುವ 2500 ಪ್ರತಿನಿಧಿಗಳು ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದರು.

ಇತ್ತೀಚಿನ ವರ್ಷಗಳಲ್ಲಿ ಬೆಲೆಯೇರಿಕೆಯಿಂದಾಗಿ, ಸೋವಿಯತ್ ಸಮಾಜದಲ್ಲಿ ಕನಿಷ್ಟ ಜೀವನಾವಶ್ಯಕ ಮಟ್ಟದಲ್ಲಿ ಜೀವನ ಮಾಡುವವರ ಸಂಖ್ಯೆ ಹೆಚ್ಚು ಕಡಿಮೆ ಜನಸಂಖ್ಯೆಯ ಕಾಲು ಭಾಗದಷ್ಟಾಗಿದೆ. ಇಂತಹ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗಾಗಿ ಹೋರಾಡುವುದು ಅತಿ ಪ್ರಮುಖ ಕರ್ತವ್ಯ ಎಂದು ಕಾಂಗ್ರೆಸ್‌ನಲ್ಲಿ ಅಭಿಪ್ರಾಯಪಡಲಾಯಿತು. ಪ್ರತಿಭಾಪಲಾಯನ, ಕಾರ್ಮಿಕರ ವಲಸೆ, ನಿರುದ್ಯೋಗದ ಸಾಧ್ಯತೆ ಮುಂತಾದ ಸಮಸ್ಯೆಗಳ ಬಗ್ಗೆ ಟ್ರೇಡ್ ಯೂನಿಯನ್ ಕಾರ್ಯವಿಧಾನಗಳನ್ನು ಕಾಂಗ್ರೆಸ್ ವಿವರವಾಗಿ ಚರ್ಚಿಸಿತು.

ಹೊಸ ಸಂಘಟನಾ ಸ್ವರೂಪದ ಬಗ್ಗೆ ದೀರ್ಘ ಚರ್ಚೆ ನಡೆದು ಕಾನ್ಫೆಡರೇಷನ್ ಪ್ರತಿ ಗಣತಂತ್ರ, ಕ್ಷೇತ್ರವಾರು, ಟ್ರೇಡ್‌ಯೂನಿಯನ್‌ಗಳ ಸ್ವಯಂಸ್ಫೂರ್ತಿ ಒಕ್ಕೂಟವಾಗಿರಬೇಕೆಂದು ಅಂತಿಮವಾಗಿ ಕಾಂಗ್ರೆಸ್ ನಿರ್ಧರಿಸಿತು. ಸಂಘಟನಾ ಸ್ವರೂಪದಲ್ಲಿ ಬದಲಾವಣೆ ಅಗತ್ಯವಿಲ್ಲವೆಂಬ 'ಸಂಪ್ರದಾಯವಾದೀ' ನಿಲುವನ್ನು ಮತ್ತು ಕೇಂದ್ರೀಯ ಟ್ರೇಡ್‌ಯೂನಿಯನ್ ಅಗತ್ಯವಿಲ್ಲವೆಂಬ ಅತಿವಾದೀ ನಿಲುವನ್ನು ಕಾಂಗ್ರೆಸ್ ತಿರಸ್ಕರಿಸಿತು. ಹಳೆಯ ಟ್ರೇಡ್‌ಯೂನಿಯನ್ ಕೇಂದ್ರದ ಸ್ವತ್ತುಗಳಿಗೆ (ಸೋವಿಯತ್ ಟ್ರೇಡ್‌ಯೂನಿಯನ್‌ಗಳು, ಮನರಂಜನಾ ಕೇಂದ್ರಗಳು, ಹೋಟೆಲ್‌ಗಳು, ಪ್ರಕಟಣೆಗಳು, ಸಾಂಸ್ಕೃತಿಕ ಕ್ರೀಡಾ ಕೇಂದ್ರಗಳು ಮುಂತಾದುದ್ಗಳನ್ನು ಹೊಂದಿದ್ದು ಅದು ನಡೆಸುತ್ತದೆ.) ಕಾನ್ಫೆಡರೇಷನ್ ಉತ್ತರಾಧಿಕಾರಿಯೆಂದು ಕಾಂಗ್ರೆಸ್ ತೀರ್ಮಾನಿಸಿತು.

ಲ್ಯಾಟಿನ್ ಅಮೇರಿಕಾದ ಸಾಲ ಕೂಪ

10 ವರ್ಷ ಸಾಲ ಮರುಪಾವತಿಯ ಬಗ್ಗೆ ಮನ್ನಾ ವಾರ್ಷಿಕ ಶೇಕಡಾ 3 ಬಡ್ಡಿದರ ಹಾಕಿದರೆ ಮಾತ್ರ ಲ್ಯಾಟಿನ್ ಅಮೇರಿಕಾದ ಸಾಲದ ಸಮಸ್ಯೆಗೆ ಪರಿಹಾರ ಸಾಧ್ಯ. ಇಲ್ಲದಿದ್ದರೆ ಲ್ಯಾಟಿನ್ ಅಮೇರಿಕಾದ ದೇಶಗಳು ಸಾಲಕೂಪದಿಂದ ಎಂದೂ ಹೊರಗೆ ಬರಲಾರವು . ಇದು ಲ್ಯಾಟಿನ್ ಅಮೇರಿಕಾದ ಸಾರ್ವಜನಿಕ ಲೆಕ್ಕಪತ್ರ ಅಧಿಕಾರಿಗಳ ಸಮ್ಮೇಳನದ ಶಿಫಾರಸು. ಈ ಸಮ್ಮೇಳನ ಕೆಲವು ಭಯಾನಕ ಅಂಕಿ ಅಂಶಗಳ ಕಡೆ ಗಮನ ಸೆಳೆದಿದೆ.

ಲ್ಯಾಟಿನ್ ಅಮೇರಿಕಾದ ದೇಶಗಳ ಸಾಲ ಮೂರನೆಯ ಜಗತ್ತಿನ ದೇಶಗಳ ಒಟ್ಟು ಸಾಲದ ಶೇ.40 ರಷ್ಟು. ಆದರೆ ಲ್ಯಾಟಿನ್ ಅಮೇರಿಕಾದ ಜನಸಂಖ್ಯೆ ಜಗತ್ತಿನ ಜನಸಂಖ್ಯೆಯ ಶೇ. 10.ಪಾಲು. ಸಾಲದ ಪಾಲು ಈ ದೇಶಗಳ ಒಟ್ಟು ಉತ್ಪನ್ನದ ಅರ್ಧಕ್ಕಿಂತಲೂ ಹೆಚ್ಚು. 1982 ರಿಂದ 1988 ರ ಅವಧಿಯಲ್ಲಿ ಈ ದೇಶಗಳು 250 ಶತಕೋಟಿ ಡಾಲರ್ ಸಾಲ ಮರುಪಾವತಿ ಮಾಡಿದರೆ ಅದೇ ಅವಧಿಯಲ್ಲಿ ಅವುಗಳ ಸಾಲ 100 ಶತಕೋಟಿ ಡಾಲರ್‌ಗಳಷ್ಟು ಏರಿತು.

ಈ ದೇಶಗಳ ಸಂಪನ್ಮೂಲಗಳ ಹಂಚಿಕೆ ಅತ್ಯಂತ ವಿಷಮವಾದದ್ದು. ಶೇ.10 ರಷ್ಟು ಜನ ಶೇ.44 ರಷ್ಟು ಆದಾಯ ಹೊಂದಿದ್ದಾರೆ. ಶೇ.40 ಕ್ಕಿಂತಲೂ ಹೆಚ್ಚು ಜನ ಬಡತನದ ರೇಖೆಯ ಕೆಳಗೆ ಇದ್ದಾರೆ. ಈ ಶೇ.40 ಬಡಜನರು ಆದಾಯದ ಶೇ.8 ನ್ನು ಮಾತ್ರ ಪಡೆಯುತ್ತಾರೆ.

ತೈಲ ಬೆಲೆ ಏರಿಕೆಗೆ ಸದ್ದಾಂ ಹುಸೇನ್ ಹೊಣೆಯೇ?

ಹಾಗೆಂದು ಎಲ್ಲರೂ ಈಗ ಅಂದುಕೊಳ್ಳುತ್ತಿದ್ದಾರೆ. ಆದರೆ ಇದು ನಿಜ. ದೈತ್ಯ ಪೆಟ್ರೋಲಿಯಂ ಕಂಪನಿ ಬ್ರಿಟಿಷ್ ಪೆಟ್ರೋಲಿಯಂನ ಅಧ್ಯಕ್ಷ ಪ್ರತಿ ದಾ.. ಬೆಲೆ ಏರಿಕೆಗೆ ಅವರ ಕಂಪನಿ 20 ಕೆ. ಡಾಲರು ಹೆಚ್ಚುವರಿ ಲಾಭ ಹೊಡೆಯು.. ಎಂದು ಒಪ್ಪಿಕೊಂಡಿದ್ದಾರೆ. ಕೊಲ್ಲಿ ಬಿಕ್ಕಟ್ಟು ಆರಂಭವಾದಾಗ ಬ್ಯಾರಲ್‌ಗೆ 18 ಡಾಲರು ಇದ್ದದ್ದು ಈಗ 30 ರಿಂದ 40 ಡಾಲರುಗಳಷ್ಟಿದೆ.

ತೈಲ ಬೆಲೆ ಏರಿರುವುದು ಪೂರೈಕೆ ಕಡಿಮೆಯಾಗಬಹುದು ಎಂಬ ಭಯದಿಂದ ಜನಿತವಾದ ಭಾರಿ ಕೊಂಡುಕೊಳ್ಳುವಿಕೆ ಎಂದು ಬೂರ್ಜ್ವಾ ತಜ್ಞರ ಅಭಿಪ್ರಾಯ. ಇದನ್ನು ಬ್ರಿಟಿಷ್ ಲೇಬರ್ ಪಾರ್ಟಿ ಅಲ್ಲಗಳೆದಿದೆ. ನಿಜವಾಗಿಯೂ ಇರಾಕ್‌ನ ಮೇಲೆ ದಿಗ್ಬಂಧನದಿಂದ ಆಗುವ ತೈಲ ಪೂರೈಕೆ ಕೊರತೆಯಷ್ಟು ಇತರ ದೇಶಗಳು ಕಂಪನಿಗಳು ಪೂರೈಸುತ್ತಿವೆ. ತೈಲ ಪೂರೈಕೆಯೇನೂ ಕಡಿಮೆಯಾಗಿಲ್ಲ. ಹಾಗಿದ್ದರೆ ಬೆಲೆ ಏರಿಕೆ ಯಾಕೆ? ಕೊಲ್ಲಿ ಬಿಕ್ಕಟ್ಟಿನಿಂದ ಲಾಭ ಪಡೆಯುವ ಬಹು ರಾಷ್ಟ್ರೀಯ ಕಂಪನಿಗಳ ಲಾಭದಾಹದಿಂದಲೇ. ಎಲ್ಲಾ ಸಂಗತಿಗಳು ಈ ಗುಮಾನಿಯನ್ನು ಬಲಪಡಿಸುತ್ತವೆ. ಪಾಶ್ಚಿಮಾತ್ಯ ಸರಕಾರಗಳು ತೈಲ ಬೆಲೆ ಸ್ಥಿರೀಕರಿಸಲು ಯಾವುದೇ ಪ್ರಯತ್ನ ಮಾಡಿಲ್ಲ.

ಕೊಲ್ಲಿ ಬಿಕ್ಕಟ್ಟಿನ ನೆವ ಮಾಡಿ ತೈಲ ಬಹುರಾಷ್ಟ್ರೀಯ ಸಂಸ್ಥೆಗಳು ಲಾಭ ಹೊಡೆಯುತ್ತಿವೆ. ಇದು ಮೂರನೇ ಜಗತ್ತಿನ ದೇಶಗಳಿಂದ ಸಂಪನ್ಮೂಲ ಕಸಿದುಕೊಳ್ಳುವ ಇನ್ನೊಂದು ವಿಧ. ಇಂತಹ ಮಹಾ ಲಾಭದಾಯಕ ಕೊಲ್ಲಿ ಬಿಕ್ಕಟ್ಟನ್ನು ಪರಿಹರಿಸದಿರಲು ಈ ಕಂಪನಿಗಳು ಸ್ವಾಭಾವಿಕವಾಗಿಯೇ ಆಸಕ್ತಿ ಹೊಂದಿರುತ್ತವೆ. ಅಮೇರಿಕಾದ ನೀತಿಗಳನ್ನು ನೋಡಿದರೆ ಬುಷ್‌ನ ತೈಲ ಲಾಬಿ ಅಮೇರಿಕಾದ ನೀತಿಯನ್ನು ನಿರ್ದೇಶಿಸುತ್ತಿದೆ ಎಂಬ ಗುಮಾನಿ ಬಲವಾಗಿದೆ.

ಯೋಗ್ಯಕ್ರಮ ಕೈಗೊಳ್ಳಿ

ವೀರೇಂದ್ರ ಪಾಟೀಲ್ ಮಂತ್ರಿಮಂಡಲವಿದ್ದಾಗ ಬಾಗಲಕೋಟೆ ಬಿಜಾಪುರ ರಾಯಚೂರುಗಳಲ್ಲಿ ಕಳೆದ ಮೂರು ವರ್ಷಗಳಿಂದ ಮುಚ್ಚಲ್ಪಟ್ಟ ಸಹಕಾರಿ ಗಿರಣಿಗಳನ್ನು ಪುನ: ಪ್ರಾರಂಭಿಸುವುದಕ್ಕೆ ಸೂಕ್ತ ಸಲಹೆ ನೀಡಲು ಶಾಂತಕುಮಾರ್ ಅವರ ನೇತೃತ್ವದಲ್ಲಿ ಒಂದು ಕಮಿಟಿ ರಚಿಸಲ್ಪಟ್ಟಿತು.ಆ ಕಮಿಟಿ ಕಾರ್ಮಿಕ ಮುಖಂಡರ ಜೊತೆ ಚರ್ಚಿಸಿ ಸಹಕಾರ ಕೀಳಿ ನವೆಂಬರ್ 1ರಂದು ಮುಚ್ಚಿದ ಗಿರಣಿಗಳನ್ನು ತೆರೆಯಲಾಗುವುದೆಂಬ ಆಶ್ವಾಸನೆ ನೀಡಿತು. ಸರ್ಕಾರ, ಈ ಗಿರಣಿಗಳಿಗಾಗಿ ಟೆಂಡರ್ ಕೂಡ ಕರೆದಿದೆ.ಆದರೆ ಮಂತ್ರಿ ಮಂಡಲ ಬದಲಾವಣೆ ಆಗಿರುವುದರಿಂದ ಮುಚ್ಚಿದ ಗಿರಣಿಗಳನ್ನು ತೆಗೆಯುವ ಕ್ರಮ ಕೈಗೊಳ್ಳಲಿಲ್ಲ.ಈಗಾಗಲೇ ನೂರಾರು ಕೆಲಸಗಾರರು ವೇತನವಿಲ್ಲದೆ ಉಪವಾಸ ಬಿದ್ದಿದ್ದಾರೆ.- ಆದ್ದರಿಂದ ಹೊಸ ಮುಖ್ಯ ಮಂತ್ರಿಯವರಾದ ಶ್ರೀ ಎಸ್. ಬಂಗಾರಪ್ಪನವರು ಮುಚ್ಚಲ್ಪಟ್ಟಿರುವ ಆ ಮೂರು ಗಿರಣಿಗಳನ್ನು ಕೂಡಲೇ ಪ್ರಾರಂಭಿಸಲು ಯೋಗ್ಯ ಕ್ರಮ ಕೈಗೊಳ್ಳಬೇಕೆಂದು ಸಿ.ಐ.ಟಿ.ಯು. ಒತ್ತಾಯಿಸುತ್ತದೆ.

ಬೀಡಿ ಕಾರ್ಮಿಕರ ಸಮಾವೇಶ

ಉಡುಪಿಯ ಬೀಡಿ ಮತ್ತು ಟೊಬೆಕೋ ಕಾರ್ಮಿಕರ ಸಂಘದ ಆಶ್ರಯದಲ್ಲಿ ಬೀಡಿ ಕಾರ್ಮಿಕರ ಸಮಾವೇಶವು ಉಡುಪಿಯ ರಾಜ್ಯ ಸರಕಾರಿ ನೌಕರರ ಸಂಘದ ಸಭಾಭವನದಲ್ಲಿ ಶ್ರೀ ಎಸ್. ಸಾಧು ಅಮೀನರ ಅಧ್ಯಕ್ಷತೆಯಲ್ಲಿ ಜರುಗಿತು.

ತಮ್ಮ ಬೇಡಿಕೆಗಳಾದ ರಾಷ್ಟ್ರೀಯ ಕನಿಷ್ಟ ಕೂಲಿ ಸಾವಿರ ಬೀಡಿಗೆ ರೂ 25 ನಿಗದಿಗೊಳಿಸುವುದು, ವಾರದಲ್ಲಿ 6ದಿನಗಳ ಕೆಲಸ ಮತ್ತು ಕೆಲಸ ನೀಡದ ದಿನದಲ್ಲಿ ಕಾನೂನುಪ್ರಕಾರ ಪರಿಹಾರ, ಶೇಕಡಾ 20 ರಷ್ಟು ಬೋನಸ್ಸು ಮತ್ತು ತುಟ್ಟಿಭತ್ಯೆಯಲ್ಲಿ ಹೆಚ್ಚಳ, ಕಲ್ಯಾಣ ನಿಧಿಯಿಂದ ಪರಿಹಾರ, 58 ವರ್ಷದ ನಂತರ ರೂ 300 ರಂತೆ ವೃದ್ಧಾಪ್ಯ ವೇತನ, ಲೋಗ್ ಪುಸ್ತಕವಿಲ್ಲದ ಬೀಡಿ ಕಾರ್ಮಿಕರಿಗೆ ಲೋಗ್ ಪುಸ್ತಕ ನೀಡುವುದು ಹಾಗೂ ಕಾಂಟ್ರಾಕ್ಟ್ ಪದ್ಧತಿಯ ರದ್ದತಿಯನ್ನು ಜಾರಿಗೆ ತರುವಂತೆ ಮಾಲಿಕರನ್ನು ಮತ್ತು ಸರಕಾರವನ್ನು ಒತ್ತಾಯಿಸಲಾಯಿತು.

ಬೇಡಿಕೆಗಳನ್ನೂ ಪ್ರಚಾರಗೊಳಿಸಿ ಹೋರಾಟವನ್ನು ತೀವ್ರಗೊಳಿಸುವಂತೆ ಸಿಐಟಿಯು ಮುಂದಾಳುಗಳಾದ ಅಬ್ರಹಾಂ ಕರ್ಕಡ, ಕೆ.ಶಂಕರ, ಸಿ.ವಿಶ್ವನಾಥ ರೈ, ದೇವಿದ್, ವಿ.ಕರ್ಕಡ, ಸಂಜೀವ್ ನಾಯಕ್, ಗುರುರಾಜ್ ಸೆಟ್ಟಿಗಾರ್, ಶ್ರೀಮತಿ ಭವಾನಿ ಮೊದಲಾದವರು ಕರೆ ನೀಡಿದರು.

ಕೊಡವೂರಿನಲ್ಲಿ ಸಮಾವೇಶ

ಮಲ್ಪೆ ಪ್ರದೇಶ ಬೀಡಿ ಕೆಲಸಗಾರರ ಸಂಘದ ಬೀಡಿ ಕಾರ್ಮಿಕರ ಸಮಾವೇಶವು ಕೊಡವೂರು ಶಾಲೆಯಲ್ಲಿ ಶ್ರೀ ಕೆ. ಬಾಬುರವರ ಅಧ್ಯಕ್ಷತೆಯಲ್ಲಿ ಜರುಗಿತು.

ಬೀಡಿ ಕಾರ್ಮಿಕರ ಬೇಡಿಕೆಗಳಿಗಾಗಿ ನಡೆಸುವ ಹೋರಾಟದ ಮಹತ್ವವನ್ನು ಪ್ರಚಾರಗೊಳಿಸಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಒಗ್ಗೂಡಿಸಿ ಹೋರಾಟವನ್ನು ಯಶಸ್ವಿಗೊಳಿಸುವಂತೆ ಸಿಐಟಿಯು ಮುಂದಾಳುಗಳಾದ ವಿ. ಮಹಾಬಲ ವಡೇರ ಹೋಬಳಿ, ಎಸ್.ಸಾಧು ಅಮೀನ, ಗುರುರಾಜ್ ಸೆಟ್ಟಿಗಾರ್, ಪಿ. ವಿಶ್ವನಾಥ ರೈ, ಸಂಜೀವ್ ನಾಯಕ್ ಮೊದಲಾದವರು ಕರೆ ನೀಡಿದರು.

ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್ ಕಾರ್ಮಿಕರ ಧರಣಿ ಸತ್ಯಾಗ್ರಹ

ಬಳ್ಳಾರಿ ಸ್ಟೀಲ್ಸ್ ಅಂಡ್ ಅಲಾಯ್ಸ್ ಲಿಮಿಟೆಡ್ ಕಾರ್ಖಾನೆ ಕಾರ್ಮಿಕರು ಮಾಲಿಕರ ಕಾರ್ಮಿಕ ವಿರೋಧಿ ಧೋರಣೆಗಳನ್ನು ಪ್ರತಿಭಟಿಸಿ ನವೆಂಬರ್ 19 ರಿಂದ ಧರಣಿ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ.

ಕಾರ್ಮಿಕರ ಮೂಲಭೂತ ಹಕ್ಕಾದ ಸಂಘಟನಾ ಹಕ್ಕನ್ನು ಮಾಲಿಕ ವರ್ಗ ಮೊಟಕುಗೊಳಿಸುವ ಯತ್ನವನ್ನು ಮಾಡಿ ಸಂಘದ ನೊಂದಣಿಗಾಗಿ ಅರ್ಜಿಗೆ ಸಹಿ ಮಾಡಿದ ಕಾರ್ಮಿಕ ಮುಂದಾಳುಗಳ ಮೇಲೆ ತೀವ್ರ ಮಾನಸಿಕ ಒತ್ತಡ ಹಾಗೂ ಬೆದರಿಕೆ ಒಡ್ಡಿ ಭಯಾನಕ ವಾತಾವರಣದಲ್ಲಿ ಸಂಘಕ್ಕೆ ರಾಜಿನಾಮೆ ಬರೆಯಿಸಿಕೊಂಡಿದ್ದಾರೆ. ಆನಂತರ ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ವೃತ್ತಿ ಸಂಘಗಳ ಉಪನೊಂದಣಾಧಿಕಾರಿಗಳ ಮುಂದೆ ದಾವಣಗೆರೆಯಲ್ಲಿ ಮೇಲಿನ ಸ್ಥಿತಿ ವಿವರಿಸಿ ರಾಜಿನಾಮೆಯನ್ನು ಸ್ವಯಿಚ್ಛೆಯಿಂದ ನೀಡಿಲ್ಲವೆಂದೂ ಹೇಳಿಕೆ ನೀಡಿ ಬಳಿಕ ಸಂಘದ ನೊಂದಣಿ ಪ್ರಮಾಣ ಪತ್ರ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಐದು ಅಂಶಗಳಾದ ಹೆಚ್ಚುವರಿ ಅವಧಿಯ ಕೆಲಸಕ್ಕೆ ಸಾಮಾನ್ಯ ದರದ ಡಬಲ್ ವೇತನ, ಸಂಘದ ಉಪಾಧ್ಯಕ್ಷರಾಗಿರುವ ಶ್ರೀ ಕಾಸನ್ನ ಅವರನ್ನು ಕೆಲಸ ನಿರಾಕರಿಸಿದ ದಿನಗಳ ವೇತನದೊಂದಿಗೆ ಕೆಲಸ ನೀಡಲು ಒತ್ತಾಯ, ಈ ಹಿಂದೆ ಆಗಸ್ಟ್ ತಿಂಗಳಲ್ಲಿ ಆದ ಒಪ್ಪಂದದಂತೆ 17 ಕಾರ್ಮಿಕರನ್ನು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುವುದು, ಫ್ಯಾಕ್ಟರಿ ಕ್ಯಾಂಟೀನ್ ವ್ಯವಸ್ಥೆ ಉತ್ತಮ ಪಡಿಸುವುದು ಹಾಗೂ ಕಾಂಟ್ರಾಕ್ಟ್ ದಿನಗೂಲಿ ಮತ್ತು ಕ್ಯಾಜುವಲ್ ನೌಕರರಿಗೆ ಎಂಪ್ಲಾಯ್‌ಮೆಂಟ್ ಕಾರ್ಡ್ ನೀಡಬೇಕೆಂಬ ಬಗ್ಗೆ ಕೈಗಾರಿಕಾ ವಿವಾದವನ್ನು ಜಿಲ್ಲಾ ಕಾರ್ಮಿಕ ಅಧಿಕಾರಿಗಳ ಮುಂದೆ ಎತ್ತಲಾಗಿದೆ.

ಮೇಲಿನ ಅಂಶಗಳ ಬಗ್ಗೆ ಸೌಹಾರ್ದಯುತವಾಗಿ ಚರ್ಚಿಸಿ ಬಗೆಹರಿಸಲು ಕಾರ್ಮಿಕ ಸಂಘ ಪ್ರಯತ್ನಿಸಿದರೂ ಮಾಲಿಕರ ಹಠಮಾರಿ ಧೋರಣೆಯಿಂದ ಸಾಧ್ಯವಾಗದೆ ಇರುವುದನ್ನು ಖಂಡಿಸಿ ಸಂಘವು ತೀವ್ರ ಹೋರಾಟಕ್ಕೆ ಮುನ್ನಡೆಯುವುದು ಅನಿವಾರ್ಯವಾಗುತ್ತದೆಯೆಂದು ಸಂಘದ ಅಧ್ಯಕ್ಷರಾದ ಎಸ್. ಪ್ರಸನ್ನಕುಮಾರ್ ತಿಳಿಸಿದ್ದಾರೆ.

K R N M/ BGW - 293 MAG (2) PRB DECR 319 - 78/79

ವಿಳಾಸ,

"ಅರ್ಧ ಸಮರ ಆಗಲೇ ಗೆದ್ದಿದ್ದೇವೆ"

ಎಸ್.ಆರ್.ಬೊಮ್ಮಾಯಿ, ಶರದ್‌ಯಾದವ್, ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯ ಹರ್‌ಕಿಷನ್ ಸಿಂಗ್ ಸುರ್ಜಿತ್ ಮೊದಲಾದವರು ಮಾತನಾಡಿದರು.

ಮಾಜಿ ಪ್ರಧಾನಿ ವಿ.ಪಿ.ಸಿಂಗ್, ತಂಡದ ಮೇಲೆ ಹಲ್ಲೆ ನಡೆದಾಗ ಭೂಪಾಲ್ ರೈಲ್ವೆ ನಿಲ್ದಾಣದಲ್ಲಿ ಮಧ್ಯಪ್ರದೇಶದ ಇಬ್ಬರು ಸಚಿವರು ಮತ್ತು ಕೆಲವರು ಸಂಸತ್ ಸದಸ್ಯರು ಹಾಜರಿದ್ದುದು ಕೇವಲ ಕಾಕತಾಳೀಯ ಎಂದು ತಳ್ಳಿ ಹಾಕಲು ಆಗುವುದೇ? ಅಲ್ಲದೆ 'ಅಯೋಧ್ಯೆಯಲ್ಲಿ ಕರಸೇವೆಗೆ ಹೋದವರನ್ನು ಗುಂಡಿಕ್ಕಿ ಕೊಂದು ನದಿಗೆ ಎಸೆದುದಕ್ಕೆ ಪ್ರತಿಕ್ರಿಯೆಯಾಗಿ ಭೂಪಾಲ್‌ನ ವಿಎಚ್‌ಪಿ ಮತ್ತು ಬಿಜೆಪಿ ಕಾರ್ಯಕರ್ತರು ವಿ.ಪಿ.ಸಿಂಗ್ ಮೇಲೆ ಹಲ್ಲೆ ನಡೆಸಿದ್ದಾರೆ' ಎಂದು ಮುಖ್ಯಮಂತ್ರಿ ಪಟ್ವಾ ಹೇಳಿರುವುದರಿಂದ ಇದೊಂದು ಬಿಜೆಪಿ ಮುಖಂಡರ ನೇತೃತ್ವದಲ್ಲಿ ಪೂರ್ವಯೋಜಿತ ದುಷ್ಕೃತ್ಯ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ.

1984 ರಲ್ಲಿ ಇಂದಿರಾಗಾಂಧಿಯವರ ಹತ್ಯೆಯ ನಂತರ ದೆಹಲಿಯಲ್ಲಿ ನಡೆದ ಅಮಾನುಷ ಸಿಖ್--ವಿರೋಧಿ ಹತ್ಯಾಕಾಂಡವನ್ನು 'ದೊಡ್ಡ ಮರ ಬಿದ್ದಾಗ ಆಗುವ ಸಹಜ ಕಲ್ಲೋಲ' ಎಂದಿದ್ದರು ರಾಜೀವ್ ಗಾಂಧಿ. ಪಟ್ವಾರವರ ಹೇಳಿಕೆ ಅದಕ್ಕೆ ಬಹಳ ಸಮೀಪವಿದೆಯಲ್ಲವೆ?

ಎಡಪಕ್ಷಗಳು ಜನತಾದಳದ ಆಂದೋಲನ ಆರಂಭ

ಡಿಸೆಂಬರ್ ಎರಡರಂದು ಭೂಪಾಲ್‌ನಲ್ಲಿ ವಿ.ಪಿ.ಸಿಂಗ್ ತಂಡದ ಮೇಲೆ ನಡೆದ ಹಲ್ಲೆಯನ್ನು ಒಂದು ಪ್ರತ್ಯೇಕ ಘಟನೆಯಾಗಿ ಕಾಣಲು ಸಾಧ್ಯವಿಲ್ಲ. ದೇಶದ ಪ್ರಸಕ್ತ ರಾಜಕೀಯ ಆಗುಹೋಗುಗಳಿಗೂ ಇದಕ್ಕೂ ಸಂಬಂಧವಿದೆ.

ಈಗಾಗಲೇ ಹೇಳಿರುವಂತೆ ಒಂದು ಉನ್ನತ ಧ್ಯೇಯಕ್ಕಾಗಿ ಸರಕಾರವನ್ನು ತ್ಯಾಗಮಾಡಿರುವ ರಾಷ್ಟ್ರೀಯ ರಂಗ, ಇದಕ್ಕೆ ಕಾರಣವಾದ ಬೆಳವಣಿಗೆಗಳ ಬಗ್ಗೆ ವಿವರಿಸಿ ಕೋಮು ಶಕ್ತಿಗಳು ಹಾಗೂ ಸಮಯಸಾಧಕರ ಬಣ್ಣ ಬಯಲು ಮಾಡಲಿಕ್ಕಾಗಿ ರಾಷ್ಟ್ರವ್ಯಾಪಿ ಆಂದೋಳನವನ್ನು ಆರಂಭಿಸಿದೆ. ಇದಕ್ಕೆ ಅದು ಎಡ ಪಕ್ಷಗಳ ಸಹಕಾರವನ್ನು ಪಡೆಯುತ್ತಿದೆ. ಎಡ ಪಕ್ಷಗಳು ಹಾಗೂ ಜನತಾದಳದ ಸಂಯೋಜಕ ಸಮಿತಿಯೊಂದು ಅಖಿಲ ಭಾರತ ಮಟ್ಟದಲ್ಲಿ ಈಗಾಗಲೇ ರಚನೆಗೊಂಡಿದೆ. ಜನತಾದಳದಿಂದ ನಾಲ್ಕು, ಸಿಪಿಐ(ಎಂ), ಸಿಪಿಐ, ಗಳಿಂದ ತಲಾ ಎರಡು ಆರ್‌ಎಸ್‌ಪಿ, ಫಾರ್ವರ್ಡ್ ಬ್ಲಾಕ್‌ನ ಒಬ್ಬೊಬ್ಬ ಪ್ರತಿನಿಧಿಗಳು ಈ ಸಂಯೋಜಕ ಸಮಿತಿಯಲ್ಲಿದ್ದಾರೆ.

ಬಿಹಾರದಲ್ಲಿ ಈ ರಾಷ್ಟ್ರವ್ಯಾಪಿ ಆಂದೋಳನದ ಮೊದಲ ಹೆಜ್ಜೆ ಇರಿಸಲಾಯಿತು. ನವೆಂಬರ್ 24 ರಂದು ರಾಜ್ಯದ ಹಲವೆಡೆ ನಡೆದ ಬಹಿರಂಗ ಸಭೆಗಳಲ್ಲಿ ಸಾವಿರಾರು ಜನರು ಉತ್ಸಾಹದಿಂದ ಪಾಲುಗೊಂಡಿದ್ದಾರೆ. ವಿ.ಪಿ.ಸಿಂಗ್ ಮತ್ತು ರಾಷ್ಟ್ರೀಯ ರಂಗದ ಇತರ ಮುಖಂಡರಲ್ಲದೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸು, ಪಾಲಿಟ್ ಬ್ಯುರೋ ಸದಸ್ಯ ಹರ್‌ಕಿಷನ್ ಸಿಂಗ್ ಸುರ್ಜಿತ್ ಹಾಗೂ ಇತರ ಮುಖಂಡರು ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ ನಾಯಕರು ಕೂಡ ಭಾಗವಹಿಸುತ್ತಿದ್ದಾರೆ.

ನವೆಂಬರ್ 25 ರಂದು ಸಹರ್ಸಾದಲ್ಲಿ ವಿ.ಪಿ.ಸಿಂಗ್ ಭಾಗವಹಿದ ಸಭೆ ಮುಗಿದ ಸ್ವಲ್ಪವೇ ಹೊತ್ತಿನಲ್ಲಿ ವೇದಿಕೆಯ ಬಳಿ ಬಾಂಬೊಂದು ಸ್ಫೋಟಿಸಿತು. ಇದು ಮತ್ತು ಹಲವು ಇಂಥ ಘಟನೆಗಳು ಎಡ ಮತ್ತು ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯತೆ ಬಲಗೊಳ್ಳುತ್ತಿರುವುದರಿಂದ ವಿರೋಧಿ ಶಕ್ತಿಗಳು ಮುಖ್ಯವಾಗಿ ಮತೀಯವಾದಿಗಳು ಹತಾಶೆಗೊಂಡು ಮೈ ಪರಚಿಕೊಳ್ಳುತ್ತಿರುವ ಸೂಚನೆಯಾಗಿದೆ.

ಯಾವ ಒಂದು ಶಕ್ತಿಯ ನಿರಂತರ ಪ್ರಯತ್ನದಿಂದಾಗಿ ಅಯೋಧ್ಯೆ ವಿವಾದ, ಕೋಮುವಾದ ರಥಯಾತ್ರೆ ಮೊದಲಾದ ವಿಚಾರಗಳ ಬಗ್ಗೆ ರಾಷ್ಟ್ರೀಯ ರಂಗ ಸರಕಾರ ದೃಢ ನಿಲುವು ತಳೆಯಲು ಸಾಧ್ಯವಾಯಿತೋ ಅಂಥ ಎಡ ಪಕ್ಷಗಳೊಂದಿಗಿನ ಮೈತ್ರಿಯನ್ನು ರಂಗ ಇನ್ನಷ್ಟು ಬಲಪಡಿಸಿಕೊಳ್ಳಲು ಹೊರಟಿರುವುದರಿಂದ ವಿಎಚ್‌ಪಿ, ಬಿಜೆಪಿಗಳಂಥವರ ಕಣ್ಣು ಕೆಂಪಾಗಿರುವುದರಲ್ಲಿಅನುಮಾನವಿಲ್ಲ.

ಎಡ ಪಕ್ಷಗಳು ಹಾಗೂ ಜನತಾದಳದ ಜಂಟಿ ಆಂದೋಲನ ಆರಂಭಿಸಲು ಜನತಾದಳ ಹಾಗೂ ಎಡಪಕ್ಷಗಳ ಮುಖಂಡರು ಪಾಟ್ನಾ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗಲೇ ಈ ಪಕ್ಷಗಳು ಯಾವ ನೀತಿಗಾಗಿ ಹೋರಾಡುತ್ತಿದ್ದಾವೆಯೋ ಆ ನೀತಿಗೆ ಜನರ ಬೆಂಬಲ ಸ್ಪಷ್ಟವಾಗಿ ಕಾಣುತ್ತಿತ್ತು. ಬಿಹಾರದಲ್ಲಿ ನಡೆದ ಆರು ಸಾರ್ವಜನಿಕ ಸಭೆಗಳಲ್ಲೂ ಈ ಅಮಿತೋತ್ಸಾಹ ತುಂಬಿತುಳುಕುತ್ತಿತ್ತು. ಪೂರ್ಣಿಮಾ, ಕಿಶನ್‌ಗಂಜ್, ಸಹರ್ಸಾ, ಸೀತಾಮರ್ಹಿ, ಮುಂಘೇರ್ ಹಾಗೂ ಸಾಸಾರಾಂನಲ್ಲಿ ನಡೆದ ಪ್ರತಿಯೊಂದು ಸಭೆಯಲ್ಲೂ ಕಾಂಗ್ರೆಯನ್ನು ಕಿತ್ತೆಸೆದ ಹಿಂದಿನ ಐತಿಹಾಸಿಕ ಚುನಾವಣೆಗಳಲ್ಲಿ ಸೇರಿದ ಜನರಿಗಿಂತ ಎಷ್ಟೋ ಪಾಲು ಹೆಚ್ಚು ಜನ ಸೇರಿದ್ದರು. ಮೊದಲ ಬಾರಿಗೆ ಕೇಂದ್ರದಲ್ಲಿ ಕಿತ್ತೆಸೆಯಲು ದಾರಿ ಮಾಡಿಕೊಟ್ಟಿದ್ದ 1974ರ ಜೆ.ಪಿ. ಆಂದೋಲನ ನೆನಪಿಗೆ ಬರುವಂತಿತ್ತು ಎಂದು ಹಲವರು ಅಭಿಪ್ರಾಯ ಪಟ್ಟಿದ್ದಾರೆ. ಪತ್ರಿಕಾರಂಗದ ಒಂದು ವಿಭಾಗ ಹಾಗೂ ಸರಕಾರದ ಇಲೆಕ್ಟ್ರಾನಿಕ್ ಮಾಧ್ಯಮ ಈ ಜನೋತ್ಸಾಹವನ್ನು ಮರೆಮಾಡಲು ಯತ್ನಿಸಿದರೂ ಈ ಸಭೆಗಳ ಸಂದೇಶ ಜನರನ್ನು ತಲುಪದಂತೆ ತಡೆಯುವುದು ಅವರಿಗಾಗಲಿಲ್ಲ. ಎಲ್ಲೆಲ್ಲೂ ಕೆಂಪು, ಹಸಿರು ಬಾವುಟಗಳು, ಜನಸಂದಣಿ ಸಭೆಗಳನ್ನು ಸಂಘಟಿಸಿದವರ ನಿರೀಕ್ಷೆಗಳನ್ನೆಲ್ಲಾ ಮೀರಿಸಿತ್ತು ಎಂದು ಸ್ಟೇಟ್ಸ್‌ಮನ್ ಮತ್ತು ಟೈಂಸ್ ಆಫ್ ಇಂಡಿಯಾದ ಪಾಟ್ನಾ ವರದಿಗಾರರು ತಿಳಿಸಲೇ ಬೇಕಾಗಿ ಬಂತು.

ಆದ್ದರಿಂದಲೇ ಸಹರ್ಸಾ ಸಭೆಯಲ್ಲಿ ಮಾತನಾಡುತ್ತಾ ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್ ಉದ್ಗರಿಸಿದರು--"ಅರ್ಧ ಸಮರ ಈಗಾಗಲೇ ಗೆದ್ದಿದ್ದೇವೆ". ಸಹರ್ಸಾದ ಪಟೇಲ್ ಮೈದಾನದ ಈ ಸಭೆಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡಿದರೆ ರಾಷ್ಟ್ರೀಯ ರಂಗ ಸರಕಾರವನ್ನು ಉರುಳುಸಿದವರು ಪಶ್ಚಾತ್ತಾಪ ಪಡುತ್ತಿದ್ದರು ಎಂದು ಸುರ್ಜಿತ್ ವ್ಯಂಗ್ಯವಾಡಿದರು.

ಸಾಮಾಜಿಕ ನ್ಯಾಯ ಹಾಗೂ ದೇಶದ ಐಕ್ಯತೆಯ ಪ್ರಶ್ನೆಯ ಮೇಲೆ ರಾಜಕೀಯ ಶಕ್ತಿಗಳ ಧ್ರುವೀಕರಣ ಆರಂಭವಾಗಿದೆ, ಹಿಂದಿನ ಚುನಾವಣೆ ಸೆಮಿಫೈನಲ್ ಆಗಿದ್ದರೆ, ಮುಂದಿನದು ಫೈನಲ್ ಎಂದರು ವಿ.ಪಿ.ಸಿಂಗ್ ಪೂರ್ಣಿಮಾದಲ್ಲಿ ನಡೆದ ಮೊದಲ ಸಭೆಯಲ್ಲಿ.

ಇದೇ ಸಭೆಯಲ್ಲಿ ಮಾತನಾಡುತ್ತಾ ಜ್ಯೋತಿ ಬಸುರವರು ರಾಮಜನ್ಮ ಭೂಮಿ, ಮಂಡಲ್ ವರದಿ ಗಲಾಟೆಗಳಲ್ಲಿ ರಾಷ್ಟ್ರೀಯ ರಂಗ ಸರಕಾರ ಮಾಡಿದ ಒಳ್ಳೆಯ ಕೆಲಸಗಳು ಹಿನ್ನೆಲೆಗೆ ಸರಿಯುವಂತಾಯಿತು ಎಂದರು. ಮೊತ್ತಮೊದಲ ಬಾರಿಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಗಳು ಸರಿಯಾದ ವಾತಾವರಣದಲ್ಲಿ ನಡೆದು ಅಪಾರ ವಿಚಾರ-ವಿನಿಮಯ ನಡೆಯಿತು; ಪ್ರಜಾಪ್ರಭುತ್ವ ಸಂಸ್ಥೆಗಳಿಗೆ ಹಿಂದಿನ ಸರಕಾರ ಮಾಡಿದ್ದ ಹಾದಿಯನ್ನು ಸರಿಪಡಿಸಲಾಯಿತು ಎಂದರು ಜ್ಯೋತಿ ಬಸು. ಕೇಂದ್ರ--ರಾಜ್ಯ ಸಂಬಂಧಗಳಿಗೆ 'ನೈಜ ಅರ್ಥ' ನೀಡಲಾಯಿತು ಎಂದು ಅಭಿಪ್ರಾಯ ಪಟ್ಟರು. ಅದೇ ವೇಳೆಗೆ ಎಡಪಕ್ಷಗಳು ರಾಷ್ಟ್ರೀಯ ರಂಗ ಸರಕಾರದ ಬಜೆಟ್ ಹಾಗೂ ಜೀವನಾವಶ್ಯಕ ಸಾಮಗ್ರಿಗಳ ಬೆಲೆಯೇರಿಕೆ ತಡೆಯುವಲ್ಲಿ ಅದರ ವಿಫಲತೆಯನ್ನು ಟೀಕಿಸಿದುದನ್ನು ನೆನಪಿಸಿದರು.

ಬಿಹಾರದಲ್ಲಿ ಈ ಸಾಮೂಹಿಕ ಆಂದೋಲನದ ಇನ್ನೊಂದು ಮಹತ್ವಪೂರ್ಣ ಅಂಶವೆಂದರೆ ಎಲ್ಲಾ ಕಡೆಗಳಲ್ಲಿ ಸಭೆಗಳಲ್ಲಿ ಬಹುಪಾಲು 15ರಿಂದ 40 ವರ್ಷದೊಳಗಿನ ಯುವಜನ. ಮಂಡಲ್ ವರದಿ--ವಿರೋಧಿ ಚಳುವಳಿಗಳಲ್ಲೂ, ರಾಮಜನ್ಮ ಭೂಮಿ ಚಳುವಳಿಯಲ್ಲೂ ಯುವಜನ ಭಾಗವಹಿಸುವಿಕೆ ಕಂಡು ದೇಶದ ಭವಿಷ್ಯದ ಬಗ್ಗೆ ಆತಂಕಿತರಾದವರಿಗೆ ಸಮಾಧಾನ ತರುವ, ಮತ್ತು ಆಸೆ ಚಿಗುರಿಸುವ ಸಂಗತಿಯಿಂದು ಈಗಲೂ ನಮ್ಮ ಜನರಲ್ಲಿ ದೇಶಪ್ರೇಮಿಗಳಿಗೆ ಬರವಿಲ್ಲ ಅವರ ದೇಶಪ್ರೇಮವನ್ನು ಜಾಗೃತಗೊಳಿಸಲು, ಅವರಲ್ಲಿ ವಿಶ್ವಾಸ ಮೂಡಿಸಲು ರಾಜಕೀಯ ಪ್ರಯತ್ನ ನಡೆಸಬೇಕಷ್ಟೇ ಎಂದು ಸಿಪಿಐ(ಎಂ) ಮುಖಂಡರು ಪದೇ ಪದೇ ಹೇಳುತ್ತಿರುವುದು ಎಷ್ಟು ನಿಜ ಎಂದು ತೋರಿಸಿಕೊಡುವ ಸಂಗತಿಯಿದು.

ಮಹಾರಾಷ್ಟ್ರದಲ್ಲಿ: ರಾಷ್ಟ್ರೀಯ ರಂಗದ ಆಂದೋಲನದ ಅಂಗವಾಗಿ ಮಹಾರಾಷ್ಟ್ರದಲ್ಲಿ ಸಭೆಗಳು ನಡೆದಿದ್ದು ಅಲ್ಲಿಯೂ ಉತ್ಸಾಹದ ಪ್ರತಿಕ್ರಿಯೆ ಕಂಡುಬಂದಿದೆ. ವಿ.ಪಿ.ಸಂಗ್ ಅನೇಕ ಸಭೆಗಳಲ್ಲಿ ಮಾತನಾಡಿದರು.

ಈ ಆಂದೋಲನದ ಅಂಗವಾಗಿ ವಿ.ಪಿ.ಸಿಂಗ್ ಈ ತಿಂಗಳು ಕರ್ನಾಟಕಕ್ಕೆ ಭೇಟಿ ಕೊಡುವ ಕಾರ್ಯಕ್ರಮವಿದೆ.

ಮಾನವ ಸರಪಳಿ ಆಶಯಕ್ಕೆ ಪ್ರೇಕ್ಷಕರು ಕೊಂಡಿಯಾಗಿ ಬದಲಾದರು

ಕರ್ನಾಟಕದ ಹಲವು ಜಿಲ್ಲೆಗಳಿಗೆ ನೂತನ ರೀತಿಯ ಅನುಭವ. ಹೊಸ ಆಶಾಕಿರಣವೊಂದರ ಉದಯ. ಪ್ರಪ್ರಥಮ ಬಾರಿಗೆ ಜನರ ಪರವಾಗಿ ಸಾಲು ಗಟ್ಟಿನಿಂತ ಜನ. ಎಲ್ಲಾ ಧರ್ಮದವರನ್ನು ಬೆಸೆಯಲು ರಚಿತವಾದದ್ದು. ಸಾವಿರಾರು ಜನರ ಸರಪಳಿ. ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆದ ಮಾನವ ಸರಪಳಿಯತ್ತ ಒಂದು ಕಣ್ನೋಟ....................

ಬೀದರ್ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ನೀಡಿದ್ದ ಕರೆಯ ಮೇರೆಗೆ ಮಾನವ ಸರಪಳಿಯನ್ನು ಹಮ್ಮಿಕೊಳ್ಳಲಾಗಿತ್ತು. ಡಾ.ಅಂಬೇಡ್ಕರ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಮಾನವ ಸರಪಳಿಯನ್ನು ಹಮ್ಮಿಕೊಳ್ಳಲಾಗಿತ್ತು. ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.

ಬಳ್ಳಾರಿ ಸಿಪಿಐ(ಎಂ), ಸಿಪಿಐ, ಜನತಾದಳ ನೇತೃತ್ವದಲ್ಲಿ ಸಾವಿರಾರು ಮಂದಿ ಮಾನವ ಸರಪಳಿ ರಚಿಸಿದರು. ಜಿಲ್ಲಾ ಪರಿಷತ್ ಅಧ್ಯಕ್ಷ ಭಾವಿ ಬೆಟ್ಟಪ್ಪ, ಶಾಸಕ ತಿಪ್ಪಣ್ಣ ಅವರೂ ಸರಪಳಿಯಲ್ಲಿ ಕೈಗೂಡಿಸಿದರು.

ಕಲ್ಬುರ್ಗಿ ಸಾವಿರಾರು ಜನರು ಸೇರಿದ್ದ ಮಾನವ ಸರಪಳಿಯಲ್ಲಿ ಕೋಮು ಸೌಹಾರ್ದತೆಯನ್ನು ಕಾಪಾಡುವ, ಕೋಮು ಶಕ್ತಿಗಳನ್ನು ಹಿಮ್ಮೆಟ್ಟಿಸುವ ಪ್ರತಿಜ್ಞೆ ಸ್ವೀಕರಿಸಲಾಯಿತು.

ಸಿಐಟಿಯು, ಕರ್ನಾಟಕ ಪ್ರಾಂತ ರೈತ ಸಂಘ, ಎಸ್‌ಎಫ್‌ಐ, ಡಿವೈಎಫ್‌ಐ, ಜನವಾದಿ ಮಹಿಳಾ ಸಂಘಟನೆ, ಎಂಎಸ್‌ಕೆ ಮಿಲ್ ಕಾರ್ಮಿಕರ ಸಂಘ, ಸರ್ಕಾರಿ ನೌಕರರ ಸಂಘ, ಕೆಎಸ್‌ಆರ್‌ಟಿಸಿ ನೌಕರರ ಸಂಘಗಳು ಮಾನವ ಸರಪಳಿಯಲ್ಲಿ ಭಾಗವಹಿಸಿದ್ದವು. ಜನತಾದಳ ಮಾನವ ಸರಪಳಿಗೆ ಬೆಂಬಲ ನೀಡಿ ಭಾಗವಹಿಸಿತ್ತು.

ಮೈಸೂರು ಮೈಸೂರಿನ ಇತಿಹಾಸದಲ್ಲಿ ಮೊದಲ ಬಾರಿಗೆ ಜಾತಿವಾದಿ ಶಕ್ತಿಗಳ ವಿರುದ್ಧ ಗುರುವಾರ ಸಂಜೆ ಎಲ್ಲಾ ಪ್ರಜ್ಞಾವಂತರು ಸೇರಿ ಮಾನವ ಸರಪಳಿ ನಿರ್ಮಿಸಿ ಮೈಸೂರಿನ ಜನತೆಗೆ ಹೊಸ ಅನುಭವ ನೀಡಿದರು.

ಮುಷ್ಕರ, ಧಿಕ್ಕಾರದ ಘೋಷಣೆಗಳನ್ನು ಕೇಳಿದ್ದ ಜನರಿಗೆ ಈ ಮಾನವ ಸರಪಳಿ ಕಾರ್ಯಕ್ರಮ ಸೋಜಿಗವನ್ನು ತಂದಿತು. ಮೈಸೂರಿನ ಕೆ.ಆರ್.ವೃತ್ತದಿಂದ ಆರಂಭವಾದ ಮಾನವ ಸರಪಳಿಯು ಚಾಮರಾಜೇಂದ್ರ ವೃತ್ತದ ಮೂಲಕ ಅಶೋಕ ರಸ್ತೆಯ ಲಷ್ಕರ್ ಪೋಲೀಸ್ ಠಾಣೆಯವರೆಗೂ ಬೆಳೆಯಿತು. ಮಾನವ ಸರಪಳಿಯ ಉದ್ದೇಶ ತಿಳಿದ ಜನ ಪ್ರೇಕ್ಷಕರಾಗಿದ್ದವರು ಕೊಂಡಿಯಾಗಿ ಸೇರಿದರೂ.

ಈ ಮಾನವ ಸರಪಳಿಯಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಮಾಜಿ ಶಾಸಕರು, ಹಾಲಿ ವಿಧಾನ ಪರಿಷತ್ ಸದಸ್ಯರು, ಹಿರಿಯ ರಾಜಕಾರಣಿಗಳು, ವೃದ್ಧರು, ಮಹಿಳೆಯರು, ವಿದ್ಯಾರ್ಥಿಗಳು, ವಿಚಾರವಂತರು, ಕಾರ್ಮಿಕರು, ಯಾವುದೇ ಭೇದಭಾವವಿಲ್ಲದೆ ಪಾಲ್ಗೊಂಡಿದ್ದರು.

ರಸ್ತೆಯ ಮಧ್ಯದಲ್ಲಿ ನಿರ್ಮಾಣಗೊಂಡ ಈ ಮಾನವ ಸರಪಳಿ ಜನರಲ್ಲಿ ವಿಶ್ವಾಸ ಮೂಡಿಸುವಲ್ಲಿ ಪರಿಣಾಮಕಾರಿ ಮಾಧ್ಯಮ ಎಂಬುದನ್ನು ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದವರು ಅಭಿಪ್ರಾಯ ಪಟ್ಟರು.

ಸುಮಾರು ಒಂದು ಗಂಟೆ ಕಾಲ ಅಸ್ತಿತ್ವದಲ್ಲಿದ್ದ ಮಾನವ ಸರಪಳಿಗೆ ಕೊಂಡಿಯಾದವರು ರಾಷ್ಟ್ರೀಯ ಭಾವೈಕ್ಯ ಪರ ಘೋಷಣೆಗಳನ್ನು ಕೂಗಿದರು.

(ಪ್ರಜಾವಾಣಿ, ಕನ್ನಡ ಪ್ರಭ

ಮುರಿಯದ ಸರಪಳಿ

ಪುಟ 1ರಿಂದ

ಸಿಪಿಐ(ಎಂ) ನೀಡಿದ ಕರೆಗೆ ಡಿವೈಎಫ್‌ಐ, ಎಸ್‌ಎಫ್‌ಐ, ಎಐವೈಎಫ್,ಸಮುದಾಯ, ದಲಿತ ಸಂಘರ್ಷ ಸಮಿತಿ, ಜನತಾದಳ, ಸಿಪಿಐ, ಯುವ ಜನತಾದಳ, ಮುಂತಾದ ಸಂಘಟನೆಗಳು ಅಪಾರ ಬೆಂಬಲ ನೀಡಿತ್ತು.

ಧರ್ಮವನ್ನು ರಾಜಕೀಯದಲ್ಲಿ ಬೆರೆಸಿದರೆ ದೇಶವು ಛಿದ್ರ ಛಿದ್ರವಾಗುತ್ತದೆ. ವಿಶ್ವ ಹಿಂದೂ ಪರಿಷತ್ ದೇಶವನ್ನು ನುಚ್ಚುನೂರು ಮಾಡುತ್ತಿದೆ.ಈ ಮಂದಿಯ ವಿರುದ್ಧ ತತ್ವಾಧಾರಿತ ಹೋರಾಟ ಅವಶ್ಯಕ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಪಿ.ರಾಮಚಂದ್ರರಾವ್ ಕರೆ ನೀಡಿದರು.

ಬಿ.ವಿ.ಕಕ್ಕಿಲ್ಲಾಯ, ಡಾ:ಅಮ್ಮೆಂಬಳ ಬಾಳಪ್ಪ, ಡಿವೈಎಫ್‌ಐ ನ ಜಯಕುಮಾರ್ ಅವರೂ ಮಾತನಾಡಿದರು.ಸಾಹಿತಿ ಫಕೀರ್ ಮಹಮದ್‌ಕಟ್ಪಾಡಿ ಅಧ್ಯಕ್ಷತೆ ವಹಿಸಿದ್ದರು. ವಾಸುದೇವ ಉಚ್ಚಿಲ್ ಸ್ವಾಗತಿಸಿದರು.

"ಪ್ರಜಾಪ್ರಭುತ್ವ--ವಿರೋಧಿ ಅಮಾನವೀಯ ಹಲ್ಲೆ"

ಸಿಪಿಐ(ಎಂ) ರಾಜ್ಯ ಸಮಿತಿ ಖಂಡನೆ

ಭೂಪಾಲ್‌ನ ಪ್ರವಾಸಕ್ಕೆಂದು ತಮಿಳುನಾಡು ಎಕ್ಸ್‌ಪ್ರೆಸ್‌ನಲ್ಲಿ ಬಂದು ಇಳಿದ ಮಾಜಿ ಪ್ರಧಾನ ಮಂತ್ರಿ ಶ್ರೀ ವಿ.ಪಿ.ಸಿಂಗ್ ಮತ್ತು ಜನತಾ ದಳದ ಅಧ್ಯಕ್ಷ ಶ್ರೀ ಎಸ್.ಆರ್.ಬೊಮ್ಮಾಯಿಯವರ ಮೇಲೆ ವಿಶ್ವ ಹಿಂದೂ ಪರಿಷತ್ ಮತ್ತು ಬಿಜೆಪಿ ಕಾರ್ಯಕರ್ತರು ಅಮಾನುಷ ಹಲ್ಲೆ ನಡೆಸಿದ್ದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸೆಕ್ರಟಾರಿಯೆಟ್ ಖಂಡಿಸಿದೆ. ಇದು ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೂ ಆಘಾತ ತಂದಿದೆ. ಸಮಾರಂಭಕ್ಕೆಂದು ಸಜ್ಜುಗೊಳಿಸಲಾದ ವೇದಿಕೆಗೆ ಬೆಂಕಿ ಹಾಕಿದ್ದಲ್ಲದೆ ಆಸಿಡ್ ಬಲ್ಬ್‌ಗಳನ್ನು ತೂರಿದ್ದಾರೆ. ಅಲ್ಲಿ ಸೇರಿದ್ದ ಸ್ಥಳೀಯ ಪೋಲೀಸರು ಸರಕಾರದ ಅಜ್ಞೆಯಂತೆ ಮೂಕ ಪ್ರೇಕ್ಷಕರಾಗಿ ನಿಂತಿದ್ದರೆಂಬುದು ಖಂಡನಾರ್ಹ ಎಂದಿರುವ ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯಟ್ ಸದಸ್ಯ ಕಾಂ. ಸೂರ್ಯನಾರಾಯಣ ರಾವ್ ಇದು ಅಮಾನವೀಯ ಹಾಗೂ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆ ಎಂದು ಬಣ್ಣಿಸಿದ್ದಾರೆ. ಎಲ್ಲಾ ಜಾತ್ಯಾತೀತ ಪ್ರಜಾಪ್ರಭುತ್ವವಾದಿಗಳೂ ಸಂಘಟಿತರಾಗಿ ಈ ಜಾತೀಯ ಮೂಲಭೂತವಾದಿ ಶಕ್ತಿಗಳನ್ನು ಎದುರಿಸಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಮುಂದಾಗಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿದೆ.

ಈ ವಾರ...

* ಭೂಪಾಲ್‌ನಲ್ಲಿ ಹಿಂದಿನ ಪ್ರಧಾನಮಂತ್ರಿ ವಿ.ಪಿ.ಸಿಂಗ್ ಹಾಗೂ ಜನತಾದಳದ ಇತರ ರಾಷ್ಟ್ರೀಯ ಧುರೀಣರ ಮೇಲೆ ಮೊನ್ನೆ ನಡೆದ ಹಲ್ಲೆ ಅತ್ಯಂತ ಹೇಯ ಹಾಗೂ ಖಂಡನೀಯ. ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಬೆಳೆಯುತ್ತಿವೆಯೆಂಬ ಆಪಾದನೆಯನ್ನು ಈ ಘಟನೆ ಪುಷ್ಟೀಕರಿಸಿದೆ. ......ಜನತಾದಳದ ಅನೇಕ ಕಾರ್ಯಕರ್ತರು ಹಾಗೂ ಹಲವಾರು ಪೊಲೀಸರು ಕಲ್ಲು ಬಡಿದು ಗಾಯಗೊಂಡಿದ್ದಾರೆ. ಇಷ್ಟೆಲ್ಲ ನಡೆದಾಗ ಪೊಲೀಸರು ನಿಷ್ಕ್ರಿಯರಾಗಿದ್ದುದನ್ನು ನೋಡಿದರೆ ಈ ಪುಂಡಾಟಿಕೆಗೆ ರಾಜ್ಯದಲ್ಲಿಯ ಭಾರತೀಯ ಜನತಾ ಪಕ್ಷದ ಸರಕಾರದ ಮೌನಸಮ್ಮತಿ ಇರಬೇಕೆಂದು ನಂಬಬೇಕಾಗುತ್ತದೆ 'ಸಂಯುಕ್ತ ಕರ್ನಾಟಕ'
4.12.90

....ಐದು ವರ್ಷಗಳ ಅವಧಿಗೆ ಚುನಾಯಿತವಾಗಿರುವ ಸಂಸ್ಥೆಗಳನ್ನು ನಾಲ್ಕೇ ವರ್ಷಗಳಲ್ಲಿ ಕುತ್ತಿಗೆ ಹಿಸುಕುವ ವಿಧಿಯನ್ನು ಆಳುವ ಪಕ್ಷದ ಅನೇಕರು ಸ್ವಾಗತಿಸಬಹುದೇನೋ. ಅದರಲ್ಲೂ ಜಿಲ್ಲಾ ಪರಿಷತ್ತು, ಮಂಡಲ ಪಂಚಾಯಿತಿಗಳಲ್ಲಿ ಪ್ರತಿಪಕ್ಷದ ಕಾರುಬಾರು ಇರುವ ಕಡೆಗಳಲ್ಲಿ ಈ ಪ್ರವೃತ್ತಿ ಬಲವಾಗಿ ಕಂಡು ಬರಬಹುದು.

ಸಂಪಾದಕೀಯ "ಕನ್ನಡಪ್ರಭ"
1.12.90

* ಜನತಾ ದಳ(ಎಸ್) ಅಧಿಕಾರವನ್ನೇನೋ ಪಡೆದು ಬಿಟ್ಟಿತು. ಆದರೆ ಅಧಿಕಾರ ಪಡೆದ ರೀತಿಯನ್ನು ಜನ ಸ್ವಾಗತಿಸಿಲ್ಲ ಎನ್ನುವುದು ದಳ(ಎಸ್)ದ ನಾಯಕರಿಗೆ ಗೊತ್ತು. ಕಾಂಗ್ರೆಸ್‌ನೊಂದಿಗೆ ಸ್ನೇಹವನ್ನು ಚಂದ್ರಶೇಖರ್ ಎಷ್ಟೇ ಸಮರ್ಥಿಸಿಕೊಳ್ಳಲಿ, ದೇಶದಲ್ಲಿ ಆ ಬಗ್ಗೆ ಉತ್ಸಾಹಕಂಡು ಬರುತ್ತಿಲ್ಲ ಎನ್ನುವುದನ್ನು ದಳ(ಎಸ್) ನಾಯಕರು ಗಮನಿಸಲೇಬೇಕು.

"ಸಂಕೇತ" ಲೇಖನದಲ್ಲಿ
2-8 ಡಿಸೆಂಬರ್ 1990

ಇಸ್ಲಾಮೀಕರಣಕ್ಕೆ ಅನುಕೂಲವಾಗುವ ಶಾಸನವನ್ನು ಏನಾದರೂ ಮಾಡಿ ಅಂಗೀಕರಿಸಲು ಐ.ಜೆ.ಐ ಯತ್ನಿಸುತ್ತಿದೆ. ಆದರೆ ಇದಕ್ಕೆ ದೇಶದ ಸಾರಿಗೆದಾರರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪ್ರಸ್ತಾಪಿತ ಕ್ರಮವನ್ನು ವಿರೋಧಿಸಿ ಅವರು ಇತ್ತೀಚೆಗೆ ಮುಷ್ಕರವನ್ನು ನಡೆಸಿದರು. ದೇಶಾದ್ಯಂತ ಯಶಸ್ವಿಯಾದ ಸಾರಿಗೆ ಮುಷ್ಕರದಿಂದ ಜನ ಜೀವನ ಅಸ್ತವ್ಯಸ್ತಗೊಂಡಿತ್ತು.

"ಸಂಯುಕ್ತ ಕರ್ನಾಟಕ"ದ ಲೇಖನದಲ್ಲಿ

Printed and published by P.Ramachandra Rao on behalf of communist Party of India (Marxist), Karnatak a State Committee, 354... Muneshwara Block, Palace Guttahalli, Bangalore - 560003 Phone ...